ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 30 ಮಂಗಳವಾರ 2024

ಸಂಪುಟ: 44 | ಸಂಚಿಕೆ: 282 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಇಬ್ಬರ ಬಲಿ ಪಡೆದ ರೋಡ್ ಹಂಪ್ಸ್

■ಮತ್ತಿಬ್ಬರಿಗೆ ಗಾಯ ■ಮೈಸೂರು ಪಾಲಿಕೆ ವತಿಯಿಂದ ಕಳೆದ ಶನಿವಾರ ರಾತ್ರಿ ಬೋಗಾದಿ ರಸ್ತೆಯಲ್ಲಿ ಮಾರಣಾಂತಿಕ ಅವೈಜ್ಞಾನಿಕ ರೋಡ್ ಹಂಪ್ಸ್ ನಿರ್ಮಿಸಲಾಗಿತ್ತು


ಶನಿವಾರ ರಾತ್ರಿ ತಲೆಎತ್ತಿದ್ದ ಅವೈಜ್ಞಾನಿಕ ರೋಡ್ ಹಂಪ್ಸ್


ದುರಂತ ಸಂಭವಿಸಿದ ನಂತರ ಕಾಟಾಚಾರಕ್ಕೆ ಬಿಳಿಪಟ್ಟಿ ಬಳಿದಿರುವುದು!

ಮೈಸೂರು, ಜ. 29(ಆರ್‌ಕೆ)– ಮೈಸೂರಿನ ಬೋಗಾದಿ ರಸ್ತೆಯಲ್ಲಿ, ಕುಕ್ಕರಹಳ್ಳಿ ಕೆರೆ ಮತ್ತು ಆಯಿಷ್ ಸರ್ಕಲ್ ನಡುವೆ ಪಾಲಿಕೆ ವಲಯ ಕಚೇರಿ–4ರ ವತಿಯಿಂದ ರಾತ್ರೋರಾತ್ರಿ ನಿರ್ಮಿಸಲಾದ ಮಾರಣಾಂತಿಕ, ಅವೈಜ್ಞಾನಿಕ ರೋಡ್ ಹಂಪ್ಸ್‌ಗೆ ಇಬ್ಬರು ಯುವಕರು ಬಲಿಯಾಗಿದ್ದಾರೆ. ಭಾನುವಾರ ರಾತ್ರಿ ಸಂಭವಿಸಿದ ಪ್ರತ್ಯೇಕ ಎರಡು ದುರಂತದಲ್ಲಿ ಇಬ್ಬರು ಸಾವನ್ನಪ್ಪಿ, ಮತ್ತಿಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ.

ಮೈಸೂರು ತಾಲೂಕು ಮರಟಿಕ್ಯಾತನಹಳ್ಳಿ ನಿವಾಸಿ ರಾಜೇಂದ್ರಪ್ರಸಾದ್ ಅವರ ಮಗ ಯಶವಂತ(27) ಹಾಗೂ ಹೆಚ್.ಡಿ.ಕೋಟೆ ತಾಲೂಕು ಕೃಷ್ಣಯ್ಯನಹುಂಡಿ ಗ್ರಾಮದ ಕುಮಾರ ಸಾವನ್ನಪ್ಪಿದ್ದು, ದುರ್ಗೇಶ್ ಮತ್ತು ಶಿವಂ ತೀವ್ರವಾಗಿ ಗಾಯಗೊಂಡಿದ್ದಾರೆ. ಅವರನ್ನು ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಕುಕ್ಕರಹಳ್ಳಿ ಕೆರೆ ಜಂಕ್ಷನ್‌ನಿಂದ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (ಎಐಐಎಸ್‌ಹೆಚ್) ಕಡೆಗೆ ಬೈಕ್‌ನಲ್ಲಿ ಹೋಗುತ್ತಿದ್ದ ಯಶವಂತ ಜನವರಿ 28ರ ಮುಂಜಾನೆ 2 ಗಂಟೆ ವೇಳೆಗೆ ಮಾನಸ ಗಂಗೋತ್ರಿ ಬಳಿ ಬೋಗಾದಿ ರಸ್ತೆಯಲ್ಲಿ ರಾತ್ರೋರಾತ್ರಿ ಗೊತ್ತು ಗುರಿ ಇಲ್ಲದೇ ಅವೈಜ್ಞಾನಿಕವಾಗಿ ನಿರ್ಮಿಸಿದ್ದ ಹಂಪ್ಸ್‌ನಲ್ಲಿ ನಿಯಂತ್ರಣ ಕಳೆದುಕೊಂಡು ಬಿದ್ದಿದ್ದರು. ತಲೆಗೆ ತೀವ್ರವಾಗಿ ಪೆಟ್ಟಾಗಿದ್ದ ಇವರನ್ನು ಕೆ.ಆರ್. ಆಸ್ಪತ್ರೆಗೆ ದಾಖಲಿಸಿ, ನಂತರ ಹೆಚ್ಚಿನ ●9ನೇ ಪುಟಕ್ಕೆ

ಅನುಮತಿ ಪಡೆಯದೇ ಅವೈಜ್ಞಾನಿಕ ರೋಡ್ ಹಂಪ್ಸ್ ಹಾಕಿದವರ ವಿರುದ್ಧ ಪ್ರಕರಣ ದಾಖಲು

ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್.ಜಾಹ್ನವಿ ನಿರ್ಧಾರ


ಎಸ್.ಜಾಹ್ನವಿ

ಮೈಸೂರು, ಜ.29(ಆರ್‌ಕೆ)–ಅನುಮತಿ ಪಡೆಯದೇ ಅವೈಜ್ಞಾನಿಕವಾಗಿ ರೋಡ್ ಹಂಪ್ಸ್ (ರಸ್ತೆ ಡುಬ್ಬ) ನಿರ್ಮಾಣ ಮಾಡಿ ಯುವಕರಿಬ್ಬರ ಸಾವಿಗೆ ಕಾರಣರಾಗಿರುವ ಪಾಲಿಕೆ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸುವುದಾಗಿ ಮೈಸೂರು ನಗರ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್.ಜಾಹ್ನವಿ ತಿಳಿಸಿದ್ದಾರೆ. ಶನಿವಾರ ಸಂಜೆ ಏಕಾಏಕಿ ಬೋಗಾದಿ ರಸ್ತೆಯ ಕುಕ್ಕರಹಳ್ಳಿ ಕೆರೆ ಮತ್ತು ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (ಎಐಐಎಸ್‌ಹೆಚ್) ಜಂಕ್ಷನ್ ನಡುವೆ ಹಾಗೂ ಹುಣಸೂರು ರಸ್ತೆ ಮತ್ತು ಬೋಗಾದಿ ರಸ್ತೆ ನಡುವೆ ಎಸ್‌ಜೆಸಿಇ ರಸ್ತೆಯಲ್ಲಿ ಯಾವುದೇ ಸೂಚನಾ ಫಲಕ, ಬಿಳಿ ಬಣ್ಣ ಬಳಿಯದೇ ●9ನೇ ಪುಟಕ್ಕೆ


ಮಂಡ್ಯದಲ್ಲಿ ಕಲ್ಲು ತೂರಾಟ ನಡೆಸಿದ ಕಾರ್ಯಕರ್ತರ ಮೇಲೆ ಪೊಲೀಸರು ಲಾಠಿ ಚಾರ್ಜ್ ನಡೆಸಿದರು.

ಹನುಮ ಧ್ವಜ ವಿವಾದ: ಹಿಂಸಾರೂಪ ಪಡೆದ ಬಿಜೆಪಿ, ಜೆಡಿಎಸ್, ಹಿಂದೂ ಪರ ಸಂಘಟನೆಗಳ ಪಾದಯಾತ್ರೆ

ಕಲ್ಲು ತೂರಾಟ, ಲಾಠಿ ಪ್ರಹಾರ

ಮಹಿಳಾ ಕಾರ್ಯಕರ್ತರು ಸೇರಿ ಹಲವರಿಗೆ ಗಾಯ, ಉದ್ವಿಗ್ನ ಸ್ಥಿತಿ

- ಕೆರಗೋಡಿನಿಂದ ಮಂಡ್ಯದವರೆಗೆ ಸಾವಿರಾರು ಕಾರ್ಯಕರ್ತರಿಂದ ನಡಿಗೆ
- ದಾರಿಯುದ್ದಕ್ಕೂ ಗಣಿಗ ರವಿ ಫ್ಲೆಕ್ಸ್ ಹರಿದು ಆಕ್ರೋಶ, ಹಲವೆಡೆ ಬೆಂಕಿ
- ಮಂಡ್ಯ ನಗರದಲ್ಲಿ ಫ್ಲೆಕ್ಸ್‌ಗೆ ತೂರಿದ ಕಲ್ಲು ಬಡಿದು ವ್ಯಕ್ತಿ ತಲೆಗೆ ಪೆಟ್ಟು
- ಮಹಾವೀರ, ಸಂಜಯ ವೃತ್ತದಲ್ಲಿ ಫ್ಲೆಕ್ಸ್ ಹರಿಯುವಾಗ ಲಾಠಿಚಾರ್ಜ್
- ಮಹಾವೀರ ವೃತ್ತದಲ್ಲಿ ಬೈಕ್‌ಗಳನ್ನು ಬಿಟ್ಟು ಓಡಿದ ಕಾರ್ಯಕರ್ತರು
- ಪಾದಯಾತ್ರೆಯಲ್ಲಿ ಸಿ.ಟಿ.ರವಿ, ಜನಾರ್ದನರೆಡ್ಡಿ, ದಳಪತಿಗಳು ಭಾಗಿ

ಮಂಡ್ಯ,ಜ.29(ಮೋಹನ್‌ರಾಜ್)– ತಾಲೂಕಿನ ಕೆರಗೋಡು ಗ್ರಾಮದಲ್ಲಿ ಭಾನುವಾರ ಹನುಮ ಧ್ವಜ ತೆರವುಗೊಳಿಸಿ, ಪ್ರತಿಭಟನಾಕಾರರ ಮೇಲೆ ಲಾಠಿ ಚಾರ್ಜ್ ನಡೆಸಿದ್ದನ್ನು ಖಂಡಿಸಿ ಸೋಮವಾರ ಜೆಡಿಎಸ್, ಬಿಜೆಪಿ, ಭಜರಂಗದಳ ಹಾಗೂ ಹಿಂದೂಪರ ಕಾರ್ಯಕರ್ತರು ಕೆರಗೋಡಿನಿಂದ ಮಂಡ್ಯ ಡಿಸಿ ಕಚೇರಿವರೆಗೆ ಹಮ್ಮಿಕೊಂಡಿದ್ದ ಪಾದಯಾತ್ರೆ ಹಿಂಸಾಚಾರಕ್ಕೆ ತಿರುಗಿದ್ದರಿಂದ ಲಾಠಿಚಾರ್ಜ್ ನಡೆದು ಪರಿಸ್ಥಿತಿ ಮತ್ತಷ್ಟು ಉದ್ವಿಗ್ನಗೊಂಡಿತ್ತು.

ಹನುಮ ಧ್ವಜ ತೆರವುಗೊಳಿಸಬಾರದೆಂದು ಕಳೆದ ಶನಿವಾರ ರಾತ್ರಿಯಿಂದ ಕೆರಗೋಡು ಗ್ರಾಮದಲ್ಲಿ ಧ್ವಜಸ್ತಂಭದ ಬಳಿ ಪ್ರತಿಭಟನೆ ಆರಂಭವಾಗಿದ್ದು, ಭಾರೀ ವಿರೋಧದ ನಡುವೆಯೂ ಭಾನುವಾರ ಬೆಳಿಗ್ಗೆ ಹನುಮ ಧ್ವಜವನ್ನು ಪೊಲೀಸರು ತೆರವುಗೊಳಿಸಿದ್ದರು. ಮತ್ತೆ ಹನುಮ ಧ್ವಜ ಹಾರಿಸುವಂತೆ ಪ್ರತಿಭಟನೆ ತೀವ್ರಗೊಂಡ ಹಿನ್ನೆಲೆಯಲ್ಲಿ ●10ನೇ ಪುಟಕ್ಕೆ


ಕೆರಗೋಡಿನಲ್ಲಿ ಹನುಮ ಧ್ವಜ ತೆರವುಗೊಳಿಸಿದ್ದನ್ನು ಖಂಡಿಸಿ, ಹಿಂದೂಪರ ಸಂಘಟನೆಗಳು ಸೋಮವಾರ ಪಾದಯಾತ್ರೆ ನಡೆಸಿದವು.

ರಾಜ್ಯ ಉಸ್ತುವಾರಿಯಿಂದ ಸಂತೋಷ್, ಅರುಣ್ ಸಿಂಗ್‌ಗೆ ಗೇಟ್‌ಪಾಸ್; ವಿಧಾನಸಭೆ ಚುನಾವಣೆ ಸೋಲಿನ ನಂತರ ಎಚ್ಚೆತ್ತ ಬಿಜೆಪಿ ವರಿಷ್ಠರು

ಭೂಪೆಂದರ್ ಯಾದವ್‌ಗೆ ರಾಜ್ಯ ಪೂರ್ಣ ಉಸ್ತುವಾರಿ

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಮಹತ್ವದ ನಿರ್ಣಯ


ಭೂಪೆಂದರ್

ಬೆಂಗಳೂರು, ಜ.29(ಕೆಎಂಶಿ)– ಕರ್ನಾಟಕ ವಿಧಾನಸಭಾ ಚುನಾವಣೆ ಸೋಲಿನ ನಂತರ ಎಚ್ಚೆತ್ತುಕೊಂಡ ಬಿಜೆಪಿ ವರಿಷ್ಠರು, ರಾಜ್ಯ ಉಸ್ತುವಾರಿ ಹೊಣೆ ಹೊತ್ತಿದ್ದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್ ಹಾಗೂ ಅರುಣ್ ಸಿಂಗ್ ಅವರಿಗೆ ಗೇಟ್‌ಪಾಸ್ ನೀಡಿದ್ದಾರೆ. ಲೋಕಸಭಾ ಚುನಾವಣೆ ಹೊಸ್ತಿಲಲ್ಲಿ ಈ ಮಹತ್ತರ ಬದಲಾವಣೆಯ ನಿಲುವು ತೆಗೆದುಕೊಂಡಿರುವ ದೆಹಲಿ ನಾಯಕರು ಈಗ ಎಲ್ಲ ಜವಾಬ್ದಾರಿಯನ್ನು ಕೇಂದ್ರ ಸಚಿವ ಭೂಪೆಂದರ್ ಯಾದವ್ ಅವರಿಗೆ ನೀಡಿದ್ದಾರೆ. ರಾಜ್ಯ ಉಸ್ತುವಾರಿ ಹೊಣೆ ಹೊತ್ತಿದ್ದ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್‌ಸಿಂಗ್ ಅವರನ್ನು ಬದಲಾವಣೆ ಮಾಡದಿದ್ದರೂ ಕರ್ನಾಟಕದ ಎಲ್ಲಾ ಚಟುವಟಿಕೆಗಳಿಂದ ದೂರ ಇರಿಸಿದ್ದಾರೆ. ವಿಧಾನಸಭಾ ಚುನಾವಣೆಯ ಸೋಲಿಗೆ ಸಂತೋಷ್ ಹಾಗೂ ಅರುಣ್ ಸಿಂಗ್ ●9ನೇ ಪುಟಕ್ಕೆ

ಮೋದಿ ಮತ್ತೆ ಪ್ರಧಾನಿಯಾದರೆ ಇದುವೇ ನನ್ನ ಕೊನೆಯ ಚುನಾವಣೆ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಘೋಷಣೆ!

ಭುವನೇಶ್ವರ್, ಜ.29– ಲೋಕಸಭಾ ಚುನಾವಣೆ ಸಮೀಪಿಸುತ್ತಿದ್ದಂತೆ ಇಂಡಿಯಾ ಮೈತ್ರಿ ಕೂಟ ಒಡೆದು ಹೋಳಾಗಿದೆ. ಆದರೆ ಗೆಲುವಿಗಾಗಿ ಶತಾಯಗತಾಯ ಪ್ರಯತ್ನಿಸುತ್ತಿರುವ ಕಾಂಗ್ರೆಸ್ ಇದೀಗ ಎರಡು ದಶಕಗಳ ಹಿಂದಿನ ಕುತೂಹಲಕಾರಿ ರಾಜಕೀಯ ಡೈಲಾಗನ್ನು ಮತ್ತೆ ಪ್ರಯೋಗಿಸಿದೆ. ಒಡಿಶಾದ ಭುವನೇಶ್ವರದಲ್ಲಿನ ಸಮಾವೇಶದಲ್ಲಿ ಮಾತನಾಡಿದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಈ ಬಾರಿ ನರೇಂದ್ರ ಮೋದಿ ಮತ್ತೆ ಪ್ರಧಾನಿಯಾದರೆ ಇದುವೇ ನನ್ನ ಕೊನೆಯ ಚುನಾವಣೆ. ಮೋದಿ ಅಧಿಕಾರ ಮುಂದುವರಿದರೆ, ಚುನಾವಣಾ ರಾಜಕೀಯದಿಂದ ದೂರ ಉಳಿಯುವುದಾಗಿ ಖರ್ಗೆ ಘೋಷಿಸಿದ್ದಾರೆ. ನರೇಂದ್ರ ಮೋದಿ ಮತ್ತೆ ಪ್ರಧಾನಿಯಾದರೆ, ಈ ದೇಶದಲ್ಲಿ ಪ್ರಜಾಪ್ರಭುತ್ವ ಇರುವುದಿಲ್ಲ. ಚುನಾವಣೆ ಇಲ್ಲವೇ ಇಲ್ಲ. ಮೋದಿ ಸರ್ವಾಧಿಕಾರ ಪ್ರಾಬಲ್ಯ ಹೆಚ್ಚಾಗಲಿದೆ. ಹೀಗಾಗಿ ಮೋದಿ ಮತ್ತೆ ಪ್ರಧಾನಿಯಾದರೆ ನಾನು ರಾಜಕಾರಣದಿಂದ ನಿವೃತ್ತಿ ಪಡೆಯುತ್ತೇನೆ. ಮೋದಿಯಿಂದ ದೇಶವೇ ಸರ್ವನಾಶವಾಗಲಿದೆ ಅನ್ನೋ ಎಚ್ಚರಿಕೆಯನ್ನೂ ನೀಡಿದ್ದಾರೆ. ಕೇಂದ್ರ ಬಿಜೆಪಿ ಸರ್ಕಾರ ಇಡಿ ಬಳಸಿ ಎಲ್ಲರಿಗೂ ನೋಟಿಸ್ ನೀಡುತ್ತಿದೆ. ಇಡಿಗೆ ಹೆದರಿ ಹಲವು ನಾಯಕರು ಬಿಜೆಪಿ ಸೇರುತ್ತಿದ್ದಾರೆ. ಪಕ್ಷಗಳನ್ನೇ ಬೆದರಿಸುತ್ತಿದ್ದಾರೆ. ಇದರಿಂದ ಇಂಡಿಯಾ ಒಕ್ಕೂಟದಿಂದ ಕೆಲ ಪಕ್ಷಗಳು ಬಿಜೆಪಿ ಜೊತೆ ಸೇರಿಕೊಳ್ಳುತ್ತಿದೆ. ಕೆಲ ಪಕ್ಷಗಳು ಮೈತ್ರಿಯಿಂದ ದೂರ ಉಳಿಯುತ್ತಿದೆ. ದೇಶದ ನಾಗರಿಕರಿಗೆ ಇದು ●9ನೇ ಪುಟಕ್ಕೆ



ಕರ್ನಾಟಕದ ನಾಲ್ಕು ಸೇರಿದಂತೆ ರಾಜ್ಯಸಭೆಯ 56 ಸ್ಥಾನಗಳಿಗೆ ಫೆ.27ರಂದು ಚುನಾವಣೆ

ಬೆಂಗಳೂರು, ಜ.29(ಕೆಎಂಶಿ)– ಕರ್ನಾಟಕದ ನಾಲ್ಕು ಸೇರಿದಂತೆ ದೇಶಾದ್ಯಂತ ವಿವಿಧ ರಾಜ್ಯಗಳಿಂದ ರಾಜ್ಯಸಭೆಯ ಒಟ್ಟು 56 ಸ್ಥಾನಗಳಿಗೆ ಫೆಬ್ರವರಿ 27ರಂದು ಚುನಾವಣೆ ನಡೆಯಲಿದೆ. ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಸೇರಿದಂತೆ ತೆರವಾಗಲಿರುವ ನಾಲ್ಕು ರಾಜ್ಯಸಭಾ ಸ್ಥಾನಕ್ಕೆ ಫೆಬ್ರವರಿ 27ರಂದು ಚುನಾವಣೆ ನಡೆಸಲು ಕೇಂದ್ರ ಚುನಾವಣಾ ಆಯೋಗ ವೇಳಾಪಟ್ಟಿ ಪ್ರಕಟಿಸಿದೆ.


ರಾಜ್ಯ ವಿಧಾನಸಭೆಯಿಂದ ಆಯ್ಕೆಯಾಗಿದ್ದ ರಾಜ್ಯಸಭೆಯ ಈ ನಾಲ್ಕು ಸ್ಥಾನಗಳ ಸದಸ್ಯರ ಅವಧಿ ಬರುವ ಏಪ್ರಿಲ್ 2ರಂದು ಕೊನೆಗೊಳ್ಳಲಿದೆ. ಅದಕ್ಕೂ ಮುನ್ನವೇ ●9ನೇ ಪುಟಕ್ಕೆ

ಮೈಸೂರು ಹೊರವಲಯದ ನಂಜನಗೂಡು ರಸ್ತೆಯಲ್ಲಿ ಕಾರು ಡಿಕ್ಕಿ ಹೊಡೆದು ಹುಲಿ ಸಾವು

● ಮೈಸೂರು ಸುತ್ತಮುತ್ತ ಅಲೆದಾಡುತ್ತಿರುವ ಹುಲಿಗಳು; ಅದೃಷ್ಟವಶಾತ್ ಎಲ್ಲಿಯೂ ಜನರ ಮೇಲೆ ದಾಳಿ ಮಾಡಿಲ್ಲ ● ಸರಗೂರು ಸಮೀಪದ ಚಿಕ್ಕನಹಳ್ಳಿ ಮೀಸಲು ಅರಣ್ಯ ಪ್ರದೇಶದ ಬಳಿ ಕ್ಯಾಮರಾ ಟ್ರ್ಯಾಪ್‌ನಲ್ಲಿ ಈ ಹುಲಿ ಸೆರೆ ಸಿಕ್ಕಿತ್ತು ● ತಾಯಿಯಿಂದ ಬೇರ್ಪಟ್ಟಿದ್ದ ನಾಲ್ಕು ಮರಿಗಳಲ್ಲಿ ಗಂಡು ಮರಿ ಮಂಡಕಳ್ಳಿ ವಿಮಾನ ನಿಲ್ದಾಣದ ಬಳಿ ಅಪಘಾತದಲ್ಲಿ ಕಳೆದ ರಾತ್ರಿ ಬಲಿಯಾಗಿದೆ

ಮೈಸೂರು, ಜ.29(ಎಂಟಿವೈ)– ಮೈಸೂರು–ನಂಜನಗೂಡು ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಡಕಳ್ಳಿ ವಿಮಾನ ನಿಲ್ದಾಣದ ಬಳಿ ಕಾರು ಡಿಕ್ಕಿ ಹೊಡೆದ ಪರಿಣಾಮ ಎರಡು ವರ್ಷದ ಗಂಡು ಹುಲಿ ಸ್ಥಳದಲ್ಲೇ ಸಾವನ್ನಪ್ಪಿದೆ.

ಮೈಸೂರು ನಗರದ ಸುತ್ತಮುತ್ತ ಕಳೆದ ಎರಡು ತಿಂಗಳಿಂದ ನೆಲೆ ಕಂಡುಕೊಳ್ಳಲು ಎರಡು ವರ್ಷದ ನಾಲ್ಕು ಹುಲಿಗಳು ಅಲೆದಾಡುತ್ತಿದ್ದು, ಅವುಗಳಲ್ಲಿ ಗಂಡು ಹುಲಿ ಅಪಘಾತದಲ್ಲಿ ಉಸಿರು ಚೆಲ್ಲಿದೆ. ಭಾನುವಾರ (ಜ.28) ರಾತ್ರಿ 11 ಗಂಟೆಯಿಂದ 12 ಗಂಟೆಯೊಳಗೆ ಮೈಸೂರಿನಿಂದ ನಂಜನಗೂಡು ಮಾರ್ಗವಾಗಿ ಚಾಮರಾಜನಗರಕ್ಕೆ ಹೋಗುತ್ತಿದ್ದ (ಕೆಎ.51–ಡಿ.1607) ಕಾರು ಮಂಡಕಳ್ಳಿ ವಿಮಾನ ನಿಲ್ದಾಣದ ಬಳಿ ರಸ್ತೆಯಲ್ಲಿ ಅಡ್ಡಬಂದ ಹುಲಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ರಸ್ತೆಯ ಪಕ್ಕದ ಪೊದೆಗೆ ಹಾರಿ ಬಿದ್ದ ಹುಲಿ ಕೆಲ ಸಮಯ ನೋವಿನಿಂದ ನರಳಾಡಿ ಕೊನೆಯುಸಿರೆಳೆದಿದೆ. ಮೈಸೂರು–ನಂಜನಗೂಡು ರಾಷ್ಟ್ರೀಯ ಹೆದ್ದಾರಿ 766ರಲ್ಲಿ ಹುಲಿಯು ನಂಜನಗೂಡು ಮಾರ್ಗದಿಂದ ಮೈಸೂರಿಗೆ ಬರುವ ಪಥವನ್ನು ಸುರಕ್ಷಿತವಾಗಿ ದಾಟಿದೆ. ಮತ್ತೊಂದು ಪಥ ದಾಟುವ ವೇಳೆ ಕಾರಿಗೆ ಸಿಲುಕಿದೆ. ತಕ್ಷಣ ಇತರೆ ವಾಹನಗಳ ಪ್ರಯಾಣಿಕರು ಕೂಡಲೇ ಪೊಲೀಸ್ ಹಾಗೂ ಅರಣ್ಯ ಸಿಬ್ಬಂದಿ ಗಮನಕ್ಕೆ ತಂದಿದ್ದಾರೆ. ಅಪಘಾತದಲ್ಲಿ ಕಾರಿನ ಮುಂಭಾಗಕ್ಕೆ ಹಾನಿಯಾಗಿದೆ. ಅಲ್ಲದೆ, ●10ನೇ ಪುಟಕ್ಕೆ




ಮಂಡಕಳ್ಳಿ ವಿಮಾನ ನಿಲ್ದಾಣದ ಬಳಿ ಮೈಸೂರು–ನಂಜನಗೂಡು ಮುಖ್ಯರಸ್ತೆಯಲ್ಲಿ ಕಾರು ಡಿಕ್ಕಿಯಾಗಿ ಮೃತಪಟ್ಟ ಹುಲಿ. ಹುಲಿಗೆ ಡಿಕ್ಕಿ ಹೊಡೆದು ಜಖಂಗೊಂಡಿರುವ ಕಾರು

ಹುಣಸೂರಲ್ಲಿ ಹಿಟ್ ಅಂಡ್ ರನ್‌ಗೆ ಚಿರತೆ ಮರಿ ಬಲಿ

ಅಯ್ಯಪ್ಪಸ್ವಾಮಿ ಗುಡ್ಡದ ಬಳಿ ಮುಂಜಾನೆ ನಡೆದ ಘಟನೆ

ಮೈಸೂರು,ಜ.29(ಎಂಟಿವೈ)– ಮೈಸೂರಲ್ಲಿ ಕಾರು ಡಿಕ್ಕಿಯಾಗಿ ಹುಲಿ ಸತ್ತರೆ, ಹುಣಸೂರಲ್ಲಿ ಅಪರಿಚಿತ ವಾಹನ ಡಿಕ್ಕಿ ಹೊಡೆದು ಒಂದೂವರೆ ವರ್ಷದ ಚಿರತೆ ಮರಿ ಮೃತಪಟ್ಟಿದೆ.

ಬೆಂಗಳೂರು–ಬಂಟ್ವಾಳ ಹೆದ್ದಾರಿಯಲ್ಲಿ ಹುಣಸೂರು ಪಟ್ಟಣದ ಅಯ್ಯಪ್ಪಸ್ವಾಮಿ ಗುಡ್ಡದ ತಿರುವಿನ ಬಳಿ ರಸ್ತೆ ದಾಟುತ್ತಿದ್ದ ಚಿರತೆ ಮರಿಗೆ ಮುಂಜಾನೆ ಅಪರಿಚಿತ ವಾಹನ ಡಿಕ್ಕಿ ಹೊಡೆದು ಪರಾರಿಯಾಗಿದೆ. ಮುಂಜಾನೆ ಮಂಜುಕವಿದಿದ್ದರಿಂದ ಚಿರತೆ ಮರಿ ರಸ್ತೆ ದಾಟುತ್ತಿರುವುದು ವಾಹನ ಚಾಲಕನಿಗೆ ಕಾಣದೆ ಅಪಘಾತ ಸಂಭವಿಸಿರ ಬಹುದು ಎಂದು ಅಂದಾಜಿಸಲಾಗಿದೆ. ●10ನೇ ಪುಟಕ್ಕೆ

ಡಾ.ಅಂಬೇಡ್ಕರ್ ನಾಮಫಲಕ ಅಳವಡಿಸುವ ವಿಚಾರದಲ್ಲಿ ಗುಂಪು ಘರ್ಷಣೆ

ಮೂವರು ಪೊಲೀಸರು ಸೇರಿ 30ಕ್ಕೂ ಅಧಿಕ ಮಂದಿಗೆ ಗಾಯ

- ನಂಜನಗೂಡು ತಾಲೂಕು ಹಲ್ಲರೆ ಗ್ರಾಮದಲ್ಲಿ ಘಟನೆ
- ಗ್ರಾಮದಲ್ಲಿ ಉದ್ವಿಗ್ನ ಪರಿಸ್ಥಿತಿ; ಎಸ್ಪಿ ನೇತೃತ್ವದಲ್ಲಿ ಸರ್ಪಗಾವಲು




ಗಾಯಾಳುಗಳನ್ನು ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದೊಯ್ಯುತ್ತಿರುವುದು. ಬಲಚಿತ್ರದಲ್ಲಿ ಗಾಯಗೊಂಡಿರುವ ಸಬ್‌ಇನ್ಸ್‌ಪೆಕ್ಟರ್ ಗೋಪಾಲಕೃಷ್ಣ.

ನಂಜನಗೂಡು/ಮಲ್ಲುಂಡಿ, ಜ. 29– ಡಾ.ಬಿ.ಆರ್.ಅಂಬೇಡ್ಕರ್ ನಾಮಫಲಕ ಅಳವಡಿಸುವ ವಿಚಾರದಲ್ಲಿ ಎರಡು ಗುಂಪಿನ ನಡುವೆ ಘರ್ಷಣೆ ನಡೆದು ಸರ್ಕಲ್ ಇನ್ಸ್‌ಪೆಕ್ಟರ್ ಸೇರಿದಂತೆ ಮೂವರು ಪೊಲೀಸರು ಹಾಗೂ 30ಕ್ಕೂ ಹೆಚ್ಚು ಮಂದಿ ಗಾಯಗೊಂಡ ಘಟನೆ ನಂಜನಗೂಡು ತಾಲೂಕು ಹಲ್ಲರೆ ಗ್ರಾಮದಲ್ಲಿ ಸೋಮವಾರ ಸಂಜೆ ನಡೆದಿದ್ದು, ಗ್ರಾಮದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ.

ವಿಷಯ ತಿಳಿಯುತ್ತಿದ್ದಂತೆಯೇ ಜಿಲ್ಲಾ ಎಸ್ಪಿ ಸೀಮಾ ಲಾಟ್ಕರ್, ಅಡಿಷನಲ್ ಎಸ್ಪಿ ನಂದಿನಿ, ನಂಜನಗೂಡು ಡಿವೈಎಸ್ಪಿ ಗೋವಿಂದರಾಜು ಅವರುಗಳು ಹೆಚ್ಚಿನ ಪೊಲೀಸ್ ಪಡೆಯೊಂದಿಗೆ ಗ್ರಾಮಕ್ಕೆ ದೌಡಾಯಿಸಿದ್ದು, ●10ನೇ ಪುಟಕ್ಕೆ

ಪ್ರಪಂಚದ ಮೊದಲ ಧಾರ್ಮಿಕ ಸಂಸತ್ತು ಅನುಭವ ಮಂಟಪ ವಿಶ್ವಕ್ಕೇ ಮಾದರಿ



ಮೈಸೂರು, ಜ.29–ಪ್ರಪಂಚದ ಮೊದಲ ಧಾರ್ಮಿಕ ಸಂಸತ್ತು ಅನುಭವ ಮಂಟಪ ವಿಶ್ವಕ್ಕೇ ಮಾದರಿ ಎಂದು ಬೆಂಗಳೂರು ಲಾಲ್‌ಬಾಗ್ ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಡಾ.ಎಂ.ಜಗದೀಶ್ ಹೇಳಿದರು.

ಶರಣು ವಿಶ್ವವಚನ ಫೌಂಡೇಷನ್ ನಿರ್ಮಾಣದ ಅನುಭವ ಮಂಟಪ ನಾಟಕದ ಪೋಸ್ಟರ್ ಅನ್ನು ಸಸ್ಯೋದ್ಯಾನದ ಗಾಜಿನ ಮನೆಯ ಒಳಗೆ ವಿವಿಧ ಪುಷ್ಪಗಳಿಂದ ಅಲಂಕೃತವಾದ ಬಸವಣ್ಣನವರ ಪ್ರತಿಮೆಯ ಬಳಿ ಬಿಡುಗಡೆ ಮಾಡಿ ಮಾತನಾಡಿದ ಅವರು ಕನ್ನಡ ಭಾಷೆಗೆ ಜಾಗತಿಕ ಮನ್ನಣೆ ದೊರೆಯಬೇಕಾದರೆ ಬಸವಾದಿ ಪ್ರಥಮರ ವಚನ ಸಾಹಿತ್ಯವೇ ಕಾರಣ. ಅಂತಹ ವಚನ ಸಾಹಿತ್ಯದ ಬಗ್ಗೆ ಮತ್ತು ಶರಣರ ಬಗ್ಗೆ ಜನರಿಗೆ ಅರಿವು ಮೂಡಿಸುವುದಕ್ಕೋಸ್ಕರ ವಿಶ್ವದಲ್ಲಿಯೇ ಮೂರನೇ ದೊಡ್ಡ ಉದ್ಯಾನವನವಾದ ಲಾಲ್‌ಬಾಗ್‌ನಲ್ಲಿ ಶರಣ ಸಂಕುಲದ ವಿವಿಧ ಮಾದರಿಗಳನ್ನು ನಿರ್ಮಿಸಿ ವೀಕ್ಷಿಸಲು ಅನುವು ಮಾಡಿಕೊಡಲಾಗಿದೆ. ಜೊತೆಗೆ ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಮುಖ್ಯಮಂತ್ರಿಗಳು ಘೋಷಣೆ ಮಾಡಿದ ಸ್ಥಳ ಕೂಡ ಲಾಲ್‌ಬಾಗ್ ಆಗಿರುವುದು ವಿಶೇಷ. ಸಸ್ಯೋದ್ಯಾನಕ್ಕೆ ಭೇಟಿ ನೀಡುವ ಯುವಕರನ್ನು ಗಮನದಲ್ಲಿಟ್ಟುಕೊಂಡು ಶರಣ ಸಂಕುಲದ ಫಲಪುಷ್ಪ ಪ್ರದರ್ಶನ ಏರ್ಪಡಿಸಿದುದರ ನಿಮಿತ್ತ ಕರ್ನಾಟಕ ರಾಜ್ಯ, ಇತರೆ ಹೊರ ರಾಜ್ಯ ಮತ್ತು ವಿದೇಶಿಗರು ಕೂಡ ಲಕ್ಷಾಂತರ ಸಂಖ್ಯೆಯಲ್ಲಿ ವೀಕ್ಷಿಸಿರುವುದು ಹೆಮ್ಮೆ ಅನಿಸಿದೆ. ಇಂತಹ ಶರಣ ಸಂಕುಲವನ್ನು ಲೋಕಕ್ಕೆ ತಲುಪಿಸಲು ವಿಭಿನ್ನ ರೀತಿಯಲ್ಲಿ ಚಟುವಟಿಕೆಗಳನ್ನು ಕೈಗೊಳ್ಳುತ್ತಿರುವ ಶರಣು ವಿಶ್ವವಚನ ಫೌಂಡೇಷನ್ ಅನುಭವ ಮಂಟಪ ಎಂಬ ನಾಟಕವನ್ನು ಅಂತರ್ಜಾಲದ ಮೂಲಕ ಲೋಕಾರ್ಪಣೆ ಮಾಡುತ್ತಿರುವುದು ಸಂತಸದ ವಿಷಯ. ಅನುಭವ ಮಂಟಪ ನಾಟಕವನ್ನು ನೋಡಿ ಅದರಲ್ಲಿ ಇರುವ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಕರೆ ನೀಡಿದರು. ಈ ಸಂದರ್ಭದಲ್ಲಿ ಕುರುಬರಹುಂಡಿ ವಿರಕ್ತ ಮಠದ ಶ್ರೀ ಇಮ್ಮಡಿ ಮಹಾಂತಸ್ವಾಮಿಗಳು, ಬೇಬಿಬೆಟ್ಟ ಶ್ರೀ ರಾಮಯೋಗೀಶ್ವರ ಮಠದ ಶ್ರೀ ಶಿವಬಸವ ಸ್ವಾಮಿಗಳು, ಲಾಲ್‌ಬಾಗ್ ತೋಟಗಾರಿಕೆ ಉಪನಿರ್ದೇಶಕಿ ಜಿ.ಕುಸುಮ, ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕರಾದ ವಚನ ಕುಮಾರಸ್ವಾಮಿ, ರೂಪಕುಮಾರಸ್ವಾಮಿ, ವಚನ ಚಿಂತಕ ಎಚ್.ಸಿ.ಉಮೇಶ್, ಬೆಂಗಳೂರಿನ ಶರಣು ವಿಶ್ವವಚನ ಫೌಂಡೇಷನ್ ಅಧ್ಯಕ್ಷ ಕಣ್ಣೂರು ಕುಮಾರಸ್ವಾಮಿ, ಸಂಚಾಲಕ ರುದ್ರಪ್ಪ, ಓಂಕಾರ ಚೊಂಡಿ, ನಾಗರಾಜ ಘಂಟಿ, ಲಲಿತ, ವಚನ, ಸಿ.ಕೆ ಗಿರಿಜೇಶ್, ಶ್ರೀಶಾಂತ್ ಉಪಸ್ಥಿತರಿದ್ದರು.



ಮೈಸೂರು ವಿವಿ ಸಂಜೆ ಕಾಲೇಜಲ್ಲಿ ಸೋಮವಾರ ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ ಹೊರತಂದಿರುವ 2024ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ, ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಸಮಾರಂಭದಲ್ಲಿ ಶಾಸಕರಾದ ದರ್ಶನ್ ಧ್ರುವನಾರಾಯಣ್, ಕೆ. ಹರೀಶ್‌ಗೌಡ, ಲೇಖಕ ಪ್ರೊ. ಎಸ್. ಶಿವರಾಜಪ್ಪ, ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಇತರರು ಉಪಸ್ಥಿತರಿದ್ದರು.

ಸುತ್ತೂರು ಕ್ಷೇತ್ರದಲ್ಲಿ 'ರಂಗ ನಡಿಗೆ–ಹಳ್ಳಿಹೈಕಳ ಕಡೆಗೆ' ಜಾನಪದ ಮತ್ತು ರಂಗಭೂಮಿ ತರಬೇತಿ ಶಿಬಿರ



ಸುತ್ತೂರು. ಜ.29–ಸುತ್ತೂರು ಕ್ಷೇತ್ರದಲ್ಲಿ ಜೆಎಸ್‌ಎಸ್ ಉಚಿತ ವಸತಿ ಶಾಲೆಯ ವಿದ್ಯಾರ್ಥಿಗಳಿಗೆ ಮೈಸೂರಿನ ರಂಗಾಂತರಂಗ ಹಾಗೂ ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಯೋಗದೊಂದಿಗೆ 'ರಂಗ ನಡಿಗೆ–ಹಳ್ಳಿಹೈಕಳ ಕಡೆಗೆ' ವಿಷಯ ಕುರಿತು ಜಾನಪದ ಮತ್ತು ರಂಗಭೂಮಿ ತರಬೇತಿ ಶಿಬಿರಕ್ಕೆ ಚಾಲನೆ ನೀಡಲಾಯಿತು.


ಮೈಸೂರಿನ ಸಮಾಜ ಸೇವಕರಾದ ಶ್ರೀಮತಿ ಸುಧಾ ಮೃತ್ಯುಂಜಯಪ್ಪನವರು ಶಿಬಿರವನ್ನು ಉದ್ಘಾಟಿಸಿ ಮಾತನಾಡಿ, ರಂಗಕಲೆಯಲ್ಲಿ ನಾಟಕ ಒಂದು ಭಾಗ ಇದರಲ್ಲಿ ಐತಿಹಾಸಿಕ, ಬೀದಿನಾಟಕ, ಪೌರಾಣಿಕ ಎಂಬ ಹಲವಾರು ಪ್ರಾಕಾರಗಳಿವೆ. ಹಳ್ಳಿಯಲ್ಲಿರುವ ಮಕ್ಕಳಿಗೆ ರಂಗಭೂಮಿಯಲ್ಲಿ ತೊಡಗಿಸಿಕೊಳ್ಳಲು ಮೈಸೂರಿನ ರಂಗಾಂತರಂಗ ಸಂಸ್ಥಾಪಕ ಕೀರ್ತಿರಾಜ್ ಮುಂದಾಗಿರುವುದು ಸಂತೋಷದಾಯಕ ವಿಚಾರ. ಸುತ್ತೂರಿನ ಜೆಎಸ್‌ಎಸ್ ವಸತಿ ಶಾಲೆಯ ಮಕ್ಕಳಲ್ಲಿ ರಂಗಕಲೆಯನ್ನು ಬೆಳೆಸುವ ಈ ಕಾರ್ಯಕ್ರಮವು ಮಕ್ಕಳು ಉತ್ತಮ ಪ್ರಜೆಗಳಾಗಿ ಬೆಳೆಯಲು ಸಹಾಯಕವಾಗಿದೆ ಎಂದು ಅಭಿಪ್ರಾಯಪಟ್ಟರು.

ಅಧ್ಯಕ್ಷತೆ ವಹಿಸಿದ್ದ ಸುತ್ತೂರಿನ ಜೆಎಸ್‌ಎಸ್ ಸಂಸ್ಥೆಗಳ ಸಂಯೋಜನಾಧಿಕಾರಿ ಜಿ.ಎಲ್. ತ್ರಿಪುರಾಂತಕ ಮಾತನಾಡಿ, ಶ್ರದ್ಧಾ ಆಸಕ್ತಿ ಇದ್ದರೆ ಸಾಮಾನ್ಯ ಮನುಷ್ಯನೂ ಉನ್ನತ ವ್ಯಕ್ತಿಯಾಗಬಹುದು. ಆ ಸಾಧನೆಯ ಪಥ ನಿಮ್ಮದಾಗಲಿ. ನಾಟಕ ಎಂಬುದು ಒಂದು ಅದ್ಭುತ ಕಲೆ. ಅದು ಒಬ್ಬ ಸಾಮಾನ್ಯ ವ್ಯಕ್ತಿಯನ್ನು ಪರಿಪೂರ್ಣ ವ್ಯಕ್ತಿಯನ್ನಾಗಿ ರೂಪಿಸುವುದರ ಜೊತೆಗೆ ಗ್ರಹಿಕಾ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಈ ಕಲೆಯು ನಮ್ಮ ಭಾವನೆಯನ್ನು ಮನಮುಟ್ಟುವಂತೆ ಹೇಳಲು ಒಂದು ಉತ್ತಮ ಮಾಧ್ಯಮವಾಗಿದೆ ಎಂದು ನುಡಿದರು.

ಮೈಸೂರಿನ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ ಮಾತನಾಡಿ, ನಾಲ್ಕು ಸಾವಿರ ಮಕ್ಕಳಿರುವ ಪುಟ್ಟ ಭಾರತದಂತಿರುವ ಈ ಸುಂದರ ಕ್ಷೇತ್ರದಲ್ಲಿ ಅರಳುತ್ತಿರುವ ಹೂಗಳಿಗೆ ಈ ಕಾರ್ಯಕ್ರಮವನ್ನು ಆಯೋಜಿಸಿರುವುದು ತುಂಬಾ ಸಂತೋಷವಾಗಿದೆ. ನಾಟಕ ಕಲೆ ಎಂಬುದು ದೈವೀ ಕಲೆ, ಅದು ಪರಿಪೂರ್ಣವಾಗಲು ತರಬೇತಿ ಬಹಳ ಅವಶ್ಯಕ ಎಂದು ತಿಳಿಸಿದರು.

ಮೈಸೂರಿನ ಕನ್ನಡ ಸಾಹಿತ್ಯ ಕಲಾ ಕೂಟದ ಅಧ್ಯಕ್ಷ ಎಂ ಚಂದ್ರಶೇಖರ್ ಮಾತನಾಡಿ, ವಿದ್ಯಾವಂತರು ಮಾತ್ರವಲ್ಲ, ಅವಿದ್ಯಾವಂತರ ತನಕ ಎಲ್ಲರೂ ಅಭಿನಯ ಮಾಡುವ ಒಂದು ಉತ್ತಮ ಕಲೆಯಾಗಿದೆ. ಮಹಾಪುರುಷರ ಮಹಾಕಾವ್ಯಗಳು ಎಲ್ಲರ ಬಾಯಲ್ಲಿ ನಲಿದಾಡುವಂತೆ ಮಾಡಿರುವ ಅದ್ಭುತ ಕಲೆಯೇ ನಾಟಕ. ಇದು ಬದುಕಿನ ಒಂದು ಸುಂದರ ಅಂಶ ಎಂದು ನುಡಿದರು. ಶಾಲೆಯ ಮುಖ್ಯೋಪಾಧ್ಯಾಯ ಮ.ಗು.ಬಸವಣ್ಣ, ನಿಲಯಪಾಲಕಿ ಶಶಿಕಲಾ, ವಿದ್ಯಾರ್ಥಿಗಳು, ಶಿಕ್ಷಕರು ಮತ್ತಿತರರು ಉಪಸ್ಥಿತರಿದ್ದರು.

ನಿಧನ



ಅನಂತಲಕ್ಷ್ಮಿ

ಮೈಸೂರು, ಜ. 29– ಅರಣ್ಯ ಇಲಾಖೆಯ ನಿವೃತ್ತ ಅಧಿಕಾರಿ ಮತ್ತು ಮೈಸೂರಿನ ಶ್ರೀರಾಂಪುರ ಬಡಾವಣೆ ನಿವಾಸಿ ಶಿವರಾಮ್ ಅವರ ತಾಯಿ ಅನಂತಲಕ್ಷ್ಮಿ (93) ಸೋಮವಾರ ಮುಂಜಾನೆ ಬೆಂಗಳೂರಿನ ಸಹಕಾರ ನಗರದ ತಮ್ಮ ನಿವಾಸದಲ್ಲಿ ನಿಧನರಾದರು.

ದಿವಂಗತರು ಐವರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಸೋಮವಾರ ಸಂಜೆ ಬೆಂಗಳೂರಿನ ಹೆಬ್ಬಾಳ್ ಚಿರಶಾಂತಿಧಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಿರಿಧಾನ್ಯ ಆಹಾರ ಉತ್ಪನ್ನಗಳ ಘಟಕ ಆರಂಭ

ಮೈಸೂರು, ಜ.29–ಸ್ವಾಮಿ ವಿವೇಕಾನಂದ ಯೂತ್‌ಮೂವ್‌ಮೆಂಟ್ (ಎಸ್‌ವಿವೈಎಂ) ವಿವೇಕ ಗ್ರಾಮೀಣ ಜೀವನೋಪಾಯ ಕೇಂದ್ರದ ಸಮನ್ವಯದೊಂದಿಗೆ ಟೈಟಾನ್ ಕಂಪನಿ ಲಿಮಿಟೆಡ್ ಬುಡಕಟ್ಟು ಮಹಿಳಾ ಗುಂಪು ವಾಣಿಜ್ಯೋದ್ಯಮದ ಎರಡನೇ ಪ್ರಕೃತಿ ಸಿರಿಧಾನ್ಯ ಆಹಾರ ಉತ್ಪನ್ನಗಳ ಘಟಕವನ್ನು ಮೈಸೂರಿನ ಪೆಂಜಹಳ್ಳಿಯಲ್ಲಿ ಪ್ರಾರಂಭಿಸಿದೆ.

ರಚನಾತ್ಮಕ ಕೌಶಲ್ಯದ ಮೂಲಕ ಬುಡಕಟ್ಟು ಮಹಿಳೆಯರ ಸಬಲೀಕರಣದ ಕಡೆಗೆ ಗಮನ ಹರಿಸಿರುವ ಈ ಹೊಸ ಘಟಕವು 10 ಮಹಿಳೆಯರು ಮತ್ತು ಈ ಪ್ರದೇಶದಲ್ಲಿ ನೆಲೆಸಿರುವ ಅವರ ಕುಟುಂಬಗಳಿಗೆ ಉದ್ಯೋಗ ಒದಗಿಸುವ ಮೂಲಕ ಸಬಲೀಕರಣಗೊಳಿಸುತ್ತದೆ. ಉದ್ಘಾಟನಾ ಕಾರ್ಯಕ್ರಮದಲ್ಲಿ ಟೈಟಾನ್ ಕಂಪನಿ ಲಿಮಿಟೆಡ್‌ನ ಚೀಫ್ ಪೀಪಲ್ ಆಫೀಸರ್ ಸ್ವದೇಶ್ ಬೆಹೆರಾ, ಚೀಫ್ ಸಸ್ಟೇನೇಬಿಲಿಟಿ ಆಫೀಸರ್ ಎನ್.ಇ. ಶ್ರೀಧರ್ ಉಪಸ್ಥಿತರಿದ್ದರು.

ಟೈಟಾನ್‌ನ ಕೌಶಲ್ಯ ಯೋಜನೆಗಳು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಯುವಕರ ಕೌಶಲ್ಯವನ್ನು ಹೆಚ್ಚಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದೆ. ಶಾಲೆಗಳು, ಕಾಲೇಜುಗಳು ಮತ್ತು ಎನ್‌ಜಿಒಗಳಾದ್ಯಂತ ದೊಡ್ಡ ಪ್ರಮಾಣದ ತರಬೇತಿ ಪ್ರಯತ್ನಗಳು ನಡೆದಿದ್ದು, ಇಲ್ಲಿಯವರೆಗೆ 70,000ಕ್ಕೂ ಹೆಚ್ಚು ಯುವ ಜನತೆ ಐಟಿಇಎಸ್, ಹಾರ್ಡ್‌ವೇರ್ ಮತ್ತು ನೆಟ್‌ವರ್ಕಿಂಗ್, ರಿಟೇಲ್ ಬಿಸಿನೆಸ್ (ಚಿಲ್ಲರೆ ವ್ಯಾಪಾರ), ಶಿಕ್ಷಕರ ತರಬೇತಿ ಇತ್ಯಾದಿ ವಿವಿಧ ಕೋರ್ಸ್‌ಗಳಲ್ಲಿ ತರಬೇತಿ ಪಡೆದಿದ್ದಾರೆ. ಹೊಸ ಘಟಕದ ಪ್ರಾರಂಭವು ಪ್ಯಾನ್ ಇಂಡಿಯಾ ಮಟ್ಟದಲ್ಲಿ ಸುಸ್ಥಿರ ಮತ್ತು ಸ್ವಾವಲಂಬಿ ಜೀವನೋಪಾಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಟೈಟಾನ್ ಕಂಪನಿಯ ಬದ್ಧತೆಯ ಮತ್ತೊಂದು ಮೈಲಿಗಲ್ಲಾಗಿದೆ ಎಂದರು.

ಕೆರಗೋಡಿನಲ್ಲಿ ಹನುಮ ಧ್ವಜ ತೆರವು ಖಂಡಿಸಿ ಬಿಜೆಪಿ ಪ್ರತಿಭಟನೆ



ಮಂಡ್ಯದ ಕೆರಗೋಡು ಗ್ರಾಮದಲ್ಲಿ ಹನುಮ ಧ್ವಜ ತೆರವು ಪ್ರಕರಣ ಖಂಡಿಸಿ ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು, ಜ.29(ಎಂಟಿವೈ)– ಮಂಡ್ಯ ಜಿಲ್ಲೆಯ ಕೆರಗೋಡು ಗ್ರಾಮದಲ್ಲಿ ಹನುಮ ಧ್ವಜ ತೆರವುಗೊಳಿಸಿರುವ ಪ್ರಕರಣ ಖಂಡಿಸಿ ಮೈಸೂರಲ್ಲಿ ಬಿಜೆಪಿ ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿದರು.

ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಬಿಜೆಪಿ ನಗರ ಮತ್ತು ಜಿಲ್ಲಾ ಘಟಕದ ವತಿಯಿಂದ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ನೂರಾರು ಮಂದಿ ಕಾರ್ಯಕರ್ತರು ಪಾಲ್ಗೊಂಡು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕೆರಗೋಡು ಗ್ರಾ.ಪಂ. ಸದಸ್ಯರು 108 ಅಡಿಯ ಧ್ವಜಸ್ತಂಭದಲ್ಲಿ ಹನುಮಧ್ವಜ ಹಾರಿಸಲು ತೀರ್ಮಾನಿಸಿದ್ದರು. ಪೊಲೀಸರು ಗ್ರಾಮಸ್ಥರ ಮೇಲೆ ಲಾಠಿಚಾರ್ಜ್ ಮಾಡಿ ಧ್ವಜ ಇಳಿಸಿದ್ದಾರೆ. ಸರ್ಕಾರ ಪೊಲೀಸರಿಂದ ರಾಜ್ಯದಲ್ಲಿ ಗೂಂಡಾಗಿರಿ ನಡೆಸುತ್ತಿದೆ. ಅಮಾಯಕರ ಮೇಲೆ ಲಾಠಿಚಾರ್ಜ್ ಮಾಡಿದ್ದಾರೆ. ಕೆರಗೋಡು ಗ್ರಾಮದ ಪ್ರತಿ ಮನೆಯಲ್ಲೂ ಹನುಮ ಧ್ವಜ ಹಾರಿಸುವ ಮುಖಾಂತರ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಹಿಂದೂ ವಿರೋಧಿ ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಪಾಠ ಕಲಿಸಲಿದ್ದಾರೆ. ಮುಂದಿನ ದಿನಗಳಲ್ಲಿ ಮಂಡ್ಯ ಜಿಲ್ಲೆ ಹಿಂದೂ ವರ್ಸಸ್ ಕಾಂಗ್ರೆಸ್ ಆಗಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್‌ನ ಅಂತ್ಯ ಕಾಣಲಿದೆ ಎಂದು ಕಿಡಿಕಾರಿದರು. ನಗರ ಬಿಜೆಪಿ ಅಧ್ಯಕ್ಷ, ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಕೆರಗೋಡು ಗ್ರಾಮದಲ್ಲಿ ಹನುಮ ಧ್ವಜವನ್ನು ಕೆಳಗಿಳಿಸಿರುವುದನ್ನು ಖಂಡಿಸಿ ರಾಜ್ಯಾದ್ಯಂತ ಹನುಮ ಧ್ವಜ ಹಾರಾಟ ನಡೆಸುತ್ತೇವೆ. ಸರ್ಕಾರಕ್ಕೆ ತಾಕತ್ತಿದ್ದರೆ ತಡೆಯಲಿ. ಹನುಮ ಧ್ವಜ, ರಾಮ ವಿರೋಧಿಯಾದ ಸರ್ಕಾರಕ್ಕೆ ಜನ ಬುದ್ಧಿ ಕಲಿಸಲಿದ್ದಾರೆ ಎಂದು ಕಿಡಿಕಾರಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ರಾಮ ಮಂದಿರ ಉದ್ಘಾಟನೆಯ ನಂತರ ಕಾಂಗ್ರೆಸ್ ಆತಂಕಗೊಂಡಿದೆ. ಹೀಗಾಗಿ ತನ್ನ ಹಿಂದೂ ವಿರೋಧಿ ನಡವಳಿಕೆಯನ್ನು ಮುಂದುವರಿಸಲು ಯತ್ನಿಸುತ್ತಿದೆ. ಆ ಕಾರಣದಿಂದ ಕೆರಗೋಡು ಗ್ರಾಮದ ಹನುಮ ಧ್ವಜವನ್ನು ತೆರವುಗೊಳಿಸಲಾಗಿದೆ. ಹನುಮ ಧ್ವಜ ವಿಚಾರದಲ್ಲಿ ಬಿಜೆಪಿ ರಾಜಕೀಯ ಮಾಡುವುದಿಲ್ಲ. ಬಿಜೆಪಿ ಬೆಳೆದು ಬಂದಿರುವುದೇ ಹಿಂದೂ ಧರ್ಮದ ಪರವಾದ ಹೋರಾಟದ ಮೂಲಕ. ಕೇಸರಿಯನ್ನು ಬಿಜೆಪಿ ಬ್ರ್ಯಾಂಡ್ ಆಗಿ ಮಾಡಿರುವುದು ಕಾಂಗ್ರೆಸ್. ನಾವು ಯಾವತ್ತೂ ಹಸಿರು ಬಣ್ಣವನ್ನು ಒಪ್ಪಿಕೊಂಡಿಲ್ಲ. ರೈತರ ಹಸಿರನ್ನು ಒಪ್ಪಿಕೊಂಡಿದ್ದೇವೆ ಎಂದರು. ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಮಾತನಾಡಿ, ಕೆರಗೋಡು ಗ್ರಾಮದಲ್ಲಿ ಗ್ರಾಮಸ್ಥರ ಒಕ್ಕೊರಲಿನ ತೀರ್ಮಾನದಂತೆ ಹನುಮ ಧ್ವಜ ಹಾರಿಸಲಾಗಿತ್ತು. ಇದಕ್ಕೆ ಯಾರಿಂದಲೂ ವಿರೋಧ ವ್ಯಕ್ತವಾಗಿರಲಿಲ್ಲ. ಆದರೆ ಉದ್ದೇಶಪೂರ್ವಕವಾಗಿ ಧ್ವಜ ತೆರವು ಮಾಡಲಾಗಿದೆ. ಇದಕ್ಕೆ ಜನ ಮುಂದಿನ ದಿನಗಳಲ್ಲಿ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸುತ್ತಾರೆ ಎಂದರು.

ಪ್ರತಿಭಟನೆಯಲ್ಲಿ ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾದ ರಾಜ್ಯಾಧ್ಯಕ್ಷ ರಘು ಕೌಟಿಲ್ಯ, ಮಾಜಿ ಸಚಿವ ಸಿ.ಹೆಚ್. ವಿಜಯಶಂಕರ್, ಅಲ್ಪಸಂಖ್ಯಾತ ಮೋರ್ಚಾದ ಅಧ್ಯಕ್ಷ ಡಾ.ಅನಿಲ್ ಥಾಮಸ್, ಮಾಜಿ ಮೇಯರ್ ಶಿವಕುಮಾರ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಹೇಮಂತ್‌ಕುಮಾರ್ ಗೌಡ, ಬಿ.ಪಿ.ಮಂಜುನಾಥ್, ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಸದಸ್ಯೆ ಲಕ್ಷ್ಮಿದೇವಿ, ಬಿಜೆಪಿ ಮುಖಂಡ ಕವೀಶ್ ಗೌಡ, ನಗರಪಾಲಿಕೆ ಮಾಜಿ ಸದಸ್ಯರಾದ ಪ್ರಮೀಳಾ ಭರತ್, ಚಿಕ್ಕವೆಂಕಟು, ಬಿ.ವಿ.ಮಂಜುನಾಥ, ಮೈಸೂರು ಬಣ್ಣ ಮತ್ತು ಅರಗು ಕಾರ್ಖಾನೆ ಮಾಜಿ ಅಧ್ಯಕ್ಷ ಫಣೀಶ್, ಪ್ರಧಾನ ಕಾರ್ಯದರ್ಶಿ ಹೆಚ್.ಜಿ. ಗಿರಿಧರ್, ಸು.ಮುರುಳಿ, ಮಾಜಿ ಉಪ ಮೇಯರ್ ವಿ.ಶೈಲೇಂದ್ರ, ನಗರ ರೈತ ಮೋರ್ಚಾ ಅಧ್ಯಕ್ಷ ಕೆ.ದೇವರಾಜು, ಜೋಗಿ ಮಂಜು, ಬೆಟ್ಟೇಗೌಡ, ಕಾವೇರಿ, ಭಾಗ್ಯ ಮುಂತಾದವರು ಪಾಲ್ಗೊಂಡಿದ್ದರು.

ಸಾರ್ವಜನಿಕ ಸಮಾವೇಶದಲ್ಲಿ ರಾಷ್ಟ್ರಪತಿಗಳ ಬಗ್ಗೆ ಏಕವಚನ ಸಂಬೋಧನೆ; ಸಿದ್ದರಾಮಯ್ಯರ ವಿರುದ್ಧ ಕುಮಾರಸ್ವಾಮಿ ವಾಗ್ದಾಳಿ

ಸೋನಿಯಾ ಗಾಂಧಿ, ರಾಹುಲ್ ಗಾಂಧಿಗೆ ಏಕವಚನ ಬಳಸುವಿರಾ?

ಬೆಂಗಳೂರು, ಜ.29–(ಕೆಎಂಶಿ)–ಸಾರ್ವಜನಿಕ ಸಭೆಯಲ್ಲಿ ರಾಷ್ಟ್ರಪತಿಗಳನ್ನು ವಿವೇಚನೆ ಇಲ್ಲದೆ ಏಕವಚನದಲ್ಲಿ ಸಂಬೋಧಿಸಿ, ಈಗ ವಿಷಾದ ವ್ಯಕ್ತಪಡಿಸಿದರೆ ಏನು ಪ್ರಯೋಜನ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಅವರು, ಅಂಕೆ ಮೀರಿದ ಭಂಡತನಕ್ಕೆ ನೀವೇ ಅತ್ಯುತ್ತಮ ಉದಾಹರಣೆ ಸಿದ್ದರಾಮಯ್ಯನವರೇ, ಭಾವುಕನಾಗಿ ಮಾತನಾಡುವ ಭರದಲ್ಲಿ ಗೌರವಾನ್ವಿತ ರಾಷ್ಟ್ರಪತಿಗಳನ್ನು ಏಕವಚನದಲ್ಲಿ ಸಂಬೋಧಿಸಿದೆ ಎಂದು ನೀವು ಕೊಟ್ಟಿರುವ ಸಮಜಾಯಿಷಿ ಮೊಸಳೆಯನ್ನೂ ನಾಚಿಸುವಂತಿದೆ. ಅಲ್ಲದೆ, ಶಿಷ್ಟಾಚಾರಗೆಟ್ಟ ಮುಖ್ಯಮಂತ್ರಿ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

"ಗ್ರಾಮೀಣ ಸೊಗಡಿನ ವ್ಯಕ್ತಿತ್ವ ನನ್ನದು. ನಾನು ಮಾತನಾಡುವುದೇ ಹಾಗೆ." ಎಂದು ನೀವು ಸಮರ್ಥಿಸಿಕೊಳ್ಳುತ್ತೀರಿ. ಸಮರ್ಥನೆಗೂ ಒಂದು ಅಳತೆ, ಗೌರವ ಇರುತ್ತದೆ. ಅದಾವುದನ್ನೂ ನೀವು ಲೆಕ್ಕಕ್ಕೇ ಇಟ್ಟಿಲ್ಲ. ಹೌದಲ್ಲವೇ? ಎಂದು ಸಿಎಂ ಅವರನ್ನು ಪ್ರಶ್ನೆ ಮಾಡಿರುವ ಅವರು, 2ನೇ ಸಲ ಸಿಎಂ ಆಗಿ ಎಲ್ಲಾ ರೀತಿಯ ಶಿಷ್ಟಾಚಾರದ ಸುಖ ಅನುಭವಿಸುತ್ತಿದ್ದೀರಿ ಮತ್ತು ಪಾಲಿಸುತ್ತಿದ್ದೀರಿ, ಸರಿ. ಆದರೆ; ಭಾಷೆ ವಿಚಾರದಲ್ಲಿ ನೀವು ಯಾಕೆ ಶಿಷ್ಟಾಚಾರ ಕಲಿತಿಲ್ಲ, ಪಾಲಿಸುತ್ತಿಲ್ಲ. ನಿಮ್ಮ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಅವರಿಗೆ ಏಕವಚನ ಪ್ರಯೋಗಿಸುವಿರಾ? ಈ ಸೋಗಲಾಡಿತನವನ್ನು ಅರ್ಥ ಮಾಡಿಕೊಳ್ಳದಷ್ಟು ಮುಗ್ಧರೇ ನಮ್ಮ ಜನರು ಎಂದು ಕಿಡಿಕಾರಿದ್ದಾರೆ. ಸಿದ್ದರಾಮಯ್ಯನವರೇ, ಶೋಷಿತರ ಜಾಗೃತಿ ಸಮಾವೇಶದಲ್ಲಿ ನಿಮ್ಮ ಭಾಷಣದಲ್ಲಿ ಭಾವುಕತೆ, ಮುಗ್ಧತೆ ಇತ್ತೇ, ಸುಳ್ಳು ಹೇಳುವುದಕ್ಕೂ ಸಂಕೋಚ ಬೇಡವೇ? ನಿಮ್ಮ ಭಾಷಣ ದುರಹಂಕಾರದ ಪರಮಾವಧಿ ಮತ್ತು ಆ ಸಮಾವೇಶದ ಕರ್ತೃ, ಕರ್ಮ, ಕ್ರಿಯೆ ಎಲ್ಲವೂ ನೀವೇ, ಹೌದೋ ಅಲ್ಲವೋ? ದೇಶದ ಅತ್ಯುನ್ನತ ಸ್ಥಾನದಲ್ಲಿರುವ ಗೌರವಾನ್ವಿತ ರಾಷ್ಟ್ರಪತಿಗಳ ಬಗ್ಗೆ, ಅದರಲ್ಲೂ ಮಹಿಳೆಯ ಬಗ್ಗೆ ಮಾತನಾಡುವಾಗ ಭಾವುಕತೆಯಲ್ಲಿ ನಿಮ್ಮ ವಿವೇಕ ಸತ್ತು ಹೋಗಿತ್ತಾ ಎಂದು ಸಿದ್ದರಾಮಯ್ಯ ಅವರನ್ನು ಕೇಳಿದ್ದಾರೆ.



ಹೆಚ್.ಡಿ.ಕುಮಾರಸ್ವಾಮಿ

ಎರಡು ಬಾರಿ ಸಿಎಂ ಆದವರು, ಡಿಸಿಎಂ, ಹಣಕಾಸು ಸಚಿವರೂ ಆಗಿದ್ದವರು. ವಕೀಲರೂ, ಸ್ವಯಂಘೋಷಿತ ಸಂವಿಧಾನ ತಜ್ಞರೂ ಆಗಿರುವ ನಿಮ್ಮಂತಹ ಪಂಡಿತರೇ ಭಾವುಕತೆಯಿಂದ ಬಾಯಿ ತಪ್ಪಿದರೆ ಹೇಗೆ?

ಇನ್ನು ಆ ನಿಮ್ಮ ಭಾಷಣ! ಅದನ್ನು ಭಾಷಣ ಎನ್ನಲು ಸಾಧ್ಯವೇ, ನಿಮ್ಮ ಭಾಷಣ ನಿಮ್ಮ ಹೃದಯದಲ್ಲಿ ತುಂಬಿದ್ದ ಅಸಹನೆಯ ನಂಜು. ಅನ್ಯಜಾತಿಗಳ ಮೇಲೆ ಮಡುಗಟ್ಟಿದ ದ್ವೇಷ. ಜಾತಿ–ಧರ್ಮಗಳ ನಡುವೆ ಬೆಂಕಿ ಇಡಲು ನೀವು ಕಕ್ಕಿದ ಕಾರ್ಕೋಟಕ ವಿಷಜ್ವಾಲೆ. ಜಾತಿ ವ್ಯವಸ್ಥೆ ಇರುವವರೆಗೆ ಇಂಥ ಸಮಾವೇಶಗಳು ನಡೆಯಬೇಕು ಎನ್ನುತ್ತೀರಿ! ಅಂದರೆ ಕಾರ್ಕೋಟಕ ವಿಷಜ್ವಾಲೆ ನಿರಂತರ ಇರಲಿ ಎಂದಾಯಿತು! ನಿರಂತರವಾಗಿ ಅಧಿಕಾರ ಸುಖಿಸಿದ ನೀವು ಶೋಷಿತ ವರ್ಗಕ್ಕೆ ಮಾಡಿದ್ದೇನು ಎಂದು ಕುಮಾರಸ್ವಾಮಿ ಅವರು ಟಾಂಗ್ ನೀಡಿದ್ದಾರೆ. ಮೀಸಲಾತಿ ಬಗ್ಗೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಹೇಳಿದ್ದೇನು, ಅವರ ನಿಲುವು ಏನಾಗಿತ್ತು, ಸಂವಿಧಾನವೇ ನನ್ನ ಧರ್ಮಗ್ರಂಥ ಎನ್ನುವ ನೀವು, ಇಷ್ಟು ಬೇಗ ಸಂವಿಧಾನ ಬರೆದವರ ಮಾತನ್ನೇ ಮರೆತರೆ ಹೇಗೆ. 14 ಬಜೆಟ್ ಮಂಡಿಸಿದ ಅಪರ ವಿತ್ತವಿಶಾರದರಾದ ತಮಗೆ ಮರೆವೇ, ಇನ್ನೆಷ್ಟು ವರ್ಷ ಸುಳ್ಳುಗಳನ್ನೇ ಹೇಳಿ ಸತ್ಯವನ್ನು ಸಾಗ ಹಾಕುತ್ತೀರಿ ಎಂದು ಸಿಎಂಗೆ ಬಿಸಿ ಮುಟ್ಟಿಸಿದ್ದಾರೆ.

ನನ್ನಂತೆಯೇ ಶೋಷಿತ ಸಮಾಜದಿಂದ ಬಂದವರು, ಅವರ ಬಗ್ಗೆ ಅಪಾರ ಗೌರವವಿದೆ. ಅವರನ್ನು ಏಕವಚನದಲ್ಲಿ ಸಂಬೋಧಿಸಬಾರದಿತ್ತು. ಅಚಾತುರ್ಯದಿಂದ ಆಗಿರುವ ಈ ಪ್ರಮಾದಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ ಎಂದಿದ್ದೀರಿ. ವಿಷಾದ ವ್ಯಕ್ತಪಡಿಸುವ ಸೌಜನ್ಯ ತೋರಿಸಿದ್ದೀರಿ, ಸಂತೋಷ. ಆದರೆ; ನಿಮ್ಮ ನಂಜಿನ ವಿಷ ರಾಜ್ಯವನ್ನೆಲ್ಲಾ, ದೇಶವನ್ನೆಲ್ಲಾ ವ್ಯಾಪಿಸುತ್ತಿದೆ. ಇದಕ್ಕೆ ಏನಂತೀರಿ ಎಂದು ಕುಮಾರಸ್ವಾಮಿ ತಿರುಗೇಟು ನೀಡಿದ್ದಾರೆ.

ಸಂವಿಧಾನ ಹಾಳು ಮಾಡಲು ಹೊರಟಿದ್ದಾರೆ: ಜೆಡಿಎಸ್–ಬಿಜೆಪಿ ಮೈತ್ರಿಕೂಟದ ಬೆಂಗಳೂರು ಶಿಕ್ಷಕರ ಕ್ಷೇತ್ರದ ಅಭ್ಯರ್ಥಿ ಎ.ಪಿ.ರಂಗನಾಥ್ ಅವರು ನಾಮಪತ್ರ ಸಲ್ಲಿಸಿದ ನಂತರ ಬೆಂಗಳೂರಿನಲ್ಲಿ ಮಾಧ್ಯಮಗಳ ಜತೆ ಮಾತನಾಡಿದ ಕುಮಾರಸ್ವಾಮಿ, ನಾನು ಸಂವಿಧಾನ ತಜ್ಞ ಅಂತಾರೆ, ಆದರೆ, ರಾಷ್ಟ್ರಪತಿಗಳನ್ನು ಹೇಗೆ ಗೌರವಿಸಬೇಕು ಎನ್ನುವುದು ಗೊತ್ತಿಲ್ಲವೇ ಎಂದು ಸಿಎಂ ಸಿದ್ದರಾಮಯ್ಯ ವಿರುದ್ಧ ಗುಡುಗಿದರು. ಯಾವ ಭಾವನಾತ್ಮಕ ಭಾಷೆ ಅದು. ಸಂವಿಧಾನ ಹಾಳು ಮಾಡೋಕೆ ಹೊರಟಿರೋದು ಇದೇ ಸಿದ್ದರಾಮಯ್ಯ, ವಿಷಾದ ವ್ಯಕ್ತಪಡಿಸಿ ಜಾರಿಕೊಳ್ಳಲು ಸಾಧ್ಯವಿಲ್ಲ ಎಂದು ಕುಟುಕಿದರು ಮಾಜಿ ಮುಖ್ಯಮಂತ್ರಿ. ಈ ದೇಶದ ಪ್ರಧಾನಿ ಯಾರು, ಶೋಷಿತ ಸಮುದಾಯದಿಂದ ಬಂದು ಉನ್ನತ ಸ್ಥಾನಕ್ಕೆ ಏರಿದ್ದಾರೆ ಮೋದಿ ಅವರು, ಅವರ ಬಗ್ಗೆಯೂ ಇವರು ಲಘುವಾಗಿ ಮಾತನಾಡುತ್ತಾರೆ, ಹಾಗಾದರೆ ನಿಮ್ಮ ಸಾಧನೆ ಏನು? ಅಸೂಯೆಯಿಂದ ಮಾತಾಡ್ತಾರೆ ಅಂತಾರೆ ಅವರು, ಅವರ ಬಜೆಟ್‌ನಲ್ಲಿ ಎಷ್ಟು ಶೋಷಿತ ಜನರನ್ನು ಮೇಲೆ ಎತ್ತಿದ್ದಾರೆ ಇವರು, ಸಿದ್ದರಾಮಯ್ಯ ಅವರು ಅಂಕಿ ಅಂಶ ಇಡಲಿ ನೋಡೋಣ ಎಂದು ಕುಮಾರಸ್ವಾಮಿ ಸವಾಲು ಹಾಕಿದರು. ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರಾದ ಜಿ.ಟಿ.ದೇವೇಗೌಡರು, ವಿಧಾನಪರಿಷತ್ ಸದಸ್ಯರಾದ ಟಿ.ಎ.ಶರವಣ, ಮಾಜಿ ಸದಸ್ಯರಾದ ಚೌಡರೆಡ್ಡಿ ತೂಪಲ್ಲಿ, ಜೆಡಿಎಸ್ ನಗರ ಘಟಕದ ಅಧ್ಯಕ್ಷರಾದ ಹೆಚ್.ಎಂ.ರಮೇಶ್ ಗೌಡ, ಬೆಂಗಳೂರು ಶಿಕ್ಷಕರ ಕ್ಷೇತ್ರದ ಉಪಚುನಾವಣೆಯ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿಯಾದ ಎ.ಪಿ. ರಂಗನಾಥ್ ಸೇರಿದಂತೆ ಹಲವಾರು ನಾಯಕರು ಮಾಜಿ ಮುಖ್ಯಮಂತ್ರಿಗಳ ಜತೆಯಲ್ಲಿ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.1.2024 ಮಂಗಳವಾರ, ಮಳೆ ನಕ್ಷತ್ರ: ಶ್ರವಣ 24.1.2024 ರಿಂದ 05.02.2024

ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಉತ್ತರಾ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಸಾಹಿತ್ಯ ಅಕಾಡೆಮಿ, ಸ್ನಾತಕೋತ್ತರ ಕನ್ನಡ ಅಧ್ಯಯನ ಕೇಂದ್ರ, ಕನ್ನಡ ವಿಭಾಗ, ಮಹಾರಾಣಿ ಮಹಿಳಾ ಕಲಾ ಕಾಲೇಜು:** 'ಕನ್ನಡ ಸಾಹಿತ್ಯ ಸಂಶೋಧನೆಯ ವಿವಿಧ ಆಯಾಮಗಳು ಕುರಿತು ವಿಚಾರ ಸಂಕಿರಣ, ಬೆಳಗ್ಗೆ 10ಕ್ಕೆ ಮೂರನೇ ಗೋಷ್ಠಿ, ಟಿ.ಎಸ್. ಸತ್ಯನಾಥ ಅವರಿಂದ ಕನ್ನಡ ಸಾಹಿತ್ಯ ಸಂಸ್ಕೃತಿಯಲ್ಲಿ ತೌಲನಿಕ ಅಧ್ಯಯನದ ಸಾಧ್ಯತೆಗಳು ಕುರಿತು ಗೋಷ್ಠಿ, ಪ್ರಬಂಧ ಮಂಡನೆ: ಡಿ.ಸಿ. ಗೀತಾ ಅವರಿಂದ ಸ್ತ್ರೀವಾದಿ ಸಂಶೋಧನೆ ಮತ್ತು ಕನ್ನಡ ಸಾಹಿತ್ಯ, ಹೆಚ್. ಶಶಿಕಲಾ ಅವರಿಂದ ಕನ್ನಡ ಸಂಶೋಧನೆ ಮತ್ತು ಭಾಷಾ ಶಾಸ್ತ್ರೀಯ ಚಿಂತನೆಗಳು; ಬೆಳಗ್ಗೆ 11.30ಕ್ಕೆ ನಾಲ್ಕನೇ ಗೋಷ್ಠಿ, ಎನ್.ಎಸ್.ತಾರಾನಾಥ ಅವರಿಂದ ಹಳಗನ್ನಡ ಸಾಹಿತ್ಯ ಸಂಶೋಧನೆಯ ಮಾದರಿಗಳು ಕುರಿತು ಉಪನ್ಯಾಸ, ಪ್ರಬಂಧ ಮಂಡನೆ: ಅಪ್ಪಗೆರೆ ಸೋಮಶೇಖರ ಅವರಿಂದ ಕನ್ನಡ ಸಂಶೋಧನೆ ಮತ್ತು ಸಾಮಾಜಿಕ ತಿಳಿವಳಿಕೆ, ಸುರೇಶ ನಾಗಲಮಡಿಕೆ ಅವರಿಂದ ಜಾನಪದ ಸಂಶೋಧನೆಯ ಮಾದರಿಗಳು, ಮ.2ಕ್ಕೆ ಐದನೇ ಗೋಷ್ಠಿ: ಬಂಜಗೆರೆ ಜಯಪ್ರಕಾಶ್ ಅವರಿಂದ ಕನ್ನಡ ಸಂಶೋಧನೆ ಮತ್ತು ಅನ್ಯಜ್ಞಾನ ಶಿಸ್ತುಗಳು ಕುರಿತು ಉಪನ್ಯಾಸ, ಪ್ರಬಂಧ ಮಂಡನೆ: ಗೀತ ವಸಂತ ಅಂತರಶಿಸ್ತೀಯ ಮತ್ತು ಬಹುಶಿಸ್ತೀಯ ಸಂಶೋಧನೆ, ಮಧ್ಯಾಹ್ನ 3ಕ್ಕೆ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಕನ್ನಡ ಸಲಹಾ ಸಮಿತಿ ಸದಸ್ಯ ಮನು ಬಳಿಗಾರ್, ಸಮಾರೋಪ ಭಾಷಣ: ಕವಿಯತ್ರಿ ಅರವಿಂದ ಮಾಲಗತ್ತಿ, ಗೌರವ ಅತಿಥಿಗಳು: ಪ್ರಾಚಾರ್ಯ ಬಿ.ವಿ.ವಸಂತಕುಮಾರ್, ಟಿ.ಎಲ್.ಜಗದೀಶ್, ಸ್ಥಳ: ಪಿ.ಜಿ.ಸೆಮಿನಾರ್ ಹಾಲ್, ಮಹಾರಾಣಿ ಮಹಿಳಾ ಕಲಾ ಕಾಲೇಜು, ಜೆಎಲ್‌ಬಿ ರಸ್ತೆ.

■ **ಶ್ರೀ ನಟರಾಜ ಹಿರಿಯ ಪ್ರಾಥಮಿಕ ಶಾಲೆ, ಇಂಗ್ಲೀಷ್ ಮಾಧ್ಯಮ:** ವಾರ್ಷಿಕೋತ್ಸವ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಬಹುಮಾನ ವಿತರಣೆ : ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು, ಸ್ಥಳ: ಶ್ರೀ ನಟರಾಜ ಸಭಾಂಗಣ, ಮಧ್ಯಾಹ್ನ 3.30ಕ್ಕೆ.

■ **ಜಾನಪದ ಕಲಾವಿದರ ಒಕ್ಕೂಟ, ಮೈಸೂರು ವಿಭಾಗ:** ರಾಜ್ಯ ಮಟ್ಟದ ಜಾನಪದ ಸೇವಾ ರತ್ನ ಪ್ರಶಸ್ತಿ ಪ್ರಧಾನ ಸಮಾರಂಭ, ಉದ್ಘಾಟನೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಪ್ರಾಧ್ಯಾಪಕ ಡಾ.ಎಸ್. ಬಸವರಾಜಪ್ಪ, ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷ ಡಾ.ಹೆಚ್.ಆರ್.ತಿಮ್ಮೇಗೌಡ, ರಂಗ ನಿರ್ದೇಶಕ ದಯಾನಂದ ಕಟ್ಟೆ, ತಾಯ್ನಾಡು ಕನ್ನಡ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಡಾ. ರಾಜೇಗೌಡ, ಸಾಹಿತಿ ಕಟ್ಟೆ ಕೃಷ್ಣಸ್ವಾಮಿ, ವಚನ ಗಾಯನ ಎಲ್.ಬಿ. ಚನ್ನಬಸಪ್ಪ, ಜಾನಪದ ಕಲಾವಿದರ ಒಕ್ಕೂಟ ಅಧ್ಯಕ್ಷ ಆರ್.ಕೆ. ಸ್ವಾಮಿ, ಪುರಭವನ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿವಿ ಗಾಂಧಿ ಅಧ್ಯಯನ ಕೇಂದ್ರ, ಸಮಾಜ ಕಾರ್ಯ ಅಧ್ಯಯನ ವಿಭಾಗ:** 76ನೇ ಸರ್ವೋದಯ ದಿನಾಚರಣೆ, ಧಾರ್ಮಿಕ ಸಹಿಷ್ಣುತೆ: ಗಾಂಧೀಜಿ ಪರಿಕಲ್ಪನೆ ಮತ್ತು ಇಂದಿನ ಅಗತ್ಯ ಕುರಿತು ಉಪನ್ಯಾಸ, ಉದ್ಘಾಟನೆ: ಹಿರಿಯ ಪತ್ರಕರ್ತ ರವೀಂದ್ರ ಭಟ್ಟ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು: ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜಾ, ಪ್ರೊ. ಕೆ. ಮಹದೇವನ್, ಸನ್ಮಾನ: ನಗರ ಪಾಲಿಕೆ ಮಾಜಿ ಸದಸ್ಯೆ ಶ್ರೀಮತಿ ನಾಗಮ್ಮ, ಸ್ಥಳ: ಗಾಂಧಿ ಭವನ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಶ್ರೀ ಕಲಾನಿಕೇತನ ಕಾಲೇಜ್ ಆಫ್ ವಿಜುವೆಲ್ ಆರ್ಟ್ :** ಕಲಾವಿದರು ಮತ್ತು ಉಪನ್ಯಾಸಕರಾದ ಡಾ. ವಿಠ್ಠಲರಡ್ಡಿ, ಎಫ್. ಚುಳಕಿ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 11 ಗಂಟೆಯಿಂದ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ :** ಬಜೆಟ್ ಪೂರ್ವಭಾವಿ ಸಮಾಲೋಚನಾ ಸಭೆ, ಸ್ಥಳ: ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಪರಂಪರೆ :** ಗಿರಿಜಾ ಕಲ್ಯಾಣ ಸಪ್ತಾಹ, ಸುರಭಿ ಗಾನ ಕಲಾಮಂದಿರ (ಗೋಕುಲಂ ಬಡಾವಣೆ) ಅವರಿಂದ ಹಾಡುಗಾರಿಕೆ, ಡಾ. ಸುಕನ್ಯಾ ಪ್ರಭಾಕರ್ ಶಿಷ್ಯ ವೃಂದದವರಿಂದ ದಕ್ಷ ದಹನ ಕಥಾಭಾಗ, ಸ್ಥಳ: ಗಣಪತಿ ದೇವಸ್ಥಾನದ ರಜತ್ ಸಭಾಂಗಣ, ಐ ಬ್ಲಾಕ್, ರಾಮಕೃಷ್ಣನಗರ, ಸಂಜೆ 6 ಗಂಟೆಯಿಂದ.

■ **ಕ್ವಾಂಟಂ ಫಿಸಿಕ್ಸ್ ಅದ್ವೈತ ವಿಶ್ವಾಲಯ :** ಆಧುನಿಕ ವಿಜ್ಞಾನ ಮತ್ತು ಸನಾತನ ಆಧ್ಯಾತ್ಮಿಕತೆ ಕುರಿತು ವಿಶೇಷ ಧ್ಯಾನ ಶಿಬಿರ, ಸ್ಥಳ: ಶ್ರೀರಾಮಮಂದಿರ, ಶಿವರಾಂಪೇಟೆ, ಮ.12ರಿಂದ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಶ್ರದ್ಧೆಯ ಶಿಲ್ಪ–ಲೇಖನ ಮತ್ತು ಪ್ರಸ್ತುತಿ– ಟಿ.ಎಸ್. ಗೋಪಾಲ್, 6.40 ಪದ ಸಂಸ್ಕೃತಿ, ಪ್ರಸ್ತುತಿ– ಡಾ.ಬಿ.ವಿ. ವಸಂತ ಕುಮಾರ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ – ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್.ಎಸ್., 8.30 ಪ್ರಾಯೋಜಿತ ಕಾರ್ಯಕ್ರಮ ಆಯುಷ್ಮಾನ ಭಾರತ. ಪ್ರಾಯೋಜಕರು ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ, ಕರ್ನಾಟಕ ಸರ್ಕಾರ, 9.00 ಪರಾಗ–ಬೇಸಾಯದ ಬದುಕು ಸರಾಗ–ಬಾನುಲಿ ಸರಣಿ, ಪರಿಕಲ್ಪನೆ ಮತ್ತು ಪ್ರಸ್ತುತಿ– ಎನ್ ಕೇಶವಮೂರ್ತಿ, 9.15 ಕರೆ ಗೊಂದು ಗೀತೆ, 10.00 ವಿ. ಲಲಿತಾ – ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.00 ವನಿತಾ ವಿಹಾರ–ಪ್ರಶಸ್ತಿ ವಿಜೇತ ಗ್ರಾಮೀಣಾಭಿವೃದ್ಧಿ ಅಧಿಕಾರಿ ಕವಯಿತ್ರಿ ಶೋಭಾ ದಿನೇಶ್ ಅವರೊಂದಿಗೆ ಮಾತುಕತೆ. ನಡೆಸಿಕೊಡುತ್ತಾರೆ– ಅಬ್ದುಲ್ ರಶೀದ್, 12.30 ದೇವರನಾಮ–ಆರ್.ಕೆ. ಶ್ರೀಕಂಠನ್, ಶ್ರೀರಕ್ಷಾ, 12.45 ವಿಶ್ವದ ಹಣಕಾಸಿಗೆ ಭಾರತದ ಕಾಸು– ಮಾತನಾಡುತ್ತಾರೆ ಆರ್ಥಿಕ ತಜ್ಞ ಡಾ.ಬಿ.ಎಂ. ಕುಮಾರ ಸ್ವಾಮಿ, 1.20 ಭಾವಗೀತೆಗಳು, 3.00 ಮಧುರೈ ಎಂ.ಪಿ.ಎನ್. ಸೇತುರಾಮನ್ ಮತ್ತು ಎಂ.ಪಿ.ಎನ್. ಪೊನ್ನುಸ್ವಾಮಿ–ಯುಗಳ ನಾಗಸ್ವರ ವಾದನ, 4.00 ಕಥಾ ಕಾಲಕ್ಷೇಪ–ಶ್ರೀ ಮಾರುತಿ ವಿಜಯ, ಪ್ರಸ್ತುತಿ– ವಿದ್ವಾನ್ ಆರ್. ಗುರುರಾಜುಲು ನಾಯ್ಡು, 6.50 ಕೃಷಿರಂಗ–ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ಸಭಾಂಗಣದಲ್ಲಿ ಏರ್ಪಡಾಗಿದ್ದ ರೇಷ್ಮೆ ಐಸಿರಿ ಬಾನುಲಿ ಸರಣಿಯ ಉದ್ಘಾಟನಾ ಸಮಾರಂಭದ ಬಾನುಲಿ ವರದಿ. ಪ್ರಸ್ತುತಿ– ಎನ್.ಕೇಶವಮೂರ್ತಿ, 9.30 ಎಂ.ಪ್ರಭಾಕರ್–ಹಾಡುಗಾರಿಕೆ, 10.00 ಗಮಕ ವ್ಯಾಖ್ಯಾನ, ವಾಚನ– ಹೆಚ್. ಯಜ್ಞೇಶ್, ವ್ಯಾಖ್ಯಾನ– ಸರ್ಪಂಗಳ ಈಶ್ವರ್ ಭಟ್

ಫ್ರಾನ್ಸ್ ಮೂಲದ ಮೈಸೂರಿನ ಸಂಸ್ಕೃತ ವಿದ್ವಾಂಸನಿಗೆ 'ಪದ್ಮಶ್ರೀ' ಪ್ರಶಸ್ತಿ ಗರಿ

● ಸಂಸ್ಕೃತ ಹಾಗೂ ಫ್ರೆಂಚ್ ಭಾಷೆಯ ಸಮ್ಮಿಳಿತ ● ಮೈಸೂರಿಗೂ ಫ್ರಾನ್ಸ್‌ಗೂ ಬಿಡಿಸಲಾಗದ ನಂಟು
● ವಿದೇಶಿ ನೆಲದಲ್ಲಿ ಸಂಸ್ಕೃತದ ಪಾರುಪತ್ಯ ● ಸಂಸ್ಕೃತ ಭಾಷಾ ಪ್ರೇಮಿ ದಂಪತಿಯ ಆದರ್ಶ



ಡಾ.ಪಿಯರಿ ಸಿಲ್ವೇನ್ ಫಿಲಿಯೋಜಾ

ಮೈಸೂರು, ಜ.29(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿರುವ ಫ್ರಾನ್ಸ್ ಮೂಲದ ಸಂಸ್ಕೃತ ವಿದ್ವಾಂಸ ಡಾ.ಪಿಯರಿ ಸಿಲ್ವೇನ್ ಫಿಲಿಯೋಜಾ ಭಾರತ ಸರ್ಕಾರದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳಲ್ಲಿ ಒಂದಾದ ಪದ್ಮಶ್ರೀ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಡಾ.ಪಿಯರಿ ಸಿಲ್ವೇನ್ ಫಿಲಿಯೋಜಾ ಅವರನ್ನು ಪದ್ಮಶ್ರೀ ಪ್ರಶಸ್ತಿಗೆ ಆಯ್ಕೆ ಮಾಡುವ ಮೂಲಕ ಮೈಸೂರಿನ ಹಿರಿಮೆ ಗರಿಮೆ ಇಮ್ಮಡಿಗೊಂಡಿದೆ.

ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಅವರು ನವದೆಹಲಿಯಲ್ಲಿ ನಡೆದ 75ನೇ ಗಣರಾಜ್ಯೋತ್ಸವ ಪರೇಡ್‌ಗೆ ಮುಖ್ಯ ಅತಿಥಿಯಾಗಿ ಆಗಮಿಸಿದ ಸಂದರ್ಭದಲ್ಲಿ ಫ್ರಾನ್ಸ್ ಮೂಲದ ಡಾ.ಪಿಯರಿ ಸಿಲ್ವೇನ್ ಫಿಲಿಯೋಜಾ ಅವರಿಗೆ ಈ ಪ್ರಶಸ್ತಿ ನೀಡುವ ಮೂಲಕ ಭಾರತ ಮತ್ತು ಫ್ರಾನ್ಸ್ ರಾಜತಾಂತ್ರಿಕ ಬಾಂಧವ್ಯವನ್ನು ಮತ್ತಷ್ಟು ವೃದ್ಧಿಗೊಂಡಿದೆ. ಮೈಸೂರಿನ ಯಾದವಗಿರಿಯ ನಿವಾಸಿಯಾಗಿರುವ ಡಾ.ಪಿಯರಿ ಸಿಲ್ವೇನ್ ಫಿಲಿಯೋಜಾ ಅವರು ಸಾವಿರಾರು ವರ್ಷಗಳ ಇತಿಹಾಸವಿರುವ ಸಂಸ್ಕೃತ ಭಾಷೆಯನ್ನು ಅಧ್ಯಯನ ಮಾಡಿದ್ದಾರೆ. ಜೊತೆಗೆ ಫ್ರೆಂಚ್ ಹಾಗೂ ಇಂಗ್ಲಿಷ್ ಭಾಷಾ ಪಾಂಡಿತ್ಯ ಹೊಂದಿರುವ ಇವರು ಬಹು ಭಾಷಾ ನಿಪುಣರಾಗಿದ್ದಾರೆ.

ವಿದ್ಯಾನಾಥನೆಂಬ ಅಲಂಕಾರಿಕನು ರಚಿಸಿದ್ದ 'ಪ್ರತಾಪ್ ರುದ್ರ ಯಶೋ ಭೂಷಣ' ಶಾಸ್ತ್ರಗ್ರಂಥ ವಿವೇಚಿಸಿ ಡಾ.ಪಿಯರಿ ಸಿಲ್ವೇನ್ ಫಿಲಿಯೋಜಾ ಬರೆದಿರುವ ಮಹಾ ಪ್ರಬಂಧಕ್ಕೆ ಪ್ಯಾರಿಸ್ ವಿಶ್ವವಿದ್ಯಾನಿಲಯ 1962ರಲ್ಲಿ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ.

ಡಾ.ಪಿಯರಿ ಸಿಲ್ವೇನ್ ಫಿಲಿಯೋಜಾ ಅವರು ಸಂಸ್ಕೃತ ವ್ಯಾಕರಣ, ಕಾವ್ಯ, ಕಾವ್ಯ ಶಾಸ್ತ್ರ, ಶೈವ ಸಿದ್ಧಾಂತ, ಭಾರತೀಯ ವಾಸ್ತು ಶಿಲ್ಪ ಮತ್ತು ದೇವಾಲಯಗಳ ಇತಿಹಾಸದ ಬಗ್ಗೆ ಸಮಗ್ರ ಅಧ್ಯಯನ ಮಾಡಿದ್ದಾರೆ. ಈ ತನಕ ಸುಮಾರು 20 ಪುಸ್ತಕಗಳನ್ನು ಬರೆದಿರುವ ಇವರ ಪುಸ್ತಕದಲ್ಲಿ ಹಂಪಿಯ ವಿರುಪಾಕ್ಷ ದೇವಾಲಯ ಹಾಗೂ ಸುತ್ತಲಿನ ಕಲಾ ಪ್ರಕಾರಗಳ ಮೇಲೆ ಸಮಗ್ರ ಮಾಹಿತಿ ದೊರಕಲಿದೆ.

ಡಾ.ಪಿಯರಿ ಸಿಲ್ವೇನ್ ಫಿಲಿಯೋಜಾ ಅವರು 1936, ಫೆಬ್ರವರಿ 15ರಂದು ಪ್ಯಾರಿಸ್‌ನಲ್ಲಿ ಜನಿಸಿದ್ದರು. ಇವರು ಜೀನ್ ಫಿಲಿಯೋಜಾಟ್ ಪುತ್ರರಾಗಿದ್ದಾರೆ.

ಇವರು ಕೆಲವು ಸಂಸ್ಕೃತ ಪುಸ್ತಕಗಳನ್ನು ಫ್ರೆಂಚ್ ಭಾಷೆಗೆ ಅನುವಾದಿಸಿದ್ದಾರೆ. ಸಂಸ್ಕೃತದಲ್ಲಿ ಅಧ್ಯಯನ ನಡೆಸಿರುವ ಇವರಿಂದ ಫ್ರೆಂಚ್ ಹಾಗೂ ಸಂಸ್ಕೃತ ಭಾಷೆಗಳು ಮಿಳಿತವಾಗಿವೆ. ಈ ಮೂಲಕ ಎರಡು ಭಾಷೆಗಳು ಅವಿನಾಭಾವ ಸಂಬಂಧ ಹೊಂದಿದೆ.

ಇವರ ಪತ್ನಿ ಡಾ.ವಸುಂದರಾ ಫಿಲಿಯೋಜಾಟ್ ಅಪ್ಪಟ ಕನ್ನಡಿಗರು. ಉತ್ತರ ಕರ್ನಾಟಕ ಮೂಲದವರಾದ ಈ ದಂಪತಿ ಮೈಸೂರಿನ ಯಾದವಗಿರಿಯಲ್ಲಿ ವಾಸ ಮಾಡುತ್ತಿದ್ದಾರೆ. ಆರು ತಿಂಗಳು ಮೈಸೂರಿನಲ್ಲಿದ್ದರೆ, ಆರು ತಿಂಗಳು ಪ್ಯಾರಿಸ್‌ನಲ್ಲಿರುತ್ತಾರೆ.

ಸಂಸ್ಕೃತ ಭಾಷೆಯ ಬಗ್ಗೆ ಡಾ.ಪಿಯರಿ ಸಿಲ್ವೇನ್ ಫಿಲಿಯೋಜಾ ಹಾಗೂ ಡಾ.ವಸುಂದರ ಫಿಲಿಯೋಜಾ ಅವರಿಗೆ ಅತ್ಯಂತ ಪ್ರೀತಿ. ಈ ಹಿನ್ನೆಲೆಯಲ್ಲಿ ಪ್ಯಾರಿಸ್‌ನಲ್ಲಿ ಪ್ರತಿ ವರ್ಷ ಸಂಸ್ಕೃತೋತ್ಸವವನ್ನು ವೈಭವೋಪೇತವಾಗಿ ಆಯೋಜಿಸುತ್ತಾರೆ. ಸಂಸ್ಕೃತ ನಾಟಕಗಳನ್ನು ಫ್ರೆಂಚ್ ಭಾಷೆಗೆ ಅನುವಾದಿಸಿ ಫ್ರಾನ್ಸ್ ಕಲಾವಿದರು ಆ ನಾಟಕಗಳಲ್ಲಿ ಅಭಿನಯಿಸಲು ಡಾ.ಪಿಯರಿ ಸಿಲ್ವೇನ್ ಫಿಲಿಯೋಜಾ ದಂಪತಿ ಉತ್ತೇಜಿಸಿದ್ದಾರೆ.

ಸಂಸ್ಕೃತ ಭಾರತದ ನೆಲದಲ್ಲಿ ಜನ್ಮ ಪಡೆದ ಪ್ರತಿಷ್ಠಿತ ಹಾಗೂ ಪ್ರಾಚೀನ ಭಾಷೆ. ಇಂತಹ ಭಾಷೆಯನ್ನು ಭಾರತದ 140 ಕೋಟಿಯಲ್ಲಿ ಕೆಲವೇ ಕೆಲವು ಜನರು ಸಮಗ್ರವಾಗಿ ಅಧ್ಯಯನ ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಫ್ರಾನ್ಸ್ ಮೂಲದ ವ್ಯಕ್ತಿಯೊಬ್ಬರು ಸಂಸ್ಕೃತ ಭಾಷೆಯನ್ನು ತಮ್ಮ ಉಸಿರಾಗಿಸಿಕೊಂಡು ಬಹು ಪ್ರಕಾರದಲ್ಲಿ ಅಧ್ಯಯನ ಮಾಡುತ್ತಿದ್ದಾರೆ. 87 ವರ್ಷ ವಯಸ್ಸಿನ ಡಾ.ಪಿಯರಿ ಸಿಲ್ವೇನ್ ಫಿಲಿಯೋಜಾ ಇಳಿ ವಯಸ್ಸಿನಲ್ಲೂ ಸಂಸ್ಕೃತ ಅಧ್ಯಯನದಲ್ಲಿ ತೊಡಗಿದ್ದಾರೆ.

ಪದ್ಮ ವಿಭೂಷಣ ಇಲ್ಲವೇ ಪದ್ಮ ಭೂಷಣ ಪ್ರಶಸ್ತಿಗೆ ಆಯ್ಕೆ ಮಾಡಬೇಕಿತ್ತು



ಡಾ.ವಸುಂದರ ಹಾಗೂ ಡಾ.ಪಿಯರಿ ಸಿಲ್ವೇನ್ ಫಿಲಿಯೋಜಾ ದಂಪತಿ

ಸಂಸ್ಕೃತ ಭಾಷೆಯಲ್ಲಿ ಪಾಂಡಿತ್ಯ ಹೊಂದಿರುವ ನನ್ನ ಪತಿಗೆ ಭಾರತ ಸರ್ಕಾರ ಪದ್ಮ ವಿಭೂಷಣ ಅಥವಾ ಪದ್ಮ ಭೂಷಣ ಪ್ರಶಸ್ತಿಗೆ ಆಯ್ಕೆ ಮಾಡಬೇಕಿತ್ತು. ಈ ಬಗ್ಗೆ ಭಾರತ ಸರ್ಕಾರ ಗಮನ ಹರಿಸಬೇಕಿತ್ತು ಎಂದು ಡಾ.ವಸುಂದರ ಫಿಲಿಯೋಜಾ ಹೇಳಿದರು. ಯೂರೋಪಿನ ಬಹಳಷ್ಟು ಜನರು ಭಾಷಾ ಅಧ್ಯಯನಕ್ಕೆ ತಮಿಳುನಾಡು ಸೇರಿದಂತೆ ಕೆಲವು ರಾಜ್ಯಗಳಿಗೆ ಹೋಗುತ್ತಾರೆ. ಆದರೆ ನಾನು ನನ್ನ ಪತಿಯನ್ನು ಕರ್ನಾಟಕಕ್ಕೆ ಕರೆದುಕೊಂಡು ಬಂದೆ. ಮೊದಲೆ ಸಂಸ್ಕೃತದ ಬಗ್ಗೆ ಅಧ್ಯಯನ ನಡೆಸುತ್ತಿದ್ದ ನನ್ನ ಪತಿಗೆ ಮೈಸೂರಿಗೆ ಬಂದ ಮೇಲೆ ಸಂಸ್ಕೃತದ ಮೇಲಿನ ಅಧ್ಯಯನ ಮತ್ತಷ್ಟು ಪರಿಣಾಮಕಾರಿಯಾಯಿತು ಎಂದರು.

ನಾನು ಕೂಡ 35 ಪುಸ್ತಕಗಳನ್ನು ಬರೆದಿದ್ದೇನೆ. ಸಂಸ್ಕೃತ ಭಾಷೆಯ ಕೆಲವು ಪುಸ್ತಕಗಳನ್ನು ಫ್ರೆಂಚ್ ಭಾಷೆಗೆ ಅನುವಾದಿಸಿದ್ದೇನೆ. ಪ್ರತಿ ವರ್ಷ ಫ್ರಾನ್ಸ್‌ನಲ್ಲಿ ಸಂಸ್ಕೃತ ದಿವಸ ಆಚರಣೆ ಮಾಡುತ್ತೇನೆ ಎಂದರು.

ನನ್ನ ಪತಿ ಫ್ರಾನ್ಸ್‌ನವರಾದರೂ ಭಾರತ ಹಾಗೂ ಸಂಸ್ಕೃತ ನಮ್ಮ ಬದುಕಿಗೆ ಬೆಸೆದಿದೆ. ಈ ಕಾರಣದಿಂದಲೇ ನಮ್ಮ ಇಬ್ಬರು ಮಕ್ಕಳಿಗೆ ಮನೋನ್ಮನಿ ಹಾಗೂ ಬಾಮತಿ ಹೆಸರಿಟ್ಟಿದ್ದೇವೆ. ಅವರಿಬ್ಬರು ಪ್ಯಾರಿಸ್‌ನಲ್ಲಿದ್ದು ಅವರ ಮಕ್ಕಳಿಗೂ ಭಾರತೀಯ ಮೂಲದ ಹೆಸರುಗಳನ್ನು ನಾಮಕರಣ ಮಾಡಿದ್ದೇವೆ ಎಂದು ಡಾ.ವಸುಂದರ ಫಿಲಿಯೋಜಾ ತಿಳಿಸಿದರು.

ಸಂಸ್ಕೃತ ಭಾಷೆ ಕಬ್ಬಿಣದ ಕಡಲೆಯಲ್ಲ

ಸಂಸ್ಕೃತ ಭಾಷೆ ಕಲಿಕೆ ಕಬ್ಬಿಣದ ಕಡಲೆಯಲ್ಲ. ಆಸಕ್ತಿ ಹಾಗೂ ಶ್ರಮ ಇದ್ದರೆ ಮಾತ್ರ ಸಂಸ್ಕೃತ ಭಾಷೆ ಕಲಿಕೆ ಸುಲಲಿತವಾಗಿರುತ್ತದೆ ಎಂದು ಪ್ರದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ.ಪಿಯರಿ ಸಿಲ್ವೇನ್ ಫಿಲಿಯೋಜಾ ಅಭಿಪ್ರಾಯಪಟ್ಟಿದ್ದಾರೆ.

ಪದ್ಮಶ್ರೀ ಪ್ರಶಸ್ತಿ ದೊರೆತ ಹಿನ್ನೆಲೆಯಲ್ಲಿ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಡಾ.ಪಿಯರಿ ಸಿಲ್ವೇನ್ ಫಿಲಿಯೋಜಾ, ಸಂಸ್ಕೃತ ಭಾಷೆ ಅರಿಯಲು ಮೊದಲು ವ್ಯಾಕರಣ ಅರಿಯಬೇಕು. ವ್ಯಾಕರಣ ತಿಳಿದರೆ ಸಂಸ್ಕೃತ ಸುಲಭವಾಗಿ ಕಲಿಯಬಹುದು. ಈ ಮೂಲಕ ಸಂಸ್ಕೃತ ಸಾಹಿತ್ಯವನ್ನು ಕರಗತ ಮಾಡಿಕೊಳ್ಳಬಹುದು ಎಂದರು.

ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿ ನನಗೆ ಸಿಗುತ್ತದೆ ಎಂದು ನಿರೀಕ್ಷೆ ಮಾಡಿರಲಿಲ್ಲ. ಮಂಗಳವಾರ ಫ್ರಾನ್ಸ್ ರಾಯಭಾರ ಕಚೇರಿಯಿಂದ ನನಗೆ ದೂರವಾಣಿ ಕರೆ ಬಂದಿತು. ನೀವು ಭಾರತ ಸರ್ಕಾರ ಕೊಡುವ ಪದ್ಮಶ್ರೀ ಪ್ರಶಸ್ತಿಗೆ ಆಯ್ಕೆಯಾಗಿದ್ದೀರಾ. ಈ ಪ್ರಶಸ್ತಿಯನ್ನು ಸ್ವೀಕರಿಸಲು ನೀವು ಸಿದ್ಧರೆ ಎಂದು ಕೇಳಿದಾಗ ನಾನು ಸಂತೋಷದಿಂದ ಒಪ್ಪಿಕೊಂಡೆ ಎಂದು ತಿಳಿಸಿದರು.

ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಭಾರತದ ಗಣರಾಜ್ಯೋತ್ಸವ ಕಾರ್ಯಕ್ರಮಕ್ಕೆ ಆಗಮಿಸುತ್ತಿದ್ದ ಸಂದರ್ಭದಲ್ಲಿ ಫ್ರಾನ್ಸ್ ಮತ್ತು ಭಾರತದ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಪದ್ಮಶ್ರೀ ಪ್ರಶಸ್ತಿಗೆ ಫ್ರಾನ್ಸ್ ದೇಶದ ನನ್ನ ಹೆಸರು ಶಿಫಾರಸು ಮಾಡಿದೆ ಎಂದರು. ನಾವು ವಾಸ ಮಾಡಲು ಮೈಸೂರು ನಗರವನ್ನು ಆಯ್ಕೆ ಮಾಡಿಕೊಳ್ಳಲು ಬಲವಾದ ಕಾರಣವಿದೆ. ಮೈಸೂರು ಸಾಂಸ್ಕೃತಿಕ ರಾಜಧಾನಿಯಾಗಿದ್ದು, ಇಲ್ಲಿ ಪ್ರಾಚ್ಯವಸ್ತು ಸಂಶೋಧನಾಲಯವಿದೆ. ಇಲ್ಲಿ ಸಂಸ್ಕೃತ ಭಾಷೆ ಅಧ್ಯಯನ ಮಾಡಲು ಸೂಕ್ತ ಸ್ಥಳ. ಈ ಹಿನ್ನೆಲೆಯಲ್ಲಿ ಮೈಸೂರು ನಗರವನ್ನು ಆಯ್ಕೆ ಮಾಡಿಕೊಂಡಿದ್ದೆವು ಎಂದು ಡಾ.ಪಿಯರಿ ಸಿಲ್ವೇನ್ ಫಿಲಿಯೋಜಾ ತಿಳಿಸಿದರು.

ಫ್ರಾನ್ಸ್ ದೇಶದಲ್ಲಿ 1850ರ ಸಮಯದಲ್ಲಿ ಸಂಸ್ಕೃತ ಹಾಗೂ ಚೈನಾ ಭಾಷೆ ಕಲಿಕೆಗೆ ಅವಕಾಶ ಮಾಡಿಕೊಡಲಾಯಿತು. ಅಂದಿನಿಂದಲೂ ಫ್ರೆಂಚ್ ಹಾಗೂ ಸಂಸ್ಕೃತ ಭಾಷೆಯ ನಡುವಿನ ಸರಪಳಿ ಬೆಸೆಯುತ್ತಾ ಹೋಯಿತು. ಭಾರತದಲ್ಲಿ ಫ್ರೆಂಚ್ ಆಡಳಿತ ಹೊಂದಿದ್ದ ಪಾಂಡಿಚೇರಿಗೆ ನಮ್ಮ ತಂದೆ ಆಗಾಗೆ ಬರುತ್ತಿದ್ದರು. ಸಂಸ್ಕೃತ ಪಂಡಿತರೊಂದಿಗೆ ನಮ್ಮ ತಂದೆ ಬೆರೆಯುತ್ತಿದ್ದರು. ಅವರೊಡನೆ ಪಾಂಡಿಚೇರಿಗೆ ಬಂದ ಸಂದರ್ಭದಲ್ಲಿ ಚಿಕ್ಕ ವಯಸ್ಸಿಂದ ಸಂಸ್ಕೃತ ಭಾಷೆಯ ಬಗ್ಗೆ ಒಲವು ಬೆಳೆಸಿಕೊಂಡೆ. ಇದರಿಂದ ಸಂಸ್ಕೃತ ಭಾಷೆಯ ಅಧ್ಯಯನವನ್ನೆ ಮೂಲವಾಗಿಸಿಕೊಂಡೆ ಎಂದು ಡಾ.ಪಿಯರಿ ಸಿಲ್ವೇನ್ ಫಿಲಿಯೋಜಾ ಸ್ಪಷ್ಟಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ತವರು ಮೈಸೂರಿನಲ್ಲೊಂದು ತಬರನ ಕಥೆ ನಿದರ್ಶನ

ಮರಣ ಪ್ರಮಾಣ ಪತ್ರಕ್ಕಾಗಿ ಸರ್ಕಾರಿ ಕಚೇರಿಗೆ ಅಲೆಯುತ್ತಿರುವ ಕಡುಬಡ ಕುಟುಂಬ!

ಮೈಸೂರು, ಜ.29(ಬಿಎಲ್‌ಯು)– ಮೈಸೂರು ನಗರದಲ್ಲಿ ಮೃತಪಟ್ಟ ಮಹಿಳೆಯ ಮರಣ ಪ್ರಮಾಣ ಪತ್ರ ಪಡೆಯಲು ಕುಟುಂಬಸ್ಥರು ಸರ್ಕಾರಿ ಕಚೇರಿಗಳಿಗೆ ಅಲೆದು ದಾರಿ ಸವೆಸಿದ್ದಾರೆ. ಜಿಲ್ಲಾಧಿಕಾರಿಗಳಿಗೂ ಮನವಿ ಮಾಡಿದರೂ ಇನ್ನು ಕೂಡ ಮರಣ ಪ್ರಮಾಣಪತ್ರ ಪಡೆಯಲು ಸಾಧ್ಯವಾಗದೇ ಸರ್ಕಾರದ ಅವ್ಯವಸ್ಥೆ, ಅಧಿಕಾರಿಗಳ ಬೇಜವಾಬ್ದಾರಿತನಕ್ಕೆ ಈ ಪ್ರಕರಣ ಕೈಗನ್ನಡಿಯಾಗಿದೆ.

ಮೈಸೂರಿನ ಹಳೆ ಕೆಸರೆ–ನಗುವನಹಳ್ಳಿ ಮುಖ್ಯ ರಸ್ತೆಯಲ್ಲಿ ನರ್ಮ್ ಯೋಜನೆಯಡಿ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ನಿರ್ಮಾಣವಾಗಿರುವ ಮನೆಯಲ್ಲಿ ಭಾಗ್ಯಮ್ಮ ಎಂಬುವರು ಡಿಸೆಂಬರ್ 3, 2023 ರಂದು ಅನಾರೋಗ್ಯದಿಂದ ಸಾವಿಗೀಡಾಗಿದ್ದರು. ಮೈಸೂರಿನ ಬನ್ನಿ ಮಂಟಪದ ಜೋಡಿ ತೆಂಗಿನಮರ ಸ್ಮಶಾನದಲ್ಲಿ ಡಿಸೆಂಬರ್ 4ರಂದು ಅವರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಭಾಗ್ಯಮ್ಮ ಪುತ್ರ ಯೋಗೇಶ್ ಡಿಸೆಂಬರ್ 16, 2023 ರಂದು ಮರಣ ಪ್ರಮಾಣ ಪತ್ರಕ್ಕಾಗಿ ಮೈಸೂರು ನಗರ ಪಾಲಿಕೆಯಲ್ಲಿ ಅರ್ಜಿ ಸಲ್ಲಿಸಿದರು. ಭಾಗ್ಯಮ್ಮ ಮರಣ ಹೊಂದಿರುವ ಸ್ಥಳ ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಮರಣ ಪ್ರಮಾಣ ಪತ್ರ ನೀಡಲು ಪಾಲಿಕೆ ಅಧಿಕಾರಿಗಳು ನಿರಾಕರಿಸಿದರು. ನಂತರ ಯೋಗೇಶ್ ಜಿಲ್ಲಾಧಿಕಾರಿ ಕಚೇರಿಗೆ ದೂರು ನೀಡಿದರು. ಜಿಲ್ಲಾಧಿಕಾರಿ ಕಚೇರಿ ನೀಡಿದ ಸೂಚನೆ ಮೇರೆಗೆ ನಗರ ಪಾಲಿಕೆ ಅಧಿಕಾರಿಗಳು ಭಾಗ್ಯಮ್ಮ ಅವರ ಮನೆಗೆ ಭೇಟಿ ನೀಡಿ ಮಾಹಿತಿ ಕಲೆ ಹಾಕಿದರು. ಆದರೆ ಭಾಗ್ಯಮ್ಮ ಮರಣ ಹೊಂದಿರುವ ವಿಳಾಸ ಮೈಸೂರು ನಗರ ಪಾಲಿಕೆಯ ವಲಯ ಕಚೇರಿ– 8ರ ವ್ಯಾಪ್ತಿಗೆ ಬರುವುದಿಲ್ಲ ಎಂದು ನಗರ ಪಾಲಿಕೆಯ ವಲಯ ಆಯುಕ್ತರು ಲಿಖಿತ ಸ್ಪಷ್ಟನೆ ನೀಡಿದರು.



ಭಾಗ್ಯಮ್ಮ

ತರುವಾಯ ಜಿಲ್ಲಾಧಿಕಾರಿ ಕಚೇರಿ ಸಲಹೆಯಂತೆ ಮರಣ ಪ್ರಮಾಣ ಪತ್ರಕ್ಕಾಗಿ ಯೋಗೇಶ್, ಮೈಸೂರು ತಹಶೀಲ್ದಾರ್ ಕಚೇರಿಗೆ ಅರ್ಜಿ ಸಲ್ಲಿಸಿದರು. ಆದರೆ ಭಾಗ್ಯಮ್ಮ ಮರಣ ಹೊಂದಿರುವ ಸ್ಥಳವು ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿದೆ. ಆದ ಕಾರಣ ನಗರ ಪಾಲಿಕೆಯಲ್ಲಿಯೇ ಮರಣ ಪ್ರಮಾಣ ಪತ್ರ ಪಡೆಯಿರಿ ಎಂದು ಸಲಹೆ ನೀಡಿ, ತಹಶೀಲ್ದಾರ್ ಕಚೇರಿ ಲಿಖಿತ ಪತ್ರ ನೀಡಿ ಕೈ ತೊಳೆದುಕೊಂಡಿದೆ.

ನಗರ ಪಾಲಿಕೆ ಹಾಗೂ ತಹಶೀಲ್ದಾರ್ ಕಚೇರಿಯಲ್ಲಿ ಮರಣ ಪ್ರಮಾಣ ಪತ್ರ ಸಿಗದಿದ್ದಾಗ ಯೋಗೇಶ್ ಮತ್ತೆ ಜಿಲ್ಲಾಧಿಕಾರಿ ಕಚೇರಿ ಕದ ತಟ್ಟಿದರು. ಭಾಗ್ಯಮ್ಮ ಮರಣ ಹೊಂದಿದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡುತ್ತೇವೆ. ನಂತರ ಏನು ಮಾಡಬೇಕೆಂದು ನಿರ್ಧರಿಸುತ್ತೇವೆ ಎಂದು ಜಿಲ್ಲಾಧಿಕಾರಿ ಕಚೇರಿಯವರು ಭರವಸೆ ನೀಡಿದ್ದಾರೆ. ಆದರೆ ವಾರ ಕಳೆದರೂ ಇನ್ನು ಕೂಡ ಜಿಲ್ಲಾಧಿಕಾರಿ ಕಚೇರಿಯಿಂದ ಯಾರೂ ಬಂದಿಲ್ಲ.

ಇದರಿಂದ ಮರಣ ಪ್ರಮಾಣ ಪತ್ರ ಪಡೆಯಲು ಮೃತ ಭಾಗ್ಯಮ್ಮ ಪುತ್ರ ಯೋಗೇಶ್ ಪ್ರತಿನಿತ್ಯ ಒಂದು ಕಚೇರಿಯಿಂದ ಮತ್ತೊಂದು ಕಚೇರಿಗೆ ತಬರನಂತೆ ಅಲೆದು ಅಲೆದು ದಾರಿ ಸವೆಸಿದ್ದಾರೆ. ಕೊಳಗೇರಿ ನಿವಾಸಿಗಳಿಗೆ ಮರಣ ನಂತರ ದೊರೆಯುವ ಸರ್ಕಾರದ ಸವಲತ್ತುಗಳ ಪಡೆಯಲು ಬಡ ಕುಟುಂಬ ಒಂದು ದಾಖಲೆಗಾಗಿ ಅಲೆಯುವ ಪರಿಸ್ಥಿತಿ ಮುಖ್ಯಮಂತ್ರಿ ಸಿದ್ದರಾಮಯ್ಯರ ತವರು ಜಿಲ್ಲೆಯಲ್ಲೇ ನಿರ್ಮಾಣವಾಗಿರುವುದು ಇಲ್ಲಿನ ಅಧಿಕಾರಿಗಳ ಕಾರ್ಯವೈಖರಿ ಕನ್ನಡಿ ಹಿಡಿಯುತ್ತಿದೆ. ಸರ್ಕಾರದ ಕಚೇರಿಯಲ್ಲಿ ಏನಾದರೊಂದು ಕೆಲಸ ಮಾಡಿಸಬೇಕೆಂದರೆ ಜನ ಸಾಮಾನ್ಯರನ್ನು ಹೇಗೆ ಅಲೆಸುತ್ತಾರೆ, ಯಾವ ರೀತಿ ಬೇಜವಾಬ್ದಾರಿತನ ಮರೆಯುತ್ತಾರೆ ಎಂಬುದಕ್ಕೆ ಈ ಪ್ರಕರಣ ಸ್ಪಷ್ಟ ನಿದರ್ಶನವಾಗಿದೆ.

ಬೆಂಬಲ ಬೆಲೆಯಡಿ ರೈತರಿಂದ ಭತ್ತ, ರಾಗಿ ಖರೀದಿ ಪ್ರಕ್ರಿಯೆ ಆರಂಭ

ಮೈಸೂರು, ಜ. 29(ಆರ್‌ಕೆ)– ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಭತ್ತ ಮತ್ತು ರಾಗಿ ಖರೀದಿ ಪ್ರಕ್ರಿಯೆ ಆರಂಭಿಸುವಂತೆ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.



ರಾಜೇಂದ್ರ

ತಮ್ಮ ಕಚೇರಿ ಸಭಾಂಗಣದಲ್ಲಿ ಇಂದು ಜಿಲ್ಲಾ ಮಟ್ಟದ ಟಾಸ್ಕ್‌ಫೋರ್ಸ್ ಸಭೆ ನಡೆಸಿದ ಅವರು, ಕೇಂದ್ರ ಸರ್ಕಾರ ನಿಗದಿಪಡಿಸಿರುವ ಮಾನದಂಡಗಳನ್ನು ಅನುಸರಿಸಿ ಗುಣಮಟ್ಟ ಖಾತರಿಪಡಿಸಿಕೊಂಡು ಭತ್ತ ಮತ್ತು ರಾಗಿ ಖರೀದಿಸುವಂತೆ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲೆಯ ಎಲ್ಲಾ ಖರೀದಿ ಕೇಂದ್ರಗಳಿಗೆ ಕೃಷಿ ಅಧಿಕಾರಿಗಳು ಗ್ರೇಡರ್‌ಗಳನ್ನು ನಿಯೋಜಿಸಿ ಭತ್ತ ರಾಗಿ ಖರೀದಿ ದಿನಾಂಕ, ಸಮಯದ ಬಗ್ಗೆ ರೈತರಿಗೆ ಮಾಹಿತಿ ನೀಡಿ ತಿಳುವಳಿಕೆ ಮೂಡಿಸಬೇಕು, ತೂಕ, ಅಳತೆಯಲ್ಲಿ ವ್ಯತ್ಯಾಸವಾಗದಂತೆ ಎಚ್ಚರ ವಹಿಸಿ ರೈತರಿಗೆ ನಷ್ಟವಾಗದಂತೆ ನೋಡಿಕೊಳ್ಳಬೇಕು ಎಂದು ಅವರು ಸೂಚನೆ ನೀಡಿದರು. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕಿ ಕುಮುದಾ ಶರತ್, ರಾಜ್ಯ ಉಗ್ರಾಣ ನಿಗಮದ ರೇಣುಕಾಸ್ವಾಮಿ, ಕೃಷಿ ಇಲಾಖೆ, ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಸದಸ್ಯರು ಸಭೆಯಲ್ಲಿ ಉಪಸ್ಥಿತರಿದ್ದರು.

ಜಾತಿ ಗಣತಿ ವರದಿ ಮತ್ತಷ್ಟು ವಿಳಂಬ ಸಾಧ್ಯತೆ

ಬೆಂಗಳೂರು: ಬಹುನಿರೀಕ್ಷಿತ ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ(ಜಾತಿ ಗಣತಿ) ವರದಿ ಸದ್ಯಕ್ಕೆ ಸರ್ಕಾರಕ್ಕೆ ಸಲ್ಲಿಕೆಯಾಗುವ ಯಾವುದೇ ಲಕ್ಷಣಗಳು ಕಂಡುಬರುತ್ತಿಲ್ಲ. ಏಕೆಂದರೆ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಅವರ ಅವಧಿಯನ್ನು ರಾಜ್ಯ ಸರ್ಕಾರ ಎರಡನೇ ಬಾರಿ ವಿಸ್ತರಣೆ ಮಾಡಿದೆ. ಹೀಗಾಗಿ ಜಾತಿ ಗಣತಿ ವರದಿ ಮತ್ತಷ್ಟು ವಿಳಂಬವಾಗುವ ಸಾಧ್ಯತೆ ಇದೆ. ಸಿಎಂ ಸಿದ್ದರಾಮಯ್ಯ ಅವರು ಜಯಪ್ರಕಾಶ್ ಹೆಗ್ಡೆ ಅವರ ಅವಧಿಯನ್ನು ಫೆ.15ರವರೆಗೂ ವಿಸ್ತರಣೆ ಮಾಡಿ ಸೋಮವಾರ ಆದೇಶ ಹೊರಡಿಸಿದ್ದಾರೆ. ಕಳೆದ ನವೆಂಬರ್‌ನಲ್ಲೇ ಜಯ ಪ್ರಕಾಶ್ ಹೆಗ್ಡೆ ಅವರ ಅಧಿಕಾರದ ಅವಧಿ ಪೂರ್ಣಗೊಂಡಿತ್ತು ಆದರೆ ಸರ್ಕಾರ ಜ.31ರವರೆಗೂ ಅವರ ಅವಧಿಯನ್ನು ವಿಸ್ತರಣೆ ಮಾಡಿತ್ತು.

ಮೂರು ವರ್ಷದಲ್ಲಿ ಭಾರತ 5 ಟ್ರಿಲಿಯನ್ ಆರ್ಥಿಕತೆ

ನವದೆಹಲಿ: ಕೇಂದ್ರದ ಮಧ್ಯಂತರ ಬಜೆಟ್ ಮಂಡನೆಗೆ ಎರಡು ದಿನ ಬಾಕಿ ಉಳಿದಿರುವ ಬೆನ್ನಲ್ಲೇ 2024–25ನೇ ಹಣಕಾಸು ವರ್ಷದಲ್ಲಿ ಭಾರತದ ಆರ್ಥಿಕ ಬೆಳವಣಿಗೆ ದರವು (ಜಿಡಿಪಿ) ಶೇ 7ರಷ್ಟು ಆಗಬಹುದು ಎಂಬ ನಿರೀಕ್ಷೆ ಇದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ವರದಿ ಸೋಮವಾರ ಹೇಳಿದೆ.

2023–24ನೇ ಹಣಕಾಸು ವರ್ಷದಲ್ಲಿ ಜಿಡಿಪಿ ಬೆಳವಣಿಗೆಯು ಶೇ 7.3ರಷ್ಟು ಇರಲಿದೆ ಎಂದು ಅಂದಾಜಿಸಲಾಗಿದೆ. ಹಿಂದಿನ ಹಣಕಾಸು ವರ್ಷದಲ್ಲಿ ಶೇ 7.2ರಷ್ಟಿತ್ತು. ವಿಶ್ವದ ಆರ್ಥಿಕತೆಯು ಶೇ 2ರಷ್ಟು ಬೆಳವಣಿಗೆ ಸಾಧಿಸಲು ಹರಸಾಹಸಪಡುತ್ತಿರುವ ನಡುವೆಯೇ ಈ ವರದಿ ಪ್ರಕಟಿಸಲಾಗಿದೆ. ಮುಂದಿನ ಮೂರು ವರ್ಷಗಳಲ್ಲಿ ಭಾರತವು ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಲಿದೆ. ಜಿಡಿಪಿ ಗಾತ್ರವು ರೂ. 415 ಲಕ್ಷ ಕೋಟಿಗೆ ತಲುಪಲಿದೆ (5 ಟ್ರಿಲಿಯನ್ ಡಾಲರ್). 2030ರ ವೇಳೆಗೆ ರೂ. 581 ಲಕ್ಷ ಕೋಟಿಗೆ ತಲುಪಲಿದೆ (7 ಟ್ರಿಲಿಯನ್ ಡಾಲರ್). 2023–24ರಲ್ಲಿ ರೂ. 307 ಲಕ್ಷ ಕೋಟಿಗೆ (3.7 ಟ್ರಿಲಿಯನ್ ಡಾಲರ್) ಮುಟ್ಟಲಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಕೋವಿಡ್ ಸಾಂಕ್ರಾಮಿಕ ನಂತರದ ನಾಲ್ಕು ವರ್ಷಗಳಲ್ಲಿ ದೇಶದ ಜಿಡಿಪಿ ಸತತವಾಗಿ ಶೇ 7ಕ್ಕಿಂತಲೂ ಹೆಚ್ಚು ಬೆಳವಣಿಗೆ ದಾಖಲಿಸುತ್ತಿದೆ. ಇದು ಅತ್ಯುತ್ತಮ ಸಾಧನೆಯಾಗಿದೆ' ಎಂದು ಮುಖ್ಯ ಹಣಕಾಸು ಸಲಹೆಗಾರ ವಿ. ಅನಂತ ನಾಗೇಶ್ವರನ್ ಹೇಳಿದ್ದಾರೆ.

ಮುಕ್ತ ವಿವಿಯಲ್ಲಿ ತರಬೇತಿ ಶಿಬಿರದ ಸಮಾರೋಪ

ಮೈಸೂರು, ಜ.29(ಬಿಎಲ್‌ಯು)– ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರವು ಐಎಎಸ್ ಮತ್ತು ಕೆಎಎಸ್ ಪರೀಕ್ಷೆಗಳಿಗೆ ಆಯೋಜಿಸಿರುವ 50 ದಿನಗಳ ತರಬೇತಿ ಶಿಬಿರದ ಸಮಾರೋಪ ಸಮಾರಂಭ ಫೆಬ್ರವರಿ 1 ರಂದು ನಡೆಯಲಿದೆ. ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಅಂದು ಬೆಳಿಗ್ಗೆ 11 ಗಂಟೆಗೆ ನಡೆಯುವ ಸಮಾರಂಭದಲ್ಲಿ ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪಾನಾಗ್ ಶಿಬಿರಾರ್ಥಿಗಳಿಗೆ ಶುಭ ಹಾರೈಸಲಿದ್ದಾರೆ.

ಮೈಸೂರಿನ ಚಾಮರಾಜೇಂದ್ರ ಮೃಗಾಲಯದ ಕಾರ್ಯನಿರ್ವಾಹಕ ಅಧಿಕಾರಿ ಡಿ.ಮಹೇಶ್ ಕುಮಾರ್ ಮುಕ್ತ ಭಂಡಾರ ಅಧ್ಯಯನ ಪುಸ್ತಕ ಬಿಡುಗಡೆ ಮಾಡಿ ಶಿಬಿರಾರ್ಥಿಗಳಿಗೆ ಶುಭ ಕೋರುವರು.

ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದು, ಕುಲಸಚಿವ ಪ್ರೊ. ಕೆ.ಎಲ್.ಎನ್.ಮೂರ್ತಿ ಉಪಸ್ಥಿತರಿರುವರು.


ವಿಶ್ವವಿದ್ಯಾನಿಲಯದಲ್ಲಿ ಡಿಸೆಂಬರ್ 8 ರಂದು ಆರಂಭವಾದ ತರಬೇತಿ ಶಿಬಿರದಲ್ಲಿ 529 ಅಭ್ಯರ್ಥಿಗಳು ಭಾಗವಹಿಸಿ, ತರಬೇತಿ ಪಡೆದಿದ್ದಾರೆ ಎಂದು ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ತಿಳಿಸಿದ್ದಾರೆ.

ಇಂದು ರಾಜ್ಯ ಬಜೆಟ್ ಪೂರ್ವಭಾವಿ ಸಮಾಲೋಚನಾ ಸಭೆ

ಮೈಸೂರು, ಜ. 29(ಆರ್‌ಕೆ)– ಮೈಸೂರು ಜಿಲ್ಲಾ ಪತ್ರಕರ್ತರ ಸಂಘವು ನಾಳೆ (ಜ. 30) ಬೆಳಗ್ಗೆ 11 ಗಂಟೆಗೆ ಜೆಎಲ್‌ಬಿ ರಸ್ತೆಯ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಮೀಟಿಂಗ್ ಹಾಲ್‌ನಲ್ಲಿ ರಾಜ್ಯ ಬಜೆಟ್‌ನಲ್ಲಿ ಸೇರ್ಪಡೆಯಾಗುವ ಮೈಸೂರು ನಗರ ಮತ್ತು ಜಿಲ್ಲೆಯ ಅಭಿವೃದ್ಧಿ ಕುರಿತಂತೆ ಪೂರ್ವಭಾವಿ ಸಮಾಲೋಚನಾ ಸಭೆಯನ್ನು ಏರ್ಪಡಿಸಿದೆ.

ಶಾಸಕರಾದ ಕೆ. ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ಜಿ.ಟಿ. ದೇವೇಗೌಡ, ತನ್ವೀರ್ ಸೇಠ್, ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮರಿತಿಬ್ಬೇಗೌಡ, ಎ.ಹೆಚ್. ವಿಶ್ವನಾಥ್ ಸೇರಿದಂತೆ ಜನಪ್ರತಿನಿಧಿಗಳು, ಕೈಗಾರಿಕೋದ್ಯಮಿಗಳು, ಮಾಜಿ ಮೇಯರ್‌ಗಳು, ಪಾರಂಪರಿಕ ತಜ್ಞರು, ಯೋಗ ಶಿಕ್ಷಣ ಸಂಸ್ಥೆ, ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟ, ಹೋಟೆಲ್ ಮಾಲೀಕರ ಸಂಘ, ವಕೀಲರ ಸಂಘ, ಹಿರಿಯ ಪತ್ರಕರ್ತರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ವಿವಿಧ ಕನ್ನಡಪರ ಸಂಘಟನೆಗಳು, ಯೋಗ ಫೆಡರೇಷನ್, ರೈತ ಸಂಘ, ದಸಂಸ ಸೇರಿದಂತೆ ವಿವಿಧ ಸಂಘಟನೆಗಳ ಪ್ರಮುಖರನ್ನು ಸಭೆಗೆ ಆಹ್ವಾನಿಸಲಾಗಿದೆ. ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಸಮಗ್ರ ಅಭಿವೃದ್ಧಿ ಕುರಿತಂತೆ ಸುದೀರ್ಘ ಚರ್ಚೆ ನಡೆಸಿ ಅಭಿಪ್ರಾಯ, ಸಲಹೆಗಳನ್ನೊಳಗೊಂಡ ನಿರ್ಣಯಗಳ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ ಫೆಬ್ರವರಿ ಮಾಹೆಯಲ್ಲಿ ಮಂಡನೆಯಾಗುವ ರಾಜ್ಯ ಬಜೆಟ್‌ನಲ್ಲಿ ಸೇರಿಸಿ ಅನುದಾನ ಮೀಸಲಿರಿಸುವಂತೆ ಮನವಿ ಮಾಡುವುದು ಸಭೆಯ ಉದ್ದೇಶವಾಗಿದೆ ಎಂದು ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎಂ. ಸುಬ್ರಹ್ಮಣ್ಯ ತಿಳಿಸಿದ್ದಾರೆ.

ಹಳೇ ಕೆಸರೆ ತ್ಯಾಜ್ಯ ವಿಲೇವಾರಿ ಘಟಕ ಸ್ಥಳಾಂತರಕ್ಕೆ ಆಗ್ರಹಿಸಿ ಪ್ರತಿಭಟನೆ



ಮೈಸೂರಿನ ಹಳೆ ಕೆಸರೆಯಲ್ಲಿರುವ ತ್ಯಾಜ್ಯ ವಿಲೇವಾರಿ ಘಟಕ ಸ್ಥಳಾಂತರಿಸುವಂತೆ ಆಗ್ರಹಿಸಿ ಸ್ಥಳೀಯರು ಪ್ರತಿಭಟನೆ ನಡೆಸಿದರು.

ಮೈಸೂರು, ಜ.29(ಎಂಟಿವೈ)–ಹಳೇ ಕೆಸರೆಯಲ್ಲಿರುವ ಕಸ ವಿಲೇವಾರಿ ಘಟಕವನ್ನು ಬೇರೆಡೆಗೆ ಸ್ಥಳಾಂತರ ಮಾಡುವಂತೆ ಆಗ್ರಹಿಸಿ ಸ್ಥಳೀಯರು ಸೋಮವಾರ ಪ್ರತಿಭಟನೆ ನಡೆಸಿದರು.

ಮೈಸೂರಿನ ಹಳೇ ಕೆಸರೆಯಲ್ಲಿರುವ ಕಸ ವಿಲೇವಾರಿ ಘಟಕದ ಮುಂದೆ ಜನಸ್ಪಂದನ ಸಮಿತಿ ಸದಸ್ಯರು ಹಾಗೂ ಸಿದ್ದಲಿಂಗಪುರ ಗ್ರಾಪಂ ಸದಸ್ಯರ ನೇತೃತ್ವದಲ್ಲಿ ಸ್ಥಳೀಯರು ಪ್ರತಿಭಟನೆ ನಡೆಸಿ, ಮೈಸೂರು ಮಹಾನಗರ ಪಾಲಿಕೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸಿದ್ದಲಿಂಗಪುರ ಗ್ರಾಪಂ. ವ್ಯಾಪ್ತಿಯ ಕೆಸರೆ ಗ್ರಾಮದ ಸರ್ವೆ ನಂ.309 ಮತ್ತು 318ರಲ್ಲಿ ಮೈಸೂರು ಪಾಲಿಕೆ ವತಿಯಿಂದ ಕಸ ವಿಲೇವಾರಿ ಘಟಕ ನಿರ್ಮಿಸಲಾಗಿದೆ. ಈ ಘಟಕಕ್ಕೆ ಮೈಸೂರು ನಗರದಲ್ಲಿ ಸಂಗ್ರಹಿಸಿದ ಕಸವನ್ನು ಹಾಕಲಾಗುತ್ತಿದೆ. ಆದರೆ, ತ್ಯಾಜ್ಯವನ್ನು ಸರಿಯಾಗಿ ವಿಲೇಮಾರಿ ಮಾಡುತ್ತಿಲ್ಲ. ಇದರಿಂದಾಗಿ ಅನೈರ್ಮಲ್ಯ ಉಂಟಾಗಿದೆ. ಕಸವು ಕೊಳೆತು ದುರ್ನಾತ ಬೀರುತ್ತಿದೆ. ಇದರಿಂದ ಘಟಕದ ಸುತ್ತಲು ವಾಸಿಸುವ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ವಿದ್ಯಾರಣ್ಯಪುರಂನ ಸೀವೆಜ್ ಫಾರಂನಲ್ಲಿ ಕಸದ ರಾಶಿಯನ್ನು ಕರಗಿಸಲು, ಅಲ್ಲಿಯ ನಿವಾಸಿಗಳ ಆರೋಗ್ಯದ ಹಿತದೃಷ್ಟಿಯಿಂದ ಪಾಲಿಕೆಯು ಹಳೇ ಕೆಸರೆಯ ಘಟಕದಲ್ಲಿ ಕಸ ಹಾಕುತ್ತಿದೆ. ಮೈಸೂರು ನಗರದಲ್ಲಿ ಸಂಗ್ರಹವಾಗುವ 200 ಟನ್ ಕಸದಲ್ಲಿ 100 ಟನ್ ಕಸವನ್ನು ಈ ಘಟಕದಲ್ಲಿ ತಂದು ಹಾಕಲಾಗುತ್ತಿದೆ. ಇದರಿಂದ ಸುತ್ತಲಿನ ಗ್ರಾಮ, ಪ್ರದೇಶಗಳಿಗೆ ದುರ್ವಾಸನೆ ಹಬ್ಬುತ್ತಿದೆ. ಇಲ್ಲಿಯ ಜನರ ಸ್ವಾಸ್ಥ್ಯ ಹಾಳು ಮಾಡಲಾಗುತ್ತಿದೆ ಎಂದು ಪಾಲಿಕೆ ವಿರುದ್ಧ ಕಿಡಿಕಾರಿದರು.

ಸ್ಥಳಕ್ಕೆ ಆಗಮಿಸಿದ ಪಾಲಿಕೆ ಆಯುಕ್ತ ಅಸಾದ್ ಉರ್ ರೆಹಮಾನ್ ಶರೀಫ್ ಅವರಿಗೆ ಸಿದ್ದಲಿಂಗಪುರ ಗ್ರಾಮ ಪಂಚಾಯಿತಿ ವತಿಯಿಂದ ಮನವಿ ಸಲ್ಲಿಸಲಾಯಿತು. ಪ್ರತಿಭಟನಾಕಾರರ ಸಮಸ್ಯೆ ಆಲಿಸಿದ ಅವರು, ದುರ್ವಾಸನೆ ತಡೆಯಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಭರವಸೆ ನೀಡಿದರು. ಇದಕ್ಕೆ ಪ್ರತಿಭಟನಾಕಾರರು ಮಣಿಯಲಿಲ್ಲ. ನಾಳೆ (ಜ.30) ಸಹ ಪ್ರತಿಭಟನೆಯನ್ನು ಮುಂದುವರಿಸಲು ನಿರ್ಧರಿಸಿದ್ದಾರೆ. ಪ್ರತಿಭಟನೆಯಲ್ಲಿ ಸಿದ್ದಲಿಂಗಪುರ ಗ್ರಾಪಂ ಅಧ್ಯಕ್ಷ ಸಿ.ಮಹದೇಶ್, ಸದಸ್ಯರಾದ ರೇವಣ್ಣ, ವಿಶ್ವನಾಥ್, ಜ್ಯೋತಿ, ಲಲಿತಮ, ಶ್ರೀನಿವಾಸ್, ಅರ್ಪಿತಾ, ಸುಜಾತ, ಆಶಾ ಸೇರಿದಂತೆ 46 ಗ್ರಾಪಂ ಸದಸ್ಯರು ಸೇರಿದಂತೆ ಸಾರ್ವಜನಿಕರು ಪಾಲ್ಗೊಂಡಿದ್ದರು.

ನಕ್ಕರೆ ಅದೇ ಸ್ವರ್ಗ

ಗೆಳೆಯ : ನಿನ್ನ ಹೆಂಡತಿ ಪದೇ ಪದೇ ಹೇಳುವ ಆ ಒಂದೇ ಜೋಕಿಗೆ ಯಾಕೆ ಅಷ್ಟೊಂದು ನಗ್ತೀಯ?

ಆತ : ಏನ್ ಮಾಡಲಿ ? ಅವಳು ನನ್ನ ಹೆಂಡತಿಯಲ್ವಾ? ನಾನು ನಗದಿದ್ದರೆ ಅವಳು ಅದೇ ಜೋಕನ್ನು ಇನ್ನೂ ಐದಾರು ಸಲ ಹೇಳ್ತಾಳೆ, ಅದಕ್ಕಾಗಿ ನಗ್ತೀರ್ನಿ!

ಮೈಸೂರು ಮಿತ್ರ

ಮಂಗಳವಾರ, 30 ಜನವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಸೊಗಸಾಗಿ ಹೇಳುವುದಕ್ಕಿಂತಲೂ ಒಂದು ಕಾರ್ಯವನ್ನು ಚೆನ್ನಾಗಿ ಮಾಡುವುದು ಲೇಸು –ಬೆಂಜ್‌ಮನ್ ಫ್ರಾಂಕ್ಲಿನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಉಣ್ಣದಿದ್ದರೂ ಬುತ್ತಿ ಹೆಗಲ ಮೇಲಿರಬೇಕು

ನಿಮ್ಮ ಪತ್ರಗಳು

■ ನಿರ್ವಹಣೆ ಇಲ್ಲದೆ ಸೊರಗಿದ ಸಿದ್ಧಾರ್ಥ ಬಡಾವಣೆ ಉದ್ಯಾನವನ

ಮಾನ್ಯರೆ,




ಮೈಸೂರಿನ ಸಿದ್ಧಾರ್ಥನಗರ ಬಡಾವಣೆಯ ಲಲಿತ ಮಹಲ್ ರಸ್ತೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಡುವ ತೀರಾ ಚಿಕ್ಕದಾಗಿರುವ ಮೂರು ಪಾರ್ಕ್‌ಗಳು ಸರಣಿಯಾಗಿ ಬಡಾವಣೆ ರಸ್ತೆಗಳ ನಡುವೆ ಸಿದ್ಧಾರ್ಥ ಸ್ಪೋರ್ಟ್ಸ್ ಕ್ಲಬ್‌ನಿಂದ ಕಮಾನು ಗೇಟಿನವರೆಗೆ ನಿರ್ಮಿಸಲಾಗಿದೆ. ಇಲ್ಲಿಯವರೆಗೆ ಈ ಪಾರ್ಕ್‌ಗಳು ಸಮಗ್ರವಾದ ಅಭಿವೃದ್ಧಿ ಹಾಗೂ ಸಮರ್ಪಕ ನಿರ್ವಹಣೆ ಇಲ್ಲದೆ ವಾಯುವಿಹಾರಿಗಳಿಗೆ ಮತ್ತು ಪಕ್ಕದಲ್ಲೇ ಇರುವ ನಿವಾಸಿಗಳಿಗೆ ತುಂಬಾ ತೊಂದರೆಯಾಗುತ್ತಿದೆ. ನಿರ್ವಹಣೆ ಇಲ್ಲದೆ ಮಲೀನ ಗೊಂಡಿರುವ ಪಾರ್ಕ್‌ಗಳಿಂದ ವಾಯುವಿಹಾರಿಗಳಿಗೆ ಶುದ್ಧಗಾಳಿಯ ಬದಲಾಗಿ ಮಾಲಿನ್ಯದಿಂದ ಕೂಡಿದ ಗಾಳಿಯನ್ನೇ ಸೇವಿಸುವಂತಾಗಿದೆ. ಈ ಪಾರ್ಕ್‌ಗಳಿಗೆ ಹೆಚ್ಚಾಗಿ ಎಪ್ಪತ್ತು ದಾಟಿದ ವೃದ್ಧರು, ನಿವೃತ್ತ ಅಧಿಕಾರಿಗಳು ಹಾಗೂ ಮಹಿಳೆಯರು ಬರುತ್ತಾರೆ. ರಜಾ ದಿನಗಳಲ್ಲಿ ಮಕ್ಕಳು ಮತ್ತು ಪೋಷಕರಿಂದ ತುಂಬಿರುತ್ತದೆ.

ನಿತ್ಯವೂ ವಾಯುವಿಹಾರಿಗಳು ಅನುಭವಿಸುತ್ತಿರುವ ತೊಂದರೆಗಳಿಂದಾಗಿ ವಾಯುವಿಹಾರಿಗಳೆಲ್ಲರೂ ಸೇರಿ "ಜೈ ಶ್ರೀರಾಮ್ ಉದ್ಯಾನವನ ಅಭಿವೃದ್ಧಿ ಸಮಿತಿ" ಎಂಬ ಸಂಘ ರಚಿಸಿಕೊಂಡು ತಾವುಗಳೇ ಉದ್ಯಾನವನದ ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಮೈಸೂರು ಮಹಾನಗರ ಪಾಲಿಕೆ ಇತ್ತ ಗಮನ ಹರಿಸಬೇಕಾಗಿದೆ.

ಉದ್ಯಾನವನದಲ್ಲಿ ಹಲವಾರು ಸಮಸ್ಯೆಗಳಿವೆ. ಸ್ಪೋರ್ಟ್ಸ್ ಕ್ಲಬ್ ಎದುರಿನ ಪಾರ್ಕ್‌ನಲ್ಲಿ ಮೂರು ದ್ವಾರಗಳ ಮೂಲಕ ವೃದ್ಧರು, ವಿಕಲಚೇತನರು ಹಾಗೂ ಮಕ್ಕಳು ಉದ್ಯಾನವನಕ್ಕೆ ಪ್ರವೇಶಿಸುವುದು ಬಹಳ ಕಷ್ಟವಿದೆ. ಕಾರಣ ರಸ್ತೆಯ ಮಟ್ಟದಿಂದ ನಾಲ್ಕು ಅಡಿಗಿಂತಲೂ ಎತ್ತರ ಇರುವ ಮೆಟ್ಟಿಲುಗಳು ಕಿರಿದಾಗಿ ಮತ್ತು ಕಡಿದಾಗಿರುವುದರಿಂದ ಹಲವರು ಬಿದ್ದಿರುವ ಉದಾಹರಣೆಗಳು ಇವೆ. ಇದನ್ನು ವಿನ್ಯಾಸಕ್ಕೆ ಅನುಗುಣವಾಗಿ ಪುನರ್ ನಿರ್ಮಿಸಬೇಕಾಗಿದೆ. ಉದ್ಯಾನವನದಲ್ಲಿ ಯಥೇಚ್ಛವಾಗಿ ನೀರಿನ ಸೌಲಭ್ಯವಿದ್ದರೂ ವಾರಕ್ಕೊಮ್ಮೆ ಅಥವಾ ಅದಕ್ಕಿಂತಲೂ ಹೆಚ್ಚು ದಿನಗಳ ಅಂತರದಲ್ಲಿ ನೀರುಣಿಸುತ್ತಿದ್ದಾರೆ. ಇದರಿಂದ ಗಿಡಗಳು ಒಣಗಿವೆ. ಹಗಲಿನ ಸಮಯದಲ್ಲಿ ಮುಂಜಾನೆಯಿಂದಲೇ ಯುವ ಪ್ರೇಮಿಗಳು ಪಾದಚಾರಿ ಮಾರ್ಗದ ಬದಿಯ ಬೆಂಚುಗಳ ಮೇಲೆ ಕುಳಿತು ಅಸಭ್ಯವಾಗಿ ವರ್ತಿಸುತ್ತಿರುವುದು ವಾಯುವಿಹಾರಿಗಳಿಗೆ ಅದರಲ್ಲೂ ಮಹಿಳೆಯರು –ಮಕ್ಕಳಿಗೆ ಮುಜುಗರವನ್ನುಂಟು ಮಾಡಿದೆ. ಈ ನಿಟ್ಟಿನಲ್ಲಿ ಸೂಕ್ತ ಕಾನೂನು ವ್ಯವಸ್ಥೆ ಆಗಬೇಕಾಗಿದೆ. ಮಕ್ಕಳ ಆಟಿಕೆ ಸಾಮಾಗ್ರಿಗಳನ್ನು ಅಳವಡಿಸಿರುವ ಆವರಣವು ತೀರಾ ಹದಗೆಟ್ಟಿದ್ದು, ಮಕ್ಕಳು ಆಟವಾಡುವಾಗ ಕೈಕಾಲುಗಳಿಗೆ ಪೆಟ್ಟು ಮಾಡಿಕೊಳ್ಳುತ್ತಿದ್ದಾರೆ. ನಿರ್ಮಾಣದ ಹಂತದಲ್ಲಿ ತಳಕ್ಕೆ ಹಾಕಿದ್ದ ಮರಳು ಇಲ್ಲದಾಗಿರುವುದರಿಂದ ಮಕ್ಕಳಿಗೆ ಇಳಿಜಾರಿನ ಆಟಿಕೆಯಲ್ಲಿ ಜಾರುವುದು ಕಷ್ಟವಾಗಿದೆ. ಆಟಿಕೆ ವಸ್ತುಗಳನ್ನು ದುರಸ್ಥಿಗೊಳಿಸಿ ಒಂದು ಪದರ ದಪ್ಪವಾಗಿ ಮರಳನ್ನು ಹರಡುವುದು ಅವಶ್ಯಕವಾಗಿದೆ. ಸಮಸ್ಯೆಗಳನ್ನೇ ತುಂಬಿಕೊಂಡಿರುವ ಸಿದ್ಧಾರ್ಥ ಬಡಾವಣೆಯ ಪಾರ್ಕ್ ಎಂದು ಮುಕ್ತಿ ಕಾಣುವುದೋ?

–ಮಿರ್ಲೆ ಚಂದ್ರಶೇಖರ್, ಯರಗನಹಳ್ಳಿ ಬಡಾವಣೆ, ಮೈಸೂರು.

■ ಕಾರು ತೆರವುಗೊಳಿಸಿ



ಮಾನ್ಯರೆ,

ಮೈಸೂರಿನ ಕುವೆಂಪುನಗರದ ನವಿಲು ರಸ್ತೆಯ 7ನೇ ಕ್ರಾಸ್‌ನ ಲಿಂಕ್ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಕಾರೊಂದು ಹಲವಾರು ತಿಂಗಳುಗಳಿಂದ ಕೆಟ್ಟು ನಿಂತಿದ್ದು, ಈ ಕಾರಿನಲ್ಲಿ ಹಾವು, ಚೇಳು, ಹೆಗ್ಗಣಗಳು ಸೇರಿಕೊಂಡಿವೆ.

ಹೀಗಾಗಿ, ಈ ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರು ಭಯದಿಂದಲೇ ಓಡಾಡುವ ಪರಿಸ್ಥಿತಿ ಎದುರಾಗಿದೆ. ಜೊತೆಗೆ, ಈ ಕಾರಿನ ಬಳಿ ಮನಸೋ ಇಚ್ಛೆ ಕಸವನ್ನು ಹಾಕಲಾಗುತ್ತಿದ್ದು, ಕಸವನ್ನು ತೆಗೆಯಲು ಹೋಗುವ ಪೌರ ಕಾರ್ಮಿಕರಿಗೆ ಹಲವಾರು ಬಾರಿ ಹಾವು ಕಾಣಿಸಿಕೊಂಡಿದೆ. ಆದ್ದರಿಂದ, ಸಂಬಂಧಪಟ್ಟವರು ಇನ್ನಾದರೂ ಎಚ್ಚೆತ್ತು ಕಾರನ್ನು ತೆರವುಗೊಳಿಸಿ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಬೇಕಿದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

■ ಕುಡಿಯುವ ನೀರಿನ ಘಟಕ ಸರಿಪಡಿಸಿ



ಮಾನ್ಯರೆ,

ಮೈಸೂರಿನ ವಿಜಯನಗರ (ವಾಟರ್ ಟ್ಯಾಂಕ್) ಬಳಿ ಇರುವ ಉಪನೋಂದಣಾಧಿಕಾರಿಯವರ ಕಛೇರಿ (ಸಬ್ ರಿಜಿಸ್ಟ್ರಾರ್ ಕಛೇರಿ)ಯಲ್ಲಿ ಕುಡಿಯುವ ನೀರಿನ ಘಟಕ ಕೆಟ್ಟು ನಿಂತಿದ್ದು, ಕುಡಿಯುವ ನೀರಿನ ವ್ಯವಸ್ಥೆಯಿಲ್ಲದೆ ಸಾರ್ವಜನಿಕರು ಪರದಾಡುವಂತಾಗಿದೆ. ಈ ಕಛೇರಿಯಿಂದ ದೊರೆಯುವ ಸೇವೆಗಳನ್ನು ಪಡೆದುಕೊಳ್ಳಲು ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಬರುತ್ತಾರೆ. ಕುಡಿಯುವ ನೀರಿನ ಸಮಸ್ಯೆ ಗೊತ್ತಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸದೆ ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಆದ್ದರಿಂದ ಕೂಡಲೇ ಇಲ್ಲಿ ಕೆಟ್ಟು ನಿಂತಿರುವ ಕುಡಿಯುವ ಶುದ್ಧ ನೀರಿನ ಘಟಕವನ್ನು ಸಂಬಂಧಪಟ್ಟ ಅಧಿಕಾರಿಗಳು ಸರಿಪಡಿಸಬೇಕೆಂದು ಮನವಿ.


–ನಾಗೇಶ್, ಮಾನಸಗಂಗೋತ್ರಿ, ಮೈಸೂರು.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಬಹುಮುಖಿ

ಗಾಂಧಿ: ಮಾನವ ಕುಲದ ಪ್ರವಾದಿ



ರಾಮರಾಜ್ಯ ಪರಿಕಲ್ಪನತೆಯ ಇಂತಹ ಆದರ್ಶ ಪುರುಷರೆನಿಸಿದ ಗಾಂಧೀಜಿ ವಿಚಾರಧಾರೆಯತ್ತ ಗಮನಹರಿಸಿದರೆ, ನಿಜಕ್ಕೂ ಅಚ್ಚರಿಯಾಗುತ್ತದೆ. ಧರ್ಮಶ್ರದ್ಧೆ ಗಾಂಧೀಜಿ ಅವರ ಪ್ರಮುಖ ಗುಣಗಳಲ್ಲೊಂದು. ಹಾಗೆಯೇ ಕ್ಷಮೆ. ನಿಮ್ಮ ಶತ್ರುಗಳನ್ನು ಕ್ಷಮಿಸಿ ಎಂದು ಹೇಳುವ ಮೂಲಕ ಕ್ಷಮಾದಾನದ ಉನ್ನತ ಗುಣ ಪ್ರತಿಯೊಬ್ಬರಿಗೂ ಸಂದೇಶವೇ ಅಯಿತು. ಗಾಂಧೀಜಿ ಅವರ ಮತ್ತೊಂದು ಗುಣವೆಂದರೆ ನಿರ್ಭೀತಿ. ಅವರ ಮಾನಸಿಕ ಧೈರ್ಯವೂ ಅಭೂತಪೂರ್ವವಾದುದು. ತಮ್ಮನ್ನು ದ್ವೇಷಿಸುವವರ ನಡುವೆಯೂ ಪ್ರೀತಿ, ವಿಶ್ವಾಸದ ಭರವಸೆ ಮೂಡಿಸಿದವರು. ಆ ಮೂಲಕ ದ್ವೇಷವನ್ನು ಸೋಲಿಸಿ ಪ್ರೀತಿಯನ್ನು ಪ್ರೀತಿಯಿಂದಲೇ ಗೆಲ್ಲಿಸಿದ್ದಾರೆ. ಮಾನವೀಯತೆಯನ್ನು ಮೆರೆಸಿದ್ದಾರೆ. ಮನುಷ್ಯತ್ವವನ್ನು ಬಿತ್ತಿದ್ದಾರೆ. ತಮ್ಮ ಸರಳತೆ, ಉನ್ನತ ವಿಚಾರಗಳನ್ನು ಬದುಕಿನಲ್ಲಿ ಅನುಸರಿಸಿದ ರೀತಿಯಿಂದ ಅವರು ಇಂದಿಗೂ, ಎಂದೆಂದಿಗೂ ಪ್ರಸ್ತುತ.

ಬೊಗಸೆ ನೀರಿತ್ತವಗೆ ತೃಪ್ತಿಯಪ್ಪಂತುಣಿಸು
ಒಳ್ಳೆತನ ಬಯಸಿದರೆ ಭಕ್ತಿಯಿಂಬಾಗು
ಕಿರುಗಾಸನಿತ್ತವಗೆ ತಿರುಗಿ ಚಿನ್ನವ ನೀಡು
ಪ್ರಾಣವಂ ಕಾಯ್ದವಗೆ ಪ್ರಾಣದಾನವ ಮಾಡು
ಕಿರುನೆರವಿಗೂ ಹಿರಿಯ ಸೇವೆಯ ಸಲಿಸುವುದು
ಪ್ರಾಜ್ಞರಾದವರ ನಡೆಯಂತೆಯೇ ಅವರ ನುಡಿ
ಜ್ಞಾನಿಗಳು ಮಾನವರ ಭೇದಗಳನೆಣಿಸದೆಯೆ
ಕೇಡಿಗುಂಸಂತಸದಿ ಶುಭವೆಸಗುವರು..."

ಸುಪ್ರಸಿದ್ಧ ಗುಜರಾತಿ ಕವಿ ಶ್ಯಾಮಪಾಲ್ ಭಟ್ಟರ ಈ ಕವಿತೆ ಚಿಕ್ಕಂದಿನಲ್ಲಿ ಗಾಂಧೀಜಿಯವರ ಮೇಲೆ ಬಹಳ ಪ್ರಭಾವ ಬೀರಿತ್ತು. ಬಾಲ್ಯದಿಂದಲೇ ಗಾಂಧೀಜಿಯ ನಡೆ ಎತ್ತ ಸಾಗುತ್ತಿತ್ತೆಂಬುದಕ್ಕೆ ಮೇಲಿನ ಕವಿತೆಯೇ ಸಾಕ್ಷಿ. ಪದ್ಯದ ಪದಪದವೂ ಮಾನವೀಯತೆಯನ್ನು ಧ್ವನಿಸುತ್ತದೆ.

ವಿಶ್ವದ ನಕಾಶೆಯಲ್ಲಿ ನಮ್ಮ ಭಾರತಕ್ಕೊಂದು ಬಹುದೊಡ್ಡ ಗೌರವ ತಂದು ಕೊಟ್ಟಿರುವ, ಗಾಂಧೀಜಿ ಮಾನವಕುಲ ಕಂಡ ಮಹಾಚೇತನ. ಮಾನವೀಯ ಗುಣದ ದಾರ್ಶನಿಕರು. ಗಾಂಧೀಜಿ ನಡೆ–ನುಡಿ, ಬದುಕು–ಬರಹ ಎಲ್ಲವೂ ಸರ್ವೋದಯವೇ. ಸರ್ವರುದ್ಧಾರವೇ ಗಾಂಧೀಜಿಯ ಗುರಿ. ಸರ್ವೋದಯ ಅವರ ಜೀವದುಸಿರು. ಸರ್ವರ ಸೇವೆ ಅವರ ಬದುಕಿನ ಗಾಯತ್ರಿಮಂತ್ರ. ತತ್ವರಹಿತ ರಾಜಕಾರಣ, ದುಡಿಮೆ ಇಲ್ಲದ ಸಂಪತ್ತು, ಆತ್ಮಸಾಕ್ಷಿರಹಿತ ಭೋಗ, ಶೀಲವಿಲ್ಲದ ಶಿಕ್ಷಣ, ನೀತಿ ಹೀನ ವ್ಯಾಪಾರ, ಮಾನವೀಯತೆ ಶೂನ್ಯ ವಿಜ್ಞಾನ, ತ್ಯಾಗವಿಲ್ಲದ ಪೂಜೆ–ಇವು ಗಾಂಧೀಜಿ ಹೇಳುವ ಸಪ್ತ ಸಾಮಾಜಿಕ ಪಾತಕಗಳು. ಇವುಗಳನ್ನು ನೀಗಿಸಿಕೊಳ್ಳಬೇಕಾದುದು ಗಾಂಧೀ ದೃಷ್ಟಿಯಲ್ಲಿ ಮಹತ್ವದ ಸಂಗತಿ.

ಮನುಷ್ಯನ ನಡೆ, ನುಡಿ, ಆಚಾರ, ವಿಚಾರ, ಆದರ್ಶ ಚಾರಿತ್ರ್ಯಗಳೇ ಅವನ ಶ್ರೇಷ್ಠತೆಯ ಮಾನದಂಡವಾಗುತ್ತದೆ. ಇಂಥಾ ಮಾನವೀಯ ಉನ್ನತ ಮೌಲ್ಯಗಳನ್ನು ತಮ್ಮ ಜೀವಮಾನದಲ್ಲಿ ಪಾಲಿಸಿದ ಗಾಂಧೀಜಿ ಮಹಾತ್ಮರಾದರು. ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಲು ಅಹಿಂಸೆಯ ಅಸ್ತ್ರ ಹಿಡಿದು, ಇಡೀ ರಾಷ್ಟ್ರವನ್ನೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲು ಪ್ರೇರೇಪಿಸಿ ಯಶಸ್ವಿಯಾದ ಬಳಿಕವೂ ಎಲ್ಲವೂ ಭಗವಂತನ ಕೃಪೆ ಎಂದು ತಮ್ಮ ಸರಳ ಬದುಕನ್ನು ಮುಂದುವರೆಸಿದ್ದ ಈ ಮಹಾನ್ ಚೇತನ ಇಂದಿಗೂ ಯುವ ಪೀಳಿಗೆಗೆ ಮಾದರಿ. ರವೀಂದ್ರನಾಥ ಠಾಗೋರ್ ಅವರು 'ಮಹಾತ್ಮ' ಎಂದು ಸಂಬೋಧಿಸುವವರೆಗೂ ಮೋಹನದಾಸ ಕರಮಚಂದ್ ಗಾಂಧೀ 'ಬಾಪು' ಎಂದೇ ಕರೆಯಲ್ಪಡುತ್ತಿದ್ದರು. ಸ್ವಾತಂತ್ರ್ಯ ಸಂಗ್ರಾಮದ ನೇತೃತ್ವ ವಹಿಸಿದ್ದ ಗಾಂಧೀಜಿ ಅವರು ಇಡೀ ದೇಶವನ್ನು ತನ್ನೊಟ್ಟಿಗೆ ಕರೆದುಕೊಂಡು ಹೋದ ಅಪ್ರತಿಮ ನಾಯಕ. ಸಮಾಜದ ಎಲ್ಲಾ ವರ್ಗದ ಜನರೊಂದಿಗೆ ಅವರು ಮುಕ್ತವಾಗಿ ಬೆರೆಯುತ್ತಿದ್ದರು. ಎಲ್ಲರ ಬಗ್ಗೆ ಕಾಳಜಿ ವಹಿಸುತಿದ್ದರು. ಇಡೀ ದೇಶಕ್ಕೆ ಅಂತಹ ಮಾದರಿ ಇನ್ನೋರ್ವ ವ್ಯಕ್ತಿಯನ್ನು ಕಾಣುವುದು ಭಾರತದಲ್ಲಿಯೇ ಏಕೆ ಇಡೀ ವಿಶ್ವದಲ್ಲಿಯೇ ಅತೀ ಕಷ್ಟಕರ. ಇಲ್ಲವೆಂದರೂ ಸರಿಯೇ!

ರಾಮರಾಜ್ಯ ಪರಿಕಲ್ಪನತೆಯ ಇಂತಹ ಆದರ್ಶ ಪುರುಷರೆನಿಸಿದ ಗಾಂಧೀಜಿ ವಿಚಾರಧಾರೆಯತ್ತ ಗಮನಹರಿಸಿದರೆ, ನಿಜಕ್ಕೂ ಅಚ್ಚರಿಯಾಗುತ್ತದೆ. ಧರ್ಮಶ್ರದ್ಧೆ ಗಾಂಧೀಜಿ ಅವರ ಪ್ರಮುಖ ಗುಣ ಗಳಲ್ಲೊಂದು. ಹಾಗೆಯೇ ಕ್ಷಮೆ. ನಿಮ್ಮ ಶತ್ರುಗಳನ್ನು ಕ್ಷಮಿಸಿ ಎಂದು ಹೇಳುವ ಮೂಲಕ ಕ್ಷಮಾದಾನದ ಉನ್ನತ ಗುಣ ಪ್ರತಿಯೊಬ್ಬರಿಗೂ ಸಂದೇಶವೇ ಅಯಿತು. ಗಾಂಧೀಜಿ ಅವರ ಮತ್ತೊಂದು ಗುಣವೆಂದರೆ ನಿರ್ಭೀತಿ. ಅವರ ಮಾನಸಿಕ ಧೈರ್ಯವೂ ಅಭೂತ ಪೂರ್ವ ವಾದುದು. ತಮ್ಮನ್ನು ದ್ವೇಷಿಸುವವರ ನಡುವೆಯೂ ಪ್ರೀತಿ, ವಿಶ್ವಾಸದ ಭರವಸೆ ಮೂಡಿಸಿದವರು. ಆ ಮೂಲಕ ದ್ವೇಷವನ್ನು ಸೋಲಿಸಿ ಪ್ರೀತಿಯನ್ನು ಪ್ರೀತಿಯಿಂದಲೇ ಗೆಲ್ಲಿಸಿದ್ದಾರೆ. ಮಾನವೀಯತೆ ಯನ್ನು ಮೆರೆಸಿದ್ದಾರೆ. ಮನುಷ್ಯತ್ವವನ್ನು ಬಿತ್ತಿದ್ದಾರೆ. ತಮ್ಮ ಸರಳತೆ, ಉನ್ನತ ವಿಚಾರಗಳನ್ನು ಬದುಕಿನಲ್ಲಿ ಅನುಸರಿಸಿದ ರೀತಿಯಿಂದ ಅವರು ಇಂದಿಗೂ, ಎಂದೆಂದಿಗೂ ಪ್ರಸ್ತುತ.

ಜನವರಿ 30, ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹುತಾತ್ಮರಾದ ದಿನ. ತನ್ನಿಮಿತ್ತ ಈ ಲೇಖನ.

ಅಕ್ಟೋಬರ್ 2, 1869ರಲ್ಲಿ ಗುಜರಾತ್‌ನ ಪೋರಬಂದರಿನಲ್ಲಿ ಕರಮಚಂದ್ ಗಾಂಧಿ ಹಾಗೂ ಪುತಲೀಬಾಯಿ ಗಾಂಧಿ ದಂಪತಿ ಪುತ್ರನಾಗಿ ಗಾಂಧೀಜಿ ಜನಿಸಿದರು. 'ಗಾಂಧಿ' ಎಂಬುದು ಮನೆತನದ ಹೆಸರು. ಅವರ ಪೂರ್ಣ ಹೆಸರು ಮೋಹನದಾಸ ಕರಮಚಂದ್ ಗಾಂಧಿ. ಪ್ರಾಥಮಿಕ ಶಿಕ್ಷಣವನ್ನು ಪೋರಬಂದರಿನಲ್ಲಿ, ಮಾಧ್ಯಮಿಕ ಹಾಗೂ ಪ್ರೌಢಶಿಕ್ಷಣವನ್ನು ರಾಜಕೋಟ್ ಮತ್ತು ಭಾವನಗರದಲ್ಲಿ ಮುಗಿಸಿದರು. ಗಾಂಧೀಜಿ ತಾನು ನೋಡಿದ ಸತ್ಯ ಹರಿಶ್ಚಂದ್ರ ನಾಟಕ ಹಾಗೂ ಓದಿದ ಶ್ರವಣನ ಮಾತಾ–ಪಿತೃಭಕ್ತಿ, ತಾಯಿಯಿಂದ ಕೇಳಿ ತಿಳಿದ ಪುರಾಣ ಪುಣ್ಯ ಕಥೆಗಳಿಂದ ತುಂಬಾ ಪ್ರಭಾವಿತರಾದರು. ಅಂದಿನ ಬಾಲ್ಯ ವಿವಾಹ ಪದ್ಧತಿಯ ಅನ್ವಯ ಗಾಂಧೀಜಿ ಅವರಿಗೆ ಹಿರಿಯರು ಮೆಚ್ಚಿ ಕಸ್ತೂರ ಬಾ ಅವರೊಡನೆ 1883ರಲ್ಲಿ ವಿವಾಹವಾಯಿತು. ಆಗ ಅವರಿಗೆ ವಯಸ್ಸು 14. ಗಾಂಧೀಜಿ 1888ರಲ್ಲಿ ಬ್ಯಾರಿಸ್ಟರ್ ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡ್‌ಗೆ ತೆರಳಿದರು. ಅಲ್ಲಿ ಪದವಿ ಪಡೆದ ಬಳಿಕ ವಕೀಲಿ ವೃತ್ತಿ ಆರಂಭಿಸಿದರು. ನಂತರ ಪ್ರಕರಣವೊಂದರ ನಿಮಿತ್ತ 1893ರಲ್ಲಿ ದಕ್ಷಿಣ ಆಫ್ರಿಕಾಕ್ಕೆ ತೆರಳಿದರು. ಆದರೆ, ಅಲ್ಲಿನ ವರ್ಣಭೇದ ನೀತಿ ಹೋರಾಟಕ್ಕೆ ಪ್ರೇರೇಪಿಸಿತು. ಅದನ್ನು ತೊಡೆದು ಹಾಕಬೇಕು ಎಂದು ಸಂಕಲ್ಪ ಮಾಡಿ, ಅಹಿಂಸಾ ಮಾರ್ಗದಲ್ಲಿ ವರ್ಣಭೇದ ನೀತಿ ವಿರುದ್ಧ ಹೋರಾಟ ಆರಂಭಿಸಿದರು. ಅದೇ ವೇಳೆಗೆ ಭಾರತದಲ್ಲಿ ಸ್ವಾತಂತ್ರ್ಯ ಹೋರಾಟ ತೀವ್ರಗೊಂಡಿದ್ದರಿಂದ ವರ್ಣಭೇದ ನೀತಿಯ ವಿರುದ್ಧ ತಾತ್ಕಾಲಿಕವಾಗಿ ಹೋರಾಟವನ್ನು ಕೈಬಿಟ್ಟು, ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿದರು. ಭಾರತಕ್ಕೆ ಬಂದ ಕೂಡಲೇ ತಮ್ಮ ವಕೀಲಿ ವೃತ್ತಿಯನ್ನು ತ್ಯಜಿಸಿ, ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿ, ಅದರ ನೇತೃತ್ವ ವಹಿಸಿಕೊಂಡು ಸತ್ಯ ಹಾಗೂ ಅಹಿಂಸಾ ಮಾರ್ಗದ ಮೂಲಕ ಬ್ರಿಟಿಷರ ವಿರುದ್ಧ ಹೋರಾಡಿದರು.

1920–22 ಅಸಹಕಾರ ಚಳವಳಿ, 1930ರಲ್ಲಿ ಉಪ್ಪಿನ ಸತ್ಯಾಗ್ರಹ, 1942ರಲ್ಲಿ 'ಬ್ರಿಟೀಷರೇ ಭಾರತ ಬಿಟ್ಟು ತೊಲಗಿ' (ಕ್ವಿಟ್ ಇಂಡಿಯಾ ಚಳವಳಿ) ಎಂಬ ಹೋರಾಟ ನಡೆಸಿದರು. ಭಾರತದ ಸ್ವಾತಂತ್ರ್ಯಕ್ಕಾಗಿ ಹಲವು ಬಾರಿ ಬಂಧನಕ್ಕೊಳಗಾದರೂ, ಜೈಲುವಾಸ ಅನುಭವಿಸಿದರೂ ಎದೆಗುಂದದೆ ಗಾಂಧೀಜಿ ಸತ್ಯ, ಅಹಿಂಸಾ ಮಾರ್ಗದಲ್ಲಿ 27 ವರ್ಷ ಅವಿಶ್ರಾಂತವಾಗಿ ನಡೆಸಿದ ಸ್ವಾತಂತ್ರ್ಯ ಚಳವಳಿಯ ಪರಿಣಾಮ ಭಾರತಕ್ಕೆ 1947 ಆಗಸ್ಟ್ 15ರ ಮಧ್ಯರಾತ್ರಿ ಸ್ವಾತಂತ್ರ್ಯ ದೊರೆಯಿತು.

ರಾಷ್ಟ್ರಪಿತರೆಂದು ಸಂಬೋಧಿಸಿದ ನೇತಾಜಿ: 'ರಾಷ್ಟ್ರಪಿತ' ಹೀಗೆ ಗಾಂಧೀಜಿ ಅವರನ್ನು ಮೊದಲ ಬಾರಿಗೆ ಕರೆದವರು ನೇತಾಜಿ ಸುಭಾಶ್ಚಂದ್ರ ಬೋಸರು. 1945ರಲ್ಲಿ ರಂಗೂನ್ ನಲ್ಲಿದ್ದ ತಮ್ಮ 'ಇಂಡಿಯನ್ ನ್ಯಾಷನಲ್ ಅರ್ಮಿ'ಯ ವತಿಯಿಂದ ಬ್ರಿಟಿಷ್ ಇಂಡಿಯಾದ ಮೇಲೆ ದಾಳಿ ಮಾಡಲು ಮುಂದಾಗಿದ್ದ ಬೋಸ್, ಬಾನುಲಿ ಸಂದೇಶವೊಂದನ್ನು ಗಾಂಧಿಯವರಿಗೆ ಪ್ರಸಾರ ಮಾಡಿದರು. 'ಫಾದರ್ ಅಫ್ ಅವರ್ ನೇಷನ್' ಎಂದು ಗಾಂಧಿಯನ್ನು ಕರೆದು, ಈ ಹೋರಾಟದಲ್ಲಿ ನಿಮ್ಮ ಆಶೀರ್ವಾದ ನಮ್ಮ ಮೇಲಿರಲಿ ಎಂದು ಕೇಳಿಕೊಂಡಿದ್ದರು.

ಮಹಿಳೆಯರ ಪರ ಗಾಂಧಿ ವಾದ: ಮಹಿಳೆಯರ ಬಗ್ಗೆ ಗಾಂಧೀಜಿಗೆ ವಿಶೇಷ ಕಾಳಜಿ ಇತ್ತು. ಅವರು ಸ್ತ್ರೀ ಶೋಷಣೆಯನ್ನು ಎಂದೂ ಸಹಿಸಿದವರಲ್ಲ. ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ ಕುರಿತಾಗಿ ಗಾಂಧೀಜಿ ಅವರ ವಿಚಾರ ಪರಿಣಾಮಕಾರಿಯಾಗಿತ್ತು. ಹೆಣ್ಣಿನ ಪರಿಶುದ್ಧತೆಯೇ ಆಕೆಯ ಅತ್ಯುತ್ತಮ ಗುರಾಣಿ. ಪುರುಷ ಎಷ್ಟೇ ಶಕ್ತನಾಗಿರಲಿ, ಆಕೆಯ ಪರಿಶುದ್ಧತೆಯ ಉಜ್ವಲ ಪ್ರಭೆಯ ಎದುರು ನಿಶ್ಶಕ್ತನಾಗುತ್ತಾನೆ, ಹಾಗೇ ಮಹಿಳೆಯೂ ಸಹ ತನ್ನನ್ನು ತಾನು ರಕ್ಷಿಸಿಕೊಳ್ಳುವಲ್ಲಿ ಧೈರ್ಯ ತೋರಬೇಕು. ಆತ್ಮರಕ್ಷಣೆ ಅವಳ ಪ್ರಥಮ ಧರ್ಮ, ಆ ಸಂದರ್ಭದಲ್ಲಿ ಆಕೆ ಹಿಂಸೆ, ಅಹಿಂಸೆ ಎಂದೆಲ್ಲಾ ಯೋಚಿಸದೆ ತನ್ನ ರಕ್ಷಣೆಗಾಗಿ, ತನ್ನ ಮನಸ್ಸಿಗೆ ತೋಚಿದ ಯಾವ ಮಾರ್ಗವನ್ನಾದರೂ ಅನುಸರಿಸಬಹುದು. ಹೆಣ್ಣು ತ್ಯಾಗದ, ನಮ್ರತೆಯ, ನಂಬಿಕೆಯ, ಜ್ಞಾನದ ಪ್ರತೀಕವೆಂದು ಗಾಂಧೀಜಿ ಬಣ್ಣಿಸಿದ್ದಾರೆ. ಆದ್ದರಿಂದಲೇ ಜೀವನ ಸಂಗ್ರಾಮದಲ್ಲಿ ಹೆಣ್ಣಿಗೆ ಮೊದಲ ಪ್ರಾಶಸ್ತ್ಯ. ರಾಮನಿಗಿಂತ ಮೊದಲು ಸೀತೆಯೆಂದೂ, ಕೃಷ್ಣನಿಗಿಂತ ಮೊದಲು ರಾಧೆಯನ್ನು ನೆನೆಯುವುದು ಸೂಕ್ತ. ಸ್ತ್ರೀ, ಪುರುಷಷ್ಟೆ ಪ್ರಧಾನಳು ಪುರುಷರ ಪ್ರತಿ ಕೆಲಸದಲ್ಲೂ ಪ್ರವೇಶಿಸುವ ಹಕ್ಕು ಅವಳಿಗಿದೆ ಎಂದು ಗಾಂಧೀಜಿ ಸ್ತ್ರೀಯರ ಬಗ್ಗೆ ಉನ್ನತ ಗೌರವ, ಅಭಿಪ್ರಾಯ ವ್ಯಕ್ತಪಡಿಸಿದ್ದರು.

ಇನ್ನು ಭ್ರಷ್ಟಾಚಾರ, ಲಂಚಾವತಾರ ಇನ್ನಿತರ ಸಾಮಾಜಿಕ ಅನಿಷ್ಟಗಳ ಕುರಿತಾಗಿ, ಗಾಂಧೀಜಿ ಅವರ ಅಭಿಪ್ರಾಯ ಆದರ್ಶ ಸಮಾಜದ ಪರಿಕಲ್ಪನೆಯ ಭದ್ರ ಬುನಾದಿಗೆ ನಾಂದಿ ಹಾಡಿದೆ. ಅನ್ಯಾಯ ಮಾರ್ಗಗಳಿಂದ ಸಂಪಾದಿಸಿ ಧನಿಕನಾದ ಮನುಷ್ಯ ಡಕಾಯಿತರುಗಳಿಗಿಂತ ಕಡಿಮೆ ಇಲ್ಲ. ಮರ್ಯಾದೆಯ ಮುಖವಾಡದಿಂದ ತನ್ನ ಅವಶ್ಯಕತೆಗಿಂತ ಮೀರಿ ಹಣ, ಆಸ್ತಿ ಸಂಪಾದಿಸುವವನು ಸಾಮಾನ್ಯ ಕಳ್ಳನಿಗಿಂತ ಹೆಚ್ಚಿನ ಶಿಕ್ಷೆಗೆ ಅರ್ಹನು. ದೇವರು ಧರ್ಮ ಪ್ರಾರ್ಥನೆಗಳನ್ನು ಕುರಿತು ಅಪಹಾಸ್ಯ ಮಾಡುವವರಿಗೆ ಗಾಂಧೀಜಿಯವರ ಹಿತನುಡಿಯೆಂದರೆ, ನಾನೇ ಬುದ್ಧಿವಂತ, ವಿಚಾರವಂತನೆಂಬ ಹಮ್ಮಿನಿಂದ ಇನ್ನೊಬ್ಬರ ಭಾವನೆಗಳ ಜೊತೆ ಆಟವಾಡಬೇಡಿ. ಜೀವನದ ಆದಿ ಮತ್ತು ಅಂತ್ಯ ಪಾಠಗಳೇ ಪ್ರಾರ್ಥನೆ. ಪ್ರೀತಿ, ದಯೆ, ತ್ಯಾಗವೇ ಧರ್ಮ. ಪ್ರಾರ್ಥನೆಯನ್ನು ಸರಿಯಾಗಿ ತಿಳಿದು ಸಲ್ಲಿಸಿದರೆ ಅದು ಅತ್ಯಂತ ಸಮರ್ಥವಾದ ಕಾರ್ಯೋಪಕರಣವಾಗುತ್ತದೆ.

ಗಾಂಧೀಜಿ ತತ್ವ ಸಿದ್ಧಾಂತಗಳು: ಮಹಾತ್ಮಗಾಂಧಿ ಅವರ ಪ್ರಮುಖ ತತ್ವ ಸಿದ್ಧಾಂತವೆಂದರೆ ಅದು ಸತ್ಯ ಮತ್ತು ಅಹಿಂಸೆ. ಗಾಂಧಿ ತಮ್ಮ ಆತ್ಮಚರಿತ್ರೆ 'ನನ್ನ ಸತ್ಯಾನ್ವೇಷಣೆ'ಯಲ್ಲಿ ಸತ್ಯ ಮತ್ತು ಅಹಿಂಸೆಗಳು, ತಲೆತಲಾಂತರದಿಂದ ಬಂದ ನೀತಿ ಬೋಧನೆಗಳಾಗಿವೆ. ಅದರಲ್ಲಿ ನಾನು ಹೊಸದಾಗಿ ಹೇಳಿರುವುದು ಏನೂ ಇಲ್ಲ ಎಂದಿದ್ದಾರೆ. ಈ ಸತ್ಯ ಮತ್ತು ಅಹಿಂಸೆಗಳನ್ನು ಗಾಂಧೀಜಿ ಕೇವಲ ಮಾತಿನಲ್ಲಿ ಹೇಳದೆ ಬದುಕಿನಲ್ಲಿ ಅಳವಡಿಸಿಕೊಂಡಿದ್ದರು. ಅವರದು ಸತ್ಯಾನ್ವೇಷಣೆಯ ಮಾರ್ಗ. "ವಿಶ್ವಾತ್ಮಕವೂ, ವಿಶ್ವವ್ಯಾಪಿಯೂ ಆದ ಸತ್ಯವನ್ನು ಸಾಕ್ಷಾತಾಗಿ ಸಂದರ್ಶಿಸಬೇಕಾದರೆ ಕ್ಷುದ್ರತಮವಾದುದನ್ನೂ ಪ್ರೀತಿಸುವುದು ಸಾಧ್ಯವಾಗಲೇಬೇಕು" ಎನ್ನುವುದು ಗಾಂಧೀಜಿ ನಿಲುವು.

ಗಾಂಧೀಜಿ ಅವರ ಶೈಕ್ಷಣಿಕ ಸಿದ್ಧಾಂತ: ಶಿಕ್ಷಣ ಎಂದರೆ ಮಗುವನ್ನು ಮನುಷ್ಯನನ್ನಾಗಿಸುವ ಸರ್ವತ್ರ ಸಾಧನ ಎಂದಿದ್ದ ಗಾಂಧಿ, ದೇಹ, ಮಿದುಳು ಹಾಗೂ ಚೈತನ್ಯ ಎಲ್ಲವನ್ನೂ ರೂಪಿಸುವುದೇ ಶಿಕ್ಷಣ. ಗುಜರಾತ್ ವಿದ್ಯಾಪೀಠದ ಘೋಷವಾಕ್ಯ 'ಸಾ ವಿದ್ಯಾ ಯಾ ವಿಮುಕ್ತೆ ಎನ್ನುವ ಸಾಲಿನಲ್ಲಿ ಗಾಂಧೀಜಿ ಬಲವಾದ ನಂಬಿಕೆ ಇರಿಸಿದ್ದರು. ಹೀಗಾಗಿ "ಪ್ರಾಥಮಿಕ ಶಿಕ್ಷಣವು ಉಚಿತವಾಗಿಯೂ ಹಾಗೂ ಕಡ್ಡಾಯವಾಗಿ ಇರಬೇಕು. ಅಹಿಂಸೆ ಶಿಕ್ಷಣದ ತಳಹದಿಯಾಗಬೇಕು. ಶಿಕ್ಷಣವು ವ್ಯಕ್ತಿಯ ಚಾರಿತ್ರ್ಯವನ್ನು ರೂಪಿಸಬೇಕು" ಎಂದು ಹೇಳಿದ್ದರು. 1935ರಲ್ಲಿ ಸಾಬರಮತಿ ಎಂಬ ಸ್ಥಳದಲ್ಲಿ ತಮ್ಮದೇ ಆದ ಶೈಕ್ಷಣಿಕ ತತ್ವಗಳನ್ನು ಅನುಷ್ಠಾನಕ್ಕೆ ತರಲು ಮೂಲ ಶಿಕ್ಷಣ ಶಾಲೆಯನ್ನು ಪ್ರಾರಂಭಿಸಿದ್ದರು.

ಮಹಾತ್ಮನ ಅಂತ್ಯ: ಅದೊಂದು ಜಗತ್ತು ಎಂದೂ ಮರೆಯದ ದುರಂತ ದಿನ. 1948 ಜನವರಿ 30ರಂದು ಶುಕ್ರವಾರ ಪ್ರಾರ್ಥನಾ ಸಭೆಗೆ ಹೋಗುತ್ತಿದ್ದ ವೇಳೆ ನಾಥೂರಾಂ ವಿನಾಯಕ ಗೋಡ್ಸೆ ಎಂಬಾತ ಗಾಂಧೀಜಿ ಎದೆಗೆ ಗುಂಡು ಹಾರಿಸಿದ. ಹೇ ರಾಮ್ ಎನ್ನುತ್ತಾ ಗಾಂಧೀಜಿ ಪ್ರಾಣ ಬಿಟ್ಟರು. ಗಾಂಧೀಜಿ ಒಬ್ಬ ವ್ಯಕ್ತಿಯಾಗಿರದೆ ಒಂದು ಮಹಾನ್ ಶಕ್ತಿಯಾಗಿದ್ದರು. ಭಾರತಕ್ಕೆ ಸ್ವಾತಂತ್ರ್ಯ ತರಲು ಹಾಗೂ ರಾಮರಾಜ್ಯ ಸ್ಥಾಪಿಸಲು ತಮ್ಮ ತನು ಮನ ಧನಗಳನ್ನು ಅರ್ಪಿಸಿದರು. ಗಾಂಧೀಜಿಯ ಅಂತ್ಯ ಸಂಸ್ಕಾರ ದೆಹಲಿಯ ರಾಜ್‌ಘಾಟ್‌ನಲ್ಲಿ ನಡೆಯಿತು. ನಂತರ ಅಲಹಾಬಾದಿನ ತ್ರಿವೇಣಿ ಸಂಗಮದಲ್ಲಿ ಚಿತಾಭಸ್ಮವನ್ನು ವಿಸರ್ಜಿಸಲಾಯಿತು. ಬರೀ ಭಾರತೀಯರಿಂದ ಮಾತ್ರವಲ್ಲದೆ ವಿದೇಶಿಯರಿಂದಲೂ ಅಪಾರವಾಗಿ ಗೌರವಿಸಲ್ಪಟ್ಟು ಮಹಾತ್ಮರೆನಿಸಿಕೊಂಡಿದ್ದ ಗಾಂಧೀಜಿ, ಭಾರತೀಯನಿಂದಲೇ ಹತ್ಯೆಗೀಡಾದದ್ದು ನಿಜಕ್ಕೂ ಇತಿಹಾಸದ ವ್ಯಂಗ್ಯವಾಗಿದೆ. ಸರ್ವೋದಯ ಚಿಂತನೆಯ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರು ಹುತಾತ್ಮರಾದ ಜನವರಿ 30ರ ದಿನವನ್ನು ರಾಷ್ಟ್ರೀಯ ಸರ್ವೋದಯ ದಿನವಾಗಿ ದೇಶ ಪ್ರತೀ ವರ್ಷ ಆಚರಿಸುತ್ತದೆ.

'ಮಕ್ಕಳಿಗೆ ಸಂಬಂಧಿಸಿದ ಕಾನೂನುಗಳು' ಕುರಿತು ಜಿಲ್ಲಾ, ತಾಲೂಕು ಮಟ್ಟದ ಅಧಿಕಾರಿಗಳಿಗೆ ಅರಿವು ಕಾರ್ಯಾಗಾರ

ಮೈಸೂರು ಜ.29– ವಿವಿಧ ಇಲಾಖೆಗಳ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳಿಗೆ 'ಮಕ್ಕಳಿಗೆ ಸಂಬಂಧಿಸಿದ ಕಾನೂನುಗಳು' ಕುರಿತು ಒಂದು ದಿನದ ತರಬೇತಿ ಹಾಗೂ ಅರಿವು ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವು ಮಕ್ಕಳ ರಕ್ಷಣಾ ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಬೆಂಗಳೂರು, ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ, ನ್ಯೂಟ್ರಿಷನ್ ಸೊಸೈಟಿ, ಮೈಸೂರು ಚಾಪ್ಟರ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮೈಸೂರು ಇವರ ಸಹಯೋಗದೊಂದಿಗೆ ಜನವರಿ 30 ರಂದು ಬೆಳಗ್ಗೆ 10 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ನಡೆಯಲಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಗೌರವಾನ್ವಿತ ಕುಲಪತಿ ಪ್ರೊ. ಶರಣಪ್ಪ ವಿ.ಹಲ್ಸೆ ಉಪಸ್ಥಿತಿಯಲ್ಲಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ, ಸದಸ್ಯ ಕಾರ್ಯದರ್ಶಿ ದಿನೇಶ್ ಬಿ.ಜಿ. ಕಾರ್ಯಕ್ರಮವನ್ನು ಉದ್ಘಾಟನೆ ಮಾಡುವರು. ಜಿಲ್ಲಾಧಿಕಾರಿ ಡಾ. ರಾಜೇಂದ್ರ ಕೆ.ವಿ. ಅಧ್ಯಕ್ಷತೆ ವಹಿಸಲಿದ್ದಾರೆ.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಎಸ್. ಮಂಜು, ನಗರ ಪೊಲೀಸ್ ಆಯುಕ್ತ ಬಿ. ರಮೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಸೀಮಾ ಲಾಟ್ಕರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಗಾಯತ್ರಿ ಕೆ.ಎಂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಎಚ್. ಆರ್. ಸುರೇಶ್, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಯೋಗೇಶ್ ಎನ್.ಟಿ. ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಆಹಾರ ವಿಜ್ಞಾನ ಮತ್ತು ಪೋಷಣೆ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಸಿ. ಅನಿತ, ಬಚ್‌ಪನ್ ಬಚಾವೊ ಆಂದೋಲನದ ರಾಜ್ಯ ಸಮನ್ವಯ ಅಧಿಕಾರಿ ಬಿನು ವರ್ಗೀಸ್, ಯುನಿಸೆಫ್–ಮಕ್ಕಳ ರಕ್ಷಣಾ ಯೋಜನೆ ವ್ಯವಸ್ಥಾಪಕ ಹರೀಶ್ ಜೋಗಿ, ಪೊಲೀಸ್ ಮಹಾ ನಿರ್ದೇಶಕರ ತರಬೇತಿ ಕಚೇರಿ ಪೊಲೀಸ್ ತರಬೇತುದಾರ ರೋಹಿತ್ ಸಿ.ಜೆ. ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸುವರು.

ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ಟಿ.ಆರ್. ಸ್ವರೂಪ್ ಆಯ್ಕೆ

ಮೈಸೂರು,ಜ.29– ಮೈಸೂರು ವಿಶ್ವವಿದ್ಯಾನಿಲಯದ ಸಾವಯವ ರಸಾಯನಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಡಾ.ಟಿ.ಆರ್. ಸ್ವರೂಪ್ ಅವರು ಅಂತರರಾಷ್ಟ್ರೀಯ ವಿಶ್ವ ರಸಾಯನಶಾಸ್ತ್ರ ವೇದಿಕೆಯು ವಿಶೇಷ ಉಪನ್ಯಾಸ ನೀಡಲು ಫೆಬ್ರವರಿ 1 ರಿಂದ 3 ರವರೆಗೆ ಜಪಾನಿನ ಒಸಾಕದಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ವಿಶೇಷ ಆಹ್ವಾನವನ್ನು ಪಡೆದಿರುತ್ತಾರೆ.

ಸಮ್ಮೇಳನದಲ್ಲಿ ಹಸಿರು ಸಿಂಥೆಟಿಕ್ ರೂಪಾಂತರ ಸಂಶೋಧನೆಗೆ ಸಂಬಂಧಿಸಿದಂತೆ ಉಪನ್ಯಾಸ ನೀಡಲಿದ್ದಾರೆ. ಅಯಾನಿಕ್ ದ್ರವ, ಘನ ಹಂತದ ಪ್ರತಿಕ್ರಿಯೆ ಮತ್ತು ಎಲೆಕ್ಟ್ರೋ ಸಾವಯವ ಪ್ರತಿಕ್ರಿಯೆಗಳ ಮೇಲೆ ಅಂತರರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಅತ್ಯುನ್ನತ ಲೇಖನಗಳನ್ನು ಪ್ರಕಟಿಸಿದ್ದು, ಇವುಗಳ ಮೇಲೆ ಡಾ. ಟಿ.ಆರ್. ಸ್ವರೂಪ್ ಉಪನ್ಯಾಸ ನೀಡಲಿದ್ದಾರೆ.



ಡಾ.ಟಿ.ಆರ್.ಸ್ವರೂಪ್

ಫೆ.1 ರಂದು ಶ್ರೀ ಮಡಿವಾಳ ಮಾಚಿದೇವರ ಜಯಂತಿ

ಮೈಸೂರು, ಜ.29– ಫೆ.01 ರಂದು ಶ್ರೀ ಮಡಿವಾಳ ಮಾಚಿದೇವರ ಜಯಂತಿಯನ್ನು ಮಧ್ಯಾಹ್ನ 12 ಗಂಟೆಗೆ ಕರ್ನಾಟಕ ಕಲಾ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಚಾಮರಾಜ ಕ್ಷೇತ್ರದ ವಿಧಾನಸಭಾ ಸದಸ್ಯ ಕೆ.ಹರೀಶ್‌ಗೌಡ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸುವರು. ಪಶುಸಂಗೋಪನೆ ಮತ್ತು ರೇಷ್ಮೆ ಇಲಾಖೆಯ ಸಚಿವ ಕೆ.ವೆಂಕಟೇಶ್ ಉಪಸ್ಥಿತರಿರುವರು.

ಮುಖ್ಯ ಅತಿಥಿಗಳಾಗಿ ಮೈಸೂರು–ಕೊಡಗು ಕ್ಷೇತ್ರದ ಲೋಕಸಭಾ ಸದಸ್ಯ ಪ್ರತಾಪ್ ಸಿಂಹ, ಚಾಮರಾಜನಗರ ಕ್ಷೇತ್ರದ ಲೋಕಸಭಾ ಸದಸ್ಯ ವಿ.ಶ್ರೀನಿವಾಸ್ ಪ್ರಸಾದ್, ಮಂಡ್ಯ ಕ್ಷೇತ್ರದ ಲೋಕಸಭಾ ಸದಸ್ಯ ಸುಮಲತಾ ಅಂಬರೀಶ್ ಭಾಗವಹಿಸುವರು.

ಸಮಾರಂಭದ ಅತಿಥಿಗಳಾಗಿ ವಿಧಾನಸಭೆಯ ಶಾಸಕರಾದ ತನ್ವೀರ್ ಸೇಠ್, ಜಿ.ಟಿ. ದೇವೇಗೌಡ, ಅನಿಲ್ ಕುಮಾರ್.ಸಿ, ರವಿಶಂಕರ್.ಡಿ, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಟಿ.ಎಸ್.ಶ್ರೀವತ್ಸ ಹಾಗೂ ವಿಧಾನ ಪರಿಷತ್ತಿನ ಶಾಸಕರಾದ ಮರಿತಿಬ್ಬೇಗೌಡ, ಎಚ್.ವಿಶ್ವನಾಥ್, ಡಾ. ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ ರವರು ಭಾಗವಹಿಸುವರು. ಅಂಕಣಕಾರ ಆರ್. ರಘು(ಕೌಟಿಲ್ಯ) ಮುಖ್ಯ ಭಾಷಣಕಾರರಾಗಿ ಭಾಗವಹಿಸುವರು.

ಬಜೆಟ್ ಅಧಿವೇಶನಕ್ಕೂ ಮುನ್ನ 'ಸರ್ವಪಕ್ಷ ಸಭೆ' ಕರೆದ ಕೇಂದ್ರ ಸರ್ಕಾರ

ನವದೆಹಲಿ: ಕೇಂದ್ರ ಸರ್ಕಾರದ ಪ್ರಸಕ್ತ ಸಾಲಿನ ಮುಂಗಡ ಪತ್ರವನ್ನು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಫೆ.1ರಂದು ಮಂಡಿಸಲಿದ್ದು, ಅಧಿವೇಶನದ ಮುನ್ನಾ ದಿನವಾದ ಮಂಗಳವಾರ ಕೇಂದ್ರ ಸರ್ಕಾರ ಸರ್ವಪಕ್ಷಗಳ ಸಭೆ ಕರೆದಿದೆ.

ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ವಾಡಿಕೆಯಂತೆ ಸಭೆ ಕರೆದಿದ್ದು, ಜನವರಿ 30 ರಂದು ಮಧ್ಯಾಹ್ನ ಸಂಸತ್ತಿನ ಆವರಣದಲ್ಲಿ ಸಭೆ ನಡೆಯಲಿದೆ ಈ ವೇಳೆ ಸರ್ಕಾರ ಸುಗಮ ಕಲಾಪ ನಡೆಸಲು ಎಲ್ಲಾ ಪಕ್ಷಗಳ ಸಹಕಾರ ಕೋರುವ ನಿರೀಕ್ಷೆಯಿದೆ.

ಪ್ರತಿಪಕ್ಷಗಳು ಕೂಡ ಕಲಾಪಕ್ಕೆ ಸಜ್ಜಾಗಿದ್ದು ಬಜೆಟ್ ಸೇರಿದಂತೆ ಕೇಂದ್ರ ಸರ್ಕಾರದ ವೈಫಲ್ಯಗಳನ್ನು ಅಧಿವೇಶನದಲ್ಲಿ ಚರ್ಚಿಸುವ ನಿರೀಕ್ಷೆಯಿದೆ. ಜೊತೆಗೆ ಈಗಾಗಲೇ ಯೋಜಿಸಿಕೊಂಡಿರುವ ಅನೇಕ ವಿಚಾರಗಳನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಲು ಕಾರ್ಯತಂತ್ರ ರೂಪಿಸಿವೆ. ಸರ್ವಪಕ್ಷ ಸಭೆ ಬಳಿಕ ಮಧ್ಯಾಹ್ನ ಎನ್‌ಡಿಎ ಸಂಸದೀಯ ನಾಯಕರ ಸಭೆಯೂ ನಡೆಯಲಿದ್ದು, ಆಡಳಿತಾರೂಢ ಪಕ್ಷ ಅಧಿವೇಶನದ ಕಾರ್ಯತಂತ್ರ ರೂಪಿಸಲಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಜಿಲ್ಲಾ ಬಿಜೆಪಿಯಿಂದ ಗ್ರಾಮ ಚಲೋ ಅಭಿಯಾನ



ಬಿಜೆಪಿ ಮೈಸೂರು ಗ್ರಾಮಾಂತರ(ಜಿಲ್ಲಾ) ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ನೇತೃತ್ವದಲ್ಲಿ ಗ್ರಾಮ ಚಲೋ ಅಭಿಯಾನ ಸಂಬಂಧ ಸಭೆ ನಡೆಸಲಾಯಿತು.

ಮೈಸೂರು, ಜ.29(ಎಸ್‌ಬಿಡಿ)– ಮೈಸೂರಿನ ಬಿಜೆಪಿ ಪಕ್ಷದ ಕಚೇರಿಯಲ್ಲಿ ಗ್ರಾಮಾಂತರ(ಜಿಲ್ಲಾ) ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ನೇತೃತ್ವದಲ್ಲಿ 'ಗ್ರಾಮ(ಗಾಂವ್) ಚಲೋ ಅಭಿಯಾನ'ದ ಸಂಚಾಲಕರು ಹಾಗೂ ಸಹ ಸಂಚಾಲಕರ ಸಭೆ ನಡೆಸಲಾಯಿತು.

ಸಭೆಯಲ್ಲಿ ಮಾತನಾಡಿದ ಎಲ್.ಆರ್. ಮಹದೇವಸ್ವಾಮಿ, ಎಲ್ಲಾ ತಾಲೂಕುಗಳಲ್ಲೂ ಪ್ರತಿಯೊಂದು ಗ್ರಾಮಗಳಿಗೂ ಭೇಟಿ ನೀಡಿ, ಊರಿನ ಯಜಮಾನರುಗಳು, ಸಂಘ ಸಂಸ್ಥೆಗಳು, ಎಲ್ಲಾ ಸಮುದಾಯದ ಮುಖಂಡರನ್ನು ಭೇಟಿ ಮಾಡಬೇಕು. ಪ್ರಧಾನಿ ನರೇಂದ್ರ ಮೋದಿಯವರ ಜನಪರ ಕಾರ್ಯಕ್ರಮಗಳು, ಯೋಜನೆಗಳ ಬಗ್ಗೆ ತಿಳಿಸಿ, ದೇಶದ ಅಭಿವೃದ್ಧಿ ದೃಷ್ಟಿಯಿಂದ ಮೋದಿ ಅವರು ಮತ್ತೆ ಪ್ರಧಾನಿಯಾಗಲು ಪ್ರತಿಯೊಬ್ಬರ ಸಹಕಾರ ಬಹಳ ಮುಖ್ಯ ಎನ್ನುವುದನ್ನು ಮನದಟ್ಟು ಮಾಡಬೇಕು ಎಂದು ಸಲಹೆ ನೀಡಿದರು.

ಮೋದಿಯವರು ಮತ್ತೊಮ್ಮೆ ಪ್ರಧಾನಿಯಾಗಬೇಕೆಂಬುದು ಎಲ್ಲರ ಆಶಯವಾಗಿದೆ. ಈ ನಿಟ್ಟಿನಲ್ಲಿ ಪಕ್ಷದ ಕಾರ್ಯಕರ್ತರ ಪರಿಶ್ರಮ ಬಹಳ ಮುಖ್ಯ. ಲೋಕಸಭಾ ಚುನಾವಣೆಗೆ ಈಗಿನಿಂದಲೇ ಕೆಲಸ ಆರಂಭಿಸಬೇಕು. ಪಕ್ಷ ಕರೆ ನೀಡಿರುವಂತೆ ಎಲ್ಲಾ ಗ್ರಾಮದ ಪ್ರತಿ ಬೂತ್ ಮಟ್ಟದಲ್ಲಿ 'ಮತ್ತೊಮ್ಮೆ ನರೇಂದ್ರ ಮೋದಿ ಜಿ' ಸಂದೇಶವನ್ನು ಗೋಡೆಗಳಲ್ಲಿ ಬರೆಯುವ ಮೂಲಕ ಒಕ್ಕೊರಲಿನಿಂದ ಪಕ್ಷಕ್ಕಾಗಿ ದುಡಿಯಬೇಕು ಎಂದು ಕಿವಿಮಾತು ಹೇಳಿದರು.

ಸಭೆಯಲ್ಲಿ ಅಭಿಯಾನದ ಸಂಚಾಲಕ ರಮೇಶ್ ಕುಮಾರ್, ಸಹ ಸಂಚಾಲಕರಾದ ದಾಸಯ್ಯ, ಸಿ.ಎಂ.ಮಹದೇವಯ್ಯ, ಪಕ್ಷದ ತಾಲೂಕು ಅಧ್ಯಕ್ಷರುಗಳು, ಪ್ರಧಾನ ಕಾರ್ಯದರ್ಶಿಗಳು ಭಾಗವಹಿಸಿದ್ದರು.

ಹರೀಶ್‌ಗೌಡರಿಂದ ಕೆ.ಆರ್.ಆಸ್ಪತ್ರೆ ನವೀಕರಣ ಕಾಮಗಾರಿ ಪರಿಶೀಲನೆ



ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಸೋಮವಾರ ಕೆಆರ್ ಆಸ್ಪತ್ರೆ ಕಟ್ಟಡಗಳ ನವೀಕರಣ ಕಾಮಗಾರಿಗಳ ಪ್ರಗತಿ ಪರಿಶೀಲಿಸಿದರು. ಈ ವೇಳೆ ಎಂಎಂಸಿಆರ್‌ಐ ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಿಣಿ ಮತ್ತಿತರರಿದ್ದರು.



ಮೈಸೂರಿನ ಕೆ.ಆರ್.ಆಸ್ಪತ್ರೆ ಆವರಣದಲ್ಲಿನ ಅಡುಗೆ ಘಟಕ ಪರಿಶೀಲಿಸಿದ ಶಾಸಕ ಹರೀಶ್‌ಗೌಡ, ಶುಚಿತ್ವ ಕಾಪಾಡುವಂತೆ ತಾಕೀತು ಮಾಡಿದರು.

ಮೈಸೂರು, ಜ.29(ಆರ್‌ಕೆ)– ಮೈಸೂರಿನ ಕೆ.ಆರ್.ಆಸ್ಪತ್ರೆ ಪಾರಂಪರಿಕ ಕಟ್ಟಡಗಳ ನವೀಕರಣ ಕಾಮಗಾರಿಯನ್ನು ಶಾಸಕ ಕೆ.ಹರೀಶ್‌ಗೌಡರು ಸೋಮವಾರ ಪರಿಶೀಲಿಸಿದರು.

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಎಂಎಂಸಿಆರ್‌ಐ)ಯ ಶತಮಾನೋತ್ಸವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಮಂಜೂರು ಮಾಡಿರುವ 84 ಕೋಟಿ ರೂ. ಅನುದಾನದಲ್ಲಿ ವೈದ್ಯಕೀಯ ಕಾಲೇಜು, ಕೆ.ಆರ್.ಆಸ್ಪತ್ರೆ ಆಡಳಿತ ಕಚೇರಿ, ಒಪಿಡಿ, ಕಣ್ಣಿನ ಆಸ್ಪತ್ರೆ ಐಪಿಡಿ–ಒಪಿಡಿ, ಎನ್‌ಎಸ್‌ಜಿ, ಸರ್ಜಿಕಲ್ ವಾರ್ಡ್, ಚೆಲುವಾಂಬ ಮಕ್ಕಳ ಆಸ್ಪತ್ರೆ ಸೇರಿದಂತೆ ಒಟ್ಟು 14 ಕಟ್ಟಡಗಳ ದುರಸ್ತಿ ಹಾಗೂ ನವೀಕರಣ ಕಾಮಗಾರಿ ಪ್ರಗತಿಯಲ್ಲಿದ್ದು, ಈಗಾಗಲೇ ಸುಮಾರು ಶೇ.30 ರಿಂದ 40ರಷ್ಟು ಕೆಲಸ ಮುಗಿದಿರುವುದರಿಂದ ಶಾಸಕರು ಕಾಮಗಾರಿ ಪರಿಶೀಲಿಸಿ, ತ್ವರಿತಗತಿಯಲ್ಲಿ ಪೂರ್ಣಗೊಳಿಸುವಂತೆ ಸೂಚನೆ ನೀಡಿದರು.

ಪಾರಂಪರಿಕ ಕಟ್ಟಡಗಳ ನವೀಕರಣ ಮತ್ತು ಸಂರಕ್ಷಣಾ ಕಾಮಗಾರಿಗೆ ಪೂರೈಕೆಯಾದ ಮೆಟೀರಿಯಲ್‌ಗಳನ್ನೇ ಬಳಸಿ ನುರಿತ ಕೆಲಸಗಾರರಿಂದ ಕಾಮಗಾರಿ ಮಾಡಿಸಬೇಕು. ಪಾರಂಪರಿಕ ವಿನ್ಯಾಸಕ್ಕೆ ಯಾವುದೇ ರೀತಿಯಲ್ಲೂ ಧಕ್ಕೆ ಬಾರದಂತೆ ಎಚ್ಚರ ವಹಿಸಿ, ಕಟ್ಟಡಗಳನ್ನು ಸದೃಢಗೊಳಿಸಬೇಕು ಎಂದು ಕಾಮಗಾರಿಯ ಮೇಲ್ವಿಚಾರಣೆ ನಡೆಸುತ್ತಿರುವ ಲೋಕೋಪಯೋಗಿ ಇಲಾಖೆ ಇಂಜಿನಿಯರ್‌ಗಳಿಗೆ ಹರೀಶ್‌ಗೌಡರು ತಾಕೀತು ಮಾಡಿದರು.

ಗುಣಮಟ್ಟ ಕಾಪಾಡಿಕೊಂಡು ನಿಗದಿತ ಅವಧಿಯೊಳಗೆ ಕಟ್ಟಡಗಳ ನವೀಕರಣ ಕಾಮಗಾರಿಯನ್ನು ಪೂರ್ಣಗೊಳಿಸುವ ಮೂಲಕ ಶತಮಾನೋತ್ಸವ ಕಾರ್ಯಕ್ರಮಗಳಿಗೆ ಅನುವು ಮಾಡಿಕೊಡಿ ಎಂದ ಅವರು, ಕಾಮಗಾರಿ ಪ್ರಗತಿ ಬಗ್ಗೆ ನಿತ್ಯ ಮೇಲ್ವಿಚಾರಣೆ ನಡೆಸುವಂತೆ ಸಂಸ್ಥೆಯ ಡೀನ್ ಅಂಡ್ ಡೈರೆಕ್ಟರ್ ಡಾ.ಕೆ.ಆರ್.ದಾಕ್ಷಾಯಿಣಿ ಅವರಿಗೆ ತಿಳಿಸಿದರು.

ಆಸ್ಪತ್ರೆಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ನೌಕರರನ್ನು ಒದಗಿಸಿರುವ ಏಜೆನ್ಸಿಗಳು ನಿಯಮಾನುಸಾರ ಇಎಸ್‌ಐ, ಪಿಎಫ್, ವೇತನ ನೀಡುತ್ತಿಲ್ಲ ಎಂಬ ಆರೋಪವಿದ್ದರೂ ಯಾವುದೇ ಕ್ರಮ ವಹಿಸುತ್ತಿಲ್ಲವೇಕೆ? ಎಂದು ಶಾಸಕರು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ.ಹೆಚ್.ವಿ.ಶೋಭಾ, ತಾವು ಅಧಿಕಾರ ವಹಿಸಿಕೊಂಡ ಬಳಿಕ ನೌಕರರಿಗೆ ಸೌಲಭ್ಯ ನೀಡದ ಏಜೆನ್ಸಿಗಳ ಪಾವತಿಯಲ್ಲಿ ಕಡಿತ ಮಾಡಿದ್ದೇವೆ. ಹಾಗಾಗಿ ಈಗ ಆ ರೀತಿಯ ಸಮಸ್ಯೆಗಳಿಲ್ಲ ಎಂದರು.

ಇದೇ ವೇಳೆ ಕೆಆರ್.ಆಸ್ಪತ್ರೆ ಕ್ಯಾಂಟಿನ್‌ಗೆ ಭೇಟಿ ನೀಡಿದ ಶಾಸಕರು, ಸ್ವಚ್ಛತೆ ಕಾಯ್ದುಕೊಳ್ಳಬೇಕು. ಈ ಬಗ್ಗೆ ಅಧಿಕಾರಿಗಳು ಸದಾ ಗಮನಹರಿಸಬೇಕು ಎಂದು ತಿಳಿಸಿದರಲ್ಲದೆ, ಆಸ್ಪತ್ರೆಯ ಇತರೆ ಕಾಮಗಾರಿ ಪೂರ್ಣಗೊಳಿಸಿರುವ ಗುತ್ತಿಗೆದಾರರಿಗೆ ತಕ್ಷಣವೇ ಬಿಲ್ ಪಾವತಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ನಂತರ ಚೆಲುವಾಂಬ ಆಸ್ಪತ್ರೆ ಕಟ್ಟಡಗಳ ಕಾಮಗಾರಿಯನ್ನೂ ಶಾಸಕರು ಪರಿಶೀಲಿಸಿದರು. ಈ ವೇಳೆ ಎಂಎಂಸಿಆರ್‌ಐ ಸಿಇಓ ಕಲ್ಪಶ್ರೀ, ಹಣಕಾಸು ಅಧಿಕಾರಿ ವಿದ್ಯಾ, ಚೆಲುವಾಂಬ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ರಾಜೇಂದ್ರಕುಮಾರ್, ಆರೋಗ್ಯ ಇಲಾಖೆ ಇಂಜಿನಿಯರಿಂಗ್ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ದೊರೆಸ್ವಾಮಿ, ಲೋಕೋಪಯೋಗಿ ಇಲಾಖೆ ಇಂಜಿನಿಯರ್‌ಗಳು ಹಾಗೂ ಇನ್ನಿತರ ಸಿಬ್ಬಂದಿ ಹಾಜರಿದ್ದರು.

ಉದುರಿದ ಪ್ಲಾಸ್ಟರಿಂಗ್; ಶಾಸಕರು ಗರಂ



ಕೆ.ಆರ್.ಆಸ್ಪತ್ರೆ ಆಡಳಿತ ಕಚೇರಿ ಕಾಮಗಾರಿ ಪರಿಶೀಲಿಸಿದ ಶಾಸಕ ಕೆ.ಹರೀಶ್‌ಗೌಡರು, ಕಾಮಗಾರಿ ವ್ಯವಸ್ಥಿತವಾಗಿ ನಡೆಯುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈ ವೇಳೆ ಗೋಡೆಗೆ ಮಾಡಲಾಗಿದ್ದ ಪ್ಲಾಸ್ಟರಿಂಗ್ ಅನ್ನು ಕೈಯಲ್ಲಿ ಮುಟ್ಟುತ್ತಿದ್ದಂತೆ ಅದು ಪುಡಿಯಾಗಿ ಉದುರಿದ್ದರಿಂದ ಗುತ್ತಿಗೆದಾರರು ಹಾಗೂ ಆರೋಗ್ಯ ಇಲಾಖೆಯ ಇಂಜಿನಿಯರಿಂಗ್ ವಿಭಾಗದ ಇಂಜಿನಿಯರ್‌ಗಳನ್ನು ತರಾಟೆ ತೆಗೆದುಕೊಂಡರು. ಆಸ್ಪತ್ರೆಯ ಒಪಿಡಿ ವಿಭಾಗದ ಪರಿಶೀಲನೆ ವೇಳೆ ಭಾಗಾರ್ಧ ಕಾಮಗಾರಿ ನಡೆಸುತ್ತಿದ್ದು, ಮತ್ತೊಂದು ಭಾಗದಲ್ಲಿ ಧೂಳಿನಲ್ಲಿಯೇ ವೈದ್ಯರು ಕರ್ತವ್ಯ ನಿರ್ವಹಿಸುತ್ತಿರುವುದನ್ನು ಗಮನಿಸಿ, ಈ ಬಗ್ಗೆ ಎಂಎಂಸಿಆರ್‌ಐ ಡೀನ್ ಡಾ.ಕೆ.ಆರ್.ದಾಕ್ಷಾಯಿಣಿ ಅವರನ್ನು ಪ್ರಶ್ನಿಸಿದರು. ಅವರು ಕೊಠಡಿಗಳ ಕೊರತೆಯಿಂದಾಗಿ ಈ ರೀತಿಯ ವ್ಯವಸ್ಥೆಯನ್ನು ಮಾಡಲಾಗಿದೆ ಎಂದಿದ್ದರಿಂದ ಹೆಚ್ಚು ಸಂಖ್ಯೆಯ ಕಾರ್ಮಿಕರ ಮೂಲಕ ಆದಷ್ಟು ಬೇಗ ಕಾಮಗಾರಿಯನ್ನು ಪೂರ್ಣಗೊಳಿಸಿ ಎಂದು ಗುತ್ತಿಗೆದಾರರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಶಾಸಕರು ಸೂಚನೆ ನೀಡಿದರು.

'ಕರಿನೀರ ವೀರ' ಯಶಸ್ವಿ ಪ್ರದರ್ಶನ



ಕಲಾಮಂದಿರದ ಕಿರುರಂಗಮಂದಿರದಲ್ಲಿ ಸೋಮವಾರ ವೀರ ಸಾವರ್ಕರ್ ಜೀವನಾಧಾರಿತ 'ಕರಿನೀರ ವೀರ' ನಾಟಕ ಪ್ರದರ್ಶನಗೊಂಡಿತು.

ಮೈಸೂರು, ಜ.29(ಎಂಕೆ)– ರಂಗಾಯಣ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ರಚಿತ ಸ್ವಾತಂತ್ರ್ಯ ಹೋರಾಟಗಾರರಾದ ವೀರ ಸಾವರ್ಕರ್ ಜೀವನಾಧಾರಿತ 'ಕರಿನೀರ ವೀರ' ನಾಟಕ ಭರ್ತಿ ಕಲಾಭಿಮಾನಿಗಳೊಂದಿಗೆ ಯಶಸ್ವಿ ಪ್ರದರ್ಶನಗೊಂಡಿತು.

ಮೈಸೂರು ಕಲಾಮಂದಿರದ ಕಿರುರಂಗಮಂದಿರ ವೇದಿಕೆಯಲ್ಲಿ ಕಿಕ್ಕಿರಿದು ತುಂಬಿದ್ದ ವೀರ ಸಾವರ್ಕರ್ ಅಭಿಮಾನಿಗಳಿಗೆ ಮನರಂಜನೆ ಜೊತೆಗೆ ಸಾವರ್ಕರ್ ಅವರ ಹೋರಾಟದ ಬದುಕನ್ನು ಎಳೆಎಳೆಯಾಗಿ ತಿಳಿಸಲಾಯಿತು. ನಾಟಕದ ಆರಂಭದಿಂದ ಮುಕ್ತಾಯದವರೆಗೂ ರಂಗಾಸಕ್ತರ ಗಮನ ಬೇರೆಡೆಗೆ ಹರಿಯದಂತೆ ಅಚ್ಚುಕಟ್ಟಾಗಿ ಅಭಿನಯಿಸಿದ ಕಲಾವಿದರು ಅಪಾರ ಮೆಚ್ಚುಗೆ ಪಡೆದರು.

ಇಂದು ಮತ್ತೊಂದು ಪ್ರದರ್ಶನ: ಬಳಿಕ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ರಂಗಾಯಣ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ನಾಳೆ(ಜ.30) ಸಂಜೆಯೂ ಕೂಡ ನಾಟಕ ಪ್ರದರ್ಶನ ಇರಲಿದ್ದು, ಬಹುತೇಕ ಟಿಕೆಟ್‌ಗಳು ಮಾರಾಟವಾಗಿವೆ. ಹಾಗೆಯೇ ನಾಟಕ ಪ್ರದರ್ಶನದ ಪಯಣ ನಿರಂತರವಾಗಿ ಸಾಗಲಿದ್ದು, ಫೆ3 ಮತ್ತು 4 ರಂದು ಶಿವಮೊಗ್ಗದಲ್ಲಿ, ಫೆ6 ರಂದು ಶಿಕಾರಿಪುರದಲ್ಲಿ, ಫೆ.10 ಮತ್ತು 11 ರಂದು ದಾವಣಗೆರೆ, ಫೆ.13 ರಂದು ಚಿತ್ರದುರ್ಗ, ಫೆ.15 ರಂದು ತುಮಕೂರು, ಫೆ.16 ರಂದು ಗುಬ್ಬಿ, ಫೆ.22 ರಂದು ಕಲ್ಲಡ್ಕದಲ್ಲಿ ನಾಟಕ ಪ್ರದರ್ಶನವನ್ನು ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಬೋಗಾದಿ ರಸ್ತೆಯ ಅವೈಜ್ಞಾನಿಕ ರೋಡ್ ಹಂಪ್ಸ್ ಪರಿಶೀಲಿಸಿದ ಡಿಸಿಪಿ ಜಾಹ್ನವಿ; ಕ್ರಮದ ಎಚ್ಚರಿಕೆ



ಬೋಗಾದಿ ಮುಖ್ಯರಸ್ತೆಯಲ್ಲಿ ರಾತ್ರೋರಾತ್ರಿ ನಿರ್ಮಾಣವಾಗಿರುವ ಅವೈಜ್ಞಾನಿಕ ರೋಡ್ ಹಂಪ್ಸ್‌ಗಳನ್ನು ಡಿಸಿಪಿ ಎಸ್.ಜಾಹ್ನವಿ ಪರಿಶೀಲಿಸಿದರು. ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ, ಕೆ.ಆರ್ ಸಂಚಾರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಮೊಹಮ್ಮದ್ ಇರ್ಷಾದ್ ಉಪಸ್ಥಿತರಿದ್ದರು

ಮೈಸೂರು, ಜ.29(ಎಂಕೆ)– ಮೈಸೂರು ವಿವಿ ಮಾನಸ ಗಂಗೋತ್ರಿ ಮುಖ್ಯ ದ್ವಾರದ ಬಳಿಯಿಂದ ಸ್ಪೀಚ್ ಅಂಡ್ ಹಿಯರಿಂಗ್(ಆಯುಷ್) ಜಂಕ್ಷನ್‌ವರೆಗಿನ ಮೈಸೂರು–ಬೋಗಾದಿ ಮುಖ್ಯರಸ್ತೆಯಲ್ಲಿ ರಾತ್ರೋರಾತ್ರಿ ನಿರ್ಮಾಣವಾಗಿರುವ ಅವೈಜ್ಞಾನಿಕ ರೋಡ್ ಹಂಪ್ಸ್‌ಗಳನ್ನು ಪರಿಶೀಲಿಸಿದ ಮೈಸೂರು ನಗರ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್.ಜಾಹ್ನವಿ, ವೈಜ್ಞಾನಿಕವಾಗಿ ರೋಡ್ ಹಂಪ್ಸ್ ಮಾಡಿಲ್ಲ ಎಂದು ತಿಳಿಸಿದರು.

ಸೋಮವಾರ ಸಂಜೆ ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ, ಕೆ.ಆರ್ ಸಂಚಾರ ಪೊಲೀಸ್ ಠಾಣೆ ಮೊಹಮ್ಮದ್ ಇರ್ಷಾದ್ ಅವರೊಂದಿಗೆ ಸ್ಥಳ ಪರಿಶೀಲನೆ ನಡೆಸಿದ ಅವರು, ಕೆಲ ಸಮಯ ವಾಹನಗಳ ಸಂಚಾರ ವೀಕ್ಷಣೆ ಮಾಡಿದರಲ್ಲದೆ, ಹಂಪ್ಸ್‌ಗಳ ಪಕ್ಕದಲ್ಲಿ ಇರಿಸಲಾಗಿದ್ದ ಬ್ಯಾರಿಕೇಡ್‌ಗಳನ್ನು ಸರಿಯಾದ ಕ್ರಮದಲ್ಲಿ ಹಾಗೂ ಇನ್ನಷ್ಟು ಬ್ಯಾರಿಕೇಡ್‌ಗಳನ್ನು ಬಳಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಸೂಚನೆ ನೀಡಿದರು.

ಬಳಿಕ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ವೈಜ್ಞಾನಿಕವಾಗಿ ರೋಡ್ ಹಂಪ್ಸ್ ಮಾಡಿಲ್ಲ. ರೋಡ್ ಹಂಪ್ಸ್‌ಗಳಿಗೆ ಸರಿಯಾಗಿ ರಿಫ್ಲೆಕ್ಟಿಂಗ್(Reflecting) ಬಣ್ಣ ಬಳಿದಿಲ್ಲ. ಅಲ್ಲದೆ ಹಂಪ್ಸ್ ಇದೆ ಎಂಬ ಯಾವ ಸೂಚನಾ ಫಲಕಗಳು ಇಲ್ಲ. ಹಾಗಾಗಿ ಈಗಿರುವ ಹಂಪ್ಸ್‌ಗಳನ್ನು ತೆಗೆದು ರಂಬಲ್ ಸ್ಟ್ರಿಪ್‌ಗಳನ್ನು(ಚಿಕ್ಕ ಚಿಕ್ಕ ಹಂಪ್ಸ್‌ಗಳು) ಅಳವಡಿಸುವಂತೆ ಸೂಚಿಸಲಾಗುವುದು ಎಂದು ತಿಳಿಸಿದರು.

ಅವೈಜ್ಞಾನಿಕ ಹಂಪ್ಸ್ ನಿರ್ಮಿಸಿರುವವರ ಕುರಿತು ಕಾನೂನು ರೀತಿಯಲ್ಲಿ ಕ್ರಮ ಜರುಗಿಸಲಾಗುವುದು. ಅದಕ್ಕೂ ಮೊದಲು ನಗರ ಪಾಲಿಕೆ ಆಯುಕ್ತರಿಗೆ ರೋಡ್ ಹಂಪ್ಸ್ ಕುರಿತು ಸಂಪೂರ್ಣ ಮಾಹಿತಿ ನೀಡುವಂತೆ ನೋಟಿಸ್ ನೀಡಲಾಗುವುದು. ಹಂಪ್ಸ್ ಹಾಕಲು ಯಾರಿಂದ ಅನುಮತಿ ಪಡೆದಿದ್ದರು. ರೋಡ್ ಹಂಪ್ಸ್‌ಅನ್ನು ವೈಜ್ಞಾನಿಕವಾಗಿ ಹಾಕಲಾಗಿದೆಯೋ ಎಂಬುದ ಕುರಿತು ಪಿಡಬ್ಲ್ಯುಡಿ ಇಲಾಖೆಯಿಂದ ಮಾಹಿತಿ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಅನುಮತಿ ಕಡ್ಡಾಯ: ರಸ್ತೆಗಳಲ್ಲಿ ರೋಡ್ ಹಂಪ್ಸ್ ಅಳವಡಿಸಲು ಪೊಲೀಸ್ ಇಲಾಖೆ ಹಾಗೂ ಲೋಕೋಪಯೋಗಿ ಇಲಾಖೆ ಅನುಮತಿ ಕಡ್ಡಾಯವಾಗಿ ಪಡೆದು ನಿಯಾನುಸಾರ ವೈಜ್ಞಾನಿಕವಾಗಿ ರೋಡ್ ಹಂಪ್ಸ್ ಅಳವಡಿಸಬೇಕು. ಈಗಾಗಲೇ ಸಂಬಂಧಪಟ್ಟ ನಗರ ಪಾಲಿಕೆ ಇಂಜಿನಿಯರ್ ಅವರೊಂದಿಗೆ ಮಾತನಾಡಿದ್ದು, ಸಂಪೂರ್ಣ ಮಾಹಿತಿ ಪಡೆದು ಕ್ರಮ ಜರುಗಿಸಲಾಗುವುದು ಎಂದು ಮಾಹಿತಿ ನೀಡಿದರು.

ಭಾರತ ವಿರೋಧಿ ನಡೆ: ಮಾಲ್ಡೀವ್ಸ್ ಅಧ್ಯಕ್ಷ ಮುಯಿಝು ಪದಚ್ಯುತಿ ಪ್ರಕ್ರಿಯೆಗೆ ಚಾಲನೆ!



ಮಾಲಿ(ಮಾಲ್ಡೀವ್ಸ್): ಮಾಲ್ಡೀವ್ಸ್ ಸಂಸತ್ತಿನಲ್ಲಿ ಬಹುಮತ ಹೊಂದಿರುವ ಪ್ರಮುಖ ವಿರೋಧ ಪಕ್ಷವಾದ ಮಾಲ್ಡೀವಿಯನ್ ಡೆಮಾಕ್ರೆಟಿಕ್ ಪಾರ್ಟಿ(MDP), ಅಧ್ಯಕ್ಷ ಮೊಹಮ್ಮದ್ ಮುಯಿಝು ವಿರುದ್ಧ ಮಹಾಭಿಯೋಗ (ಇಂಪೀಚ್‌ಮೆಂಟ್) ನಿರ್ಣಯವನ್ನು ಸಲ್ಲಿಸಲು ಸಜ್ಜಾಗಿದೆ.

ನಿನ್ನೆ ಭಾನುವಾರ ಚೀನಾ ಪರ ಒಲವಿರುವ ಮೊಹಮ್ಮದ್ ಮುಯಿಝು ಸಂಪುಟಕ್ಕೆ ಅಟಾರ್ನಿ ಜನರಲ್ ಅಹ್ಮದ್ ಉಶಮ್, ಆರ್ಥಿಕ ಸಚಿವ ಮೊಹಮ್ಮದ್ ಸಯೀದ್, ವಸತಿ ಸಚಿವ ಅಲಿ ಹೈದರ್ ಮತ್ತು ಇಸ್ಲಾಮಿಕ್ ಸಚಿವ ಡಾ. ಮೊಹಮ್ಮದ್ ಶಹೀಮ್ ಅಲಿ ಸಯೀದ್ ಅವರನ್ನು ಸೇರಿಸಿಕೊಳ್ಳುವ ವಿಚಾರವಾಗಿ ಸಂಸತ್ತಿನಲ್ಲಿ ವಾಗ್ವಾದ ನಡೆದಿದ್ದು, ಹೊಡೆದಾಟ ಮತ್ತು ಬಡಿದಾಟಗಳು ನಡೆದಿದ್ದವು.

ಎಂಡಿಪಿ ಮತ್ತು ಡೆಮೋಕ್ರಾಟ್‌ಗಳ ಪ್ರತಿನಿಧಿಗಳನ್ನು ಒಳಗೊಂಡ ಒಟ್ಟು 34 ಸದಸ್ಯರು ಅಧ್ಯಕ್ಷರನ್ನು ಮಹಾಭಿಯೋಗ ಮಾಡುವ ನಿರ್ಣಯಕ್ಕೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ ಎಂದು ತಿಳಿದುಬಂದಿದೆ. ಇನ್ನು ಇತ್ತೀಚೆಗೆ ಮಾಲ್ಡೀವ್ಸ್ ಸಂಸತ್ತು ತನ್ನ ಸ್ಥಾಯಿ ಆದೇಶಗಳನ್ನು ತಿದ್ದುಪಡಿ ಮಾಡಿದ್ದು, ಸಂಸದರಿಗೆ ಮಹಾಭಿಯೋಗ ನಿರ್ಣಯವನ್ನು ಮಂಡಿಸಲು ಇದು ಸುಲಭವಾಗಿದೆ. ಎಂಡಿಪಿ ಮತ್ತು ಡೆಮೋಕ್ರಾಟ್‌ಗಳು ಒಟ್ಟು 56 ಸಂಸದರನ್ನು ಹೊಂದಿದ್ದರೆ ಈ ಪೈಕಿ ಎಂಡಿಪಿ 43 ಸಂಸದರ ಬಲ ಹೊಂದಿದ್ದರೆ ಇನ್ನು 12 ಮಂದಿ ಡೆಮೋಕ್ರಾಟ್‌ಗಳಾಗಿದ್ದಾರೆ.

ಮೊಹಮ್ಮದ್ ಮುಯಿಝುರನ್ನು ಪದಚ್ಯುತಿಗೊಳಿಸಲು ಅಗತ್ಯ ಪ್ರಮಾಣದ ಸಂಸದರ ಸಹಿಯನ್ನು ಎಂಡಿಪಿ ಪಕ್ಷ ಈಗಾಗಲೇ ಸಂಗ್ರಹಿಸಿದೆ. ಹೀಗಾಗಿ, ಮಾಲ್ಡೀವ್ಸ್ ಸಂಸತ್‌ನಲ್ಲಿ ಶೀಘ್ರದಲ್ಲೇ ನಿರ್ಣಯ ಮಂಡಿಸುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ದೇಶಾದ್ಯಂತ ಬಿಗಿ ಭದ್ರತೆ ಕೈಗೊಳ್ಳಲಾಗಿದೆ.

ಮಾಲ್ಡೀವ್ಸ್ ಸಂಸತ್ತಿನಲ್ಲಿ ಸಂಸದರ ನಡುವೆ ಹೊಡೆದಾಟ!: ಸಂಸತ್ತಿನಲ್ಲಿ ಆಗಾಗ ವಾದ–ವಿವಾದಗಳು ನಡೆಯುತ್ತಲೇ ಇರುತ್ತವೆ. ಆದರೆ ಮಾಲ್ಡೀವ್ಸ್‌ನ ಸಂಸತ್ತಿನಲ್ಲಿ ನಡೆದಿರುವ ಘಟನೆಯೇ ಅಚ್ಚರಿ ಮೂಡಿಸಿದೆ. ಇಲ್ಲಿ ಸಂಸತ್ತಿನಲ್ಲಿ ಹೊಡೆದಾಟ, ಬಡಿದಾಟ ನಡೆದಿದ್ದು ಮಾತ್ರವಲ್ಲದೆ ಸಂಸದರು ಒಬ್ಬರನ್ನೊಬ್ಬರು ಎತ್ತಿಕೊಂಡು ನೆಲದ ಮೇಲೆ ಕುಕ್ಕಿದ್ದಾರೆ. ಇದರ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ.

ವಿಡಿಯೋದಲ್ಲಿ ಒಬ್ಬ ಸಂಸದ ಮತ್ತೊಬ್ಬನ ಕಾಲು ಎಳೆಯುತ್ತಿರುವುದು ಕಂಡು ಬರುತ್ತಿದೆ. ಮುಯಿಝು ಕ್ಯಾಬಿನೆಟ್ ಮೇಲಿನ ಮತದಾನಕ್ಕಾಗಿ ಇದೆಲ್ಲ ನಡೆದಿದೆ. ವಾಸ್ತವವಾಗಿ ನಿನ್ನೆ ಇಲ್ಲಿ ಸಚಿವ ಸಂಪುಟಕ್ಕೆ ಮತದಾನ ನಡೆಯಬೇಕಿತ್ತು. ಆದರೆ ವಿರೋಧ ಪಕ್ಷವು ನಾಲ್ವರು ಸಚಿವರ ಅನುಮೋದನೆಯನ್ನು ತಡೆಹಿಡಿಯುವುದಾಗಿ ಹೇಳಿದ್ದು ಈ ಹಿನ್ನೆಲೆಯಲ್ಲಿ ಆಡಳಿತ ಮತ್ತು ವಿಪಕ್ಷದ ಸಂಸದರು ಕೈ ಕೈ ಮಿಲಾಯಿಸಿದ್ದರು.

ಬೆಂಗಳೂರು: ಬಿಬಿಎಂಪಿ ಕಸದ ಲಾರಿಗೆ 15 ವರ್ಷದ ಬಾಲಕಿ ಬಲಿ

ಬೆಂಗಳೂರು: ಬಿಬಿಎಂಪಿ ಕಸದ ಟ್ರಕ್‌ಗೆ ವಾಹನ ಡಿಕ್ಕಿ ಹೊಡೆದ ಪರಿಣಾಮ 15 ವರ್ಷದ ಬಾಲಕಿ ಸಾವನ್ನಪ್ಪಿದ ಘಟನೆ ಪುಲಕೇಶಿನಗರ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ಮಸೀದಿ ರಸ್ತೆ ಬಳಿ ನಡೆದಿದೆ. ಈಕೆ ನಗರದ ಖಾಸಗಿ ಶಾಲೆಯೊಂದರಲ್ಲಿ 9ನೇ ತರಗತಿ ಓದುತ್ತಿದ್ದಳು. ಸಂಜೆ ಅಂತ್ಯಕ್ರಿಯೆ ನಡೆಯಿತು. ಪುಲಕೇಶಿನಗರ ಸಂಚಾರಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಇದೇ ವೇಳೆ ನಗರದಲ್ಲಿ ಶನಿವಾರ ಮತ್ತೆ ಮೂರು ರಸ್ತೆ ಅಪಘಾತಗಳು ವರದಿಯಾಗಿವೆ. ಒಂದು ಘಟನೆಯಲ್ಲಿ, 35 ವರ್ಷದ ಇಶಾಕ್ ಮಾಂಜಿ ಅವರು ರಸ್ತೆ ದಾಟುತ್ತಿದ್ದಾಗ ವೇಗವಾಗಿ ಬಂದ ದ್ವಿಚಕ್ರ ವಾಹನ ಡಿಕ್ಕಿ ಹೊಡೆದ ಪರಿಣಾಮ ಸಾವನ್ನಪ್ಪಿದ್ದಾರೆ. ಹೆಣ್ಣೂರು ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಬೆಳಗ್ಗೆ 11.15ರ ಸುಮಾರಿಗೆ ಘಟನೆ ನಡೆದಿದೆ.


ಜೆ.ಪಿ.ನಗರದ ನಿವಾಸಿ ಅರುಣ್ ನೈಸ್ ರಸ್ತೆ ಸೇತುವೆಯಿಂದ ಅಂಜನಾಪುರ ರಸ್ತೆ ಕಡೆಗೆ ಹೋಗುತ್ತಿದ್ದಾಗ ಅಪಘಾತ ಸಂಭವಿಸಿದೆ. ಕುಮಾರಸ್ವಾಮಿ ಲೇಔಟ್ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಎಲೆಕ್ಟ್ರಾನಿಕ್ ಸಿಟಿ ಟ್ರಾಫಿಕ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ, ಬಿಹಾರದ 32 ವರ್ಷದ ಸುಜಿತ್ ಶಾ ಅವರ ದ್ವಿಚಕ್ರ ವಾಹನಕ್ಕೆ ವೇಗವಾಗಿ ಬಂದ ಲಾರಿ ಡಿಕ್ಕಿ ಹೊಡೆದ ಪರಿಣಾಮ ಸಾವನ್ನಪ್ಪಿದ್ದಾರೆ. ಮೃತರು ಕೂಲಿ ಕೆಲಸ ಮಾಡಿಕೊಂಡು ಚಿಕ್ಕನಾಗಮಂಗಲದಲ್ಲಿ ವಾಸವಾಗಿದ್ದರು.

ಬಾಗಲಕೋಟೆಯಲ್ಲಿ ಭೀಕರ ಅಪಘಾತ; ನಾಲ್ವರು ವಿದ್ಯಾರ್ಥಿಗಳ ದಾರುಣ ಸಾವು

ಬಾಗಲಕೋಟೆ: ಶಾಲಾ ವಾಹನ ಮತ್ತು ಟ್ರ್ಯಾಕ್ಟರ್ ನಡುವೆ ನಡೆದ ಭೀಕರ ಅಪಘಾತದಲ್ಲಿ ನಾಲ್ವರು ಮಕ್ಕಳು ಮೃತಪಟ್ಟಿರುವ ಘಟನೆ ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕಿನ ಆಲಗೂರು ಬಳಿ ನಡೆದಿದೆ. ಒಬ್ಬ ವಿದ್ಯಾರ್ಥಿ ಸ್ಥಳದಲ್ಲೇ ಸಾವನ್ನಪ್ಪಿದ್ದು, ಉಳಿದ ಮೂವರು ಆಸ್ಪತ್ರೆಗೆ ಸಾಗಿಸುವ ವೇಳೆ ಮೃತಪಟ್ಟಿದ್ದಾರೆ. ಎಂಟಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಗಾಯವಾಗಿದೆ. ಶ್ವೇತಾ ಪಾಟೀಲ (16), ಸಾಗರ ಕಡಕೋಳ (17), ಗೋವಿಂದ ಜಂಬಗಿ (13), ಬಸವರಾಜ್ ಕೊಟಗಿ (17) ಮೃತಪಟ್ಟ ವಿದ್ಯಾರ್ಥಿಗಳು.

ಅಲಗೂರು ಗ್ರಾಮದ ವರ್ಧಮಾನ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ವಾರ್ಷಿಕ ಸಾಂಸ್ಕೃತಿಕ ಕಾರ್ಯಕ್ರಮ ಮುಗಿಸಿ ವಾಪಸ್ ಊರಿಗೆ ಮರಳುತ್ತಿದ್ದಾಗ ತಡರಾತ್ರಿ 12 ಗಂಟೆಯ ಸುಮಾರಿಗೆ ಅಪಘಾತವಾಗಿದೆ ಎಂದು ತಿಳಿದುಬಂದಿದೆ. ಕಾರ್ಯಕ್ರಮ ಮುಗಿಸಿ ಕವಟಗಿ ಗ್ರಾಮದ ಕಡೆ ಹೊರಟಿದ್ದಾಗ ಎದುರಿನಿಂದ ಬಂದ ಟ್ರ್ಯಾಕ್ಟರಿಗೆ ಶಾಲಾ ವಾಹನ ಡಿಕ್ಕಿಯಾಗಿದೆ. ಜಮಖಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ಸ್ಥಳಕ್ಕೆ ದೌಡಾಯಿಸಿ ಪರಿಶೀಲನೆ ನಡೆಸಿದ್ದಾರೆ.

ಫೆ.7ರಂದು ಹಿಂದೂ ದೇವಾಲಯಗಳ ಅರ್ಚಕರ ಸಮಾವೇಶ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟದ ಅಧ್ಯಕ್ಷ ಎಂ.ಎಸ್.ವೆಂಕಟಾಚಲಯ್ಯ ಮಾತನಾಡಿದರು

ಮೈಸೂರು,ಜ.29(ಎಂಟಿವೈ)– ಬೆಂಗಳೂರಿನ ಪುರಭವನದಲ್ಲಿ ಫೆ.7ರಂದು ಬೆಳಗ್ಗೆ 10ಕ್ಕೆ ರಾಜ್ಯ ಮಟ್ಟದ ಬೃಹತ್ ಸಮಾವೇಶ ಆಯೋಜಿಸಲಾಗಿದೆ ಎಂದು ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟದ ಅಧ್ಯಕ್ಷ ಎಂ.ಎಸ್.ವೆಂಕಟಾಚಲಯ್ಯ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರು ಹಿಂದೂ ಪರಂಪರೆಯನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ದೇವಾಲಯಗಳಲ್ಲಿ ವಿಧಿವಿಧಾನದಂತೆ ಪ್ರತಿದಿನ ಪೂಜೆ ಮಾಡುತ್ತಾ ಬಂದಿದ್ದಾರೆ. ಈ ನಡುವೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಳ್ಳುತ್ತಿದ್ದು, ನಮ್ಮ ಬೇಡಿಕೆಗಳ ಈಡೇರಿಕೆ ಒತ್ತಾಯಿಸಿ ಮನವಿ ಸಲ್ಲಿಸಲಾಗುತ್ತದೆ ಎಂದರು.

ರಾಜ್ಯದಲ್ಲಿರುವ ಹಲವಾರು ದೇವಾಲಯಗಳಿಗೆ ಸರ್ಕಾರದಿಂದ ತಸ್ತೀಕ್ ಬರುತ್ತಿಲ್ಲ. ದೇವಾಲಯದ ಪೂಜೆ ಖರ್ಚನ್ನೂ ನಾವೇ ಭರಿಸಬೇಕಾಗುತ್ತದೆ. ಹೀಗಾಗಿ ಮಾಸಿಕ ಗೌರವಧನ ನೀಡಬೇಕು. ಅರ್ಚಕರ ವಶದಲ್ಲಿರುವ ಜಮೀನುಗಳಿಗೆ ಸಂಬಂಧಿಸಿದಂತೆ ಹಲವಾರು ಕಡೆ ಗ್ರಾಮಸ್ಥರಿಂದ ಕಿರುಕುಳ ಆರಂಭವಾಗಿದೆ. ಇದನ್ನು ತಪ್ಪಿಸಬೇಕು. ಪ್ರಮುಖವಾಗಿ ಸಿ. ಶ್ರೇಣಿಯ ದೇವಾಲಯಗಳ ಅರ್ಚಕರು ಹಾಗೂ ಇನ್ನಿತರ ದೇವಾಲಯಗಳ ಅರ್ಚಕರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಗಮನ ಸೆಳೆಯಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟದ ಪದಾಧಿಕಾರಿಗಳಾದ ಮಹದೇವಪ್ಪ, ರಘುನಂದನ್, ವೈಸಿ. ಬಸವರಾಜು, ಎಂ.ಸಿ. ಸುರೇಶ್, ಹೆಚ್.ಡಿ. ಕೋಟೆ ಬಸವರಾಜು ಇದ್ದರು.

ವಿಶ್ವವೇ ಮೆಚ್ಚಿದ ಧೀರ ಸೇನಾನಿ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ

ಹಿರಿಯ ಸಾಹಿತಿ ಬನ್ನೂರು ರಾಜು ಸ್ಮರಣೆ-ನಮನ



ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪನವರ 125ನೇ ಜನ್ಮ ದಿನೋತ್ಸವದ ಅಂಗವಾಗಿ ನಡೆಸಲಾದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.

ಮೈಸೂರು, ಜ.29(ಎಸ್‌ಬಿಡಿ)– ಭಾರತೀಯ ಸೇನೆಯ ಮೊದಲ ಮಹಾದಂಡನಾಯಕ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪನವರು ವಿಶ್ವವೇ ನಿಬ್ಬೆರಗಾಗುವಂತೆ ಸೇನೆಯನ್ನು ಬಲಿಷ್ಠವಾಗಿ ಕಟ್ಟಿ ಬೆಳೆಸಿದರು ಎಂದು ಸಾಹಿತಿ ಬನ್ನೂರು ಕೆ.ರಾಜು ಹೇಳಿದರು.

ಮೈಸೂರಿನ ಯಾದವಗಿರಿಯ ಭಾರತೀ ಸ್ತ್ರೀ ಸಮಾಜದ ಶಿಶುವಿಹಾರ ಮತ್ತು ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಕಾವೇರಿ ಬಳಗ ಮತ್ತು ಹಿರಣ್ಮಯಿ ಪ್ರತಿಷ್ಠಾನದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪನವರ 125ನೇ ಜನ್ಮದಿನೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತ ಸೇನೆಯ ಮಹಾಸಾಧಕರಾದ ಕೆ.ಎಂ. ಕಾರ್ಯಪ್ಪನವರು ಇಡೀ ವಿಶ್ವವೇ ಮೆಚ್ಚಿದ್ದ ಧೀರ ಸೇನಾನಿಯಾಗಿದ್ದರು ಎಂದರು.

ಫೀಲ್ಡ್ ಮಾರ್ಷಲ್ ಕಾರ್ಯಪ್ಪನವರು ಮಹಾನ್ ದೇಶ ಭಕ್ತ, ದೇಶ ಪ್ರೇಮಿ, ವೀರಾಗ್ರಣಿಯಾಗಿ ಸೇನೆಯಲ್ಲಿ ಮೂರೂವರೆ ದಶಕಗಳ ಸುದೀರ್ಘ ಸೇವೆ ಸಲ್ಲಿಸುವ ಮೂಲಕ ದೇಶಕ್ಕಾಗಿ ಸಂಪೂರ್ಣವಾಗಿ ಸಮರ್ಪಿಸಿಕೊಂಡರು. ಅಪ್ರತಿಮ ದೇಶಭಕ್ತ ಕಾರ್ಯಪ್ಪರಂತಹ ಸುಪುತ್ರನನ್ನು ಪಡೆದ ಭಾರತ ಮಾತೆ ನಿಜಕ್ಕೂ ಧನ್ಯಳು. ಇವರು ಕರ್ನಾಟಕದ ಕಲಿ ಅದರಲ್ಲೂ ಯೋಧರ ನಾಡು ಕೊಡಗಿನ ವೀರ ಕುವರ ಎಂಬುದು ನಮ್ಮೆಲ್ಲರಿಗೂ ಹೆಮ್ಮೆ. ಕಾವೇರಿಯಷ್ಟೇ ನಿರ್ಮಲ, ಪರಿಶುದ್ಧ ವ್ಯಕ್ತಿತ್ವದ ಶಿಸ್ತಿನ ಸಿಪಾಯಿ, ನಿಸ್ವಾರ್ಥಿ ಕಾರ್ಯಪ್ಪನವರಿಗೆ ದೇಶ ಸೇವೆ ಹಾಗೂ ದೇಶದ ಸೇನೆಯೇ ಸರ್ವಸ್ವವಾಗಿತ್ತು. ಅವರ ಕಾರ್ಯ ವೈಖರಿ, ಸಮಯ ಪ್ರಜ್ಞೆ, ಶಿಸ್ತು ಪಾಲನೆ ಮತ್ತು ಅವರ ಆದರ್ಶ ಬದುಕು ಎಂದಿಗೂ ದೇಶಕ್ಕೆ ಮಾದರಿ. ಇವರ ಬದುಕು ಯುವ ಸಮುದಾಯಕ್ಕೆ ಪ್ರೇರಣೆ ಎಂದು ಬಣ್ಣಿಸಿದರು.

ಮೊಟ್ಟ ಮೊದಲ ಮಹಾ ದಂಡನಾಯಕರಾಗಿ ಕಾರ್ಯಪ್ಪನವರು ಭೂಸೇನೆ, ವಾಯುಸೇನೆ ಹಾಗೂ ನೌಕಾಸೇನೆಗೆ ಬಲ ತುಂಬುವ ಮೂಲಕ ಭದ್ರಬುನಾದಿ ಹಾಕಿದರು. ಕ್ರಾಂತಿಕಾರಿ ನಡೆಯ ಮೂಲಕ ಸೇನಾ ಸಾರ್ವಭೌಮರಾಗಿ ಮಿಂಚಿದರು. ಭಾರತೀಯ ಸೇನೆ ಇಷ್ಟೊಂದು ಬಲಿಷ್ಠವಾಗಿರುವಲ್ಲಿ ಕಾರ್ಯಪ್ಪನವರ ಕೊಡುಗೆ ಮಹತ್ತರವಾದುದು. ಪ್ರತಿಯೊಬ್ಬ ಭಾರತೀಯನೂ ಕಾರ್ಯಪ್ಪನವರ ಆದರ್ಶವನ್ನು ಅನುಸರಿಸಬೇಕಿದೆ ಎಂದರು.

ದೇಶದ ಸೇನೆಯಲ್ಲಿ ಸೇವೆ ಸಲ್ಲಿಸಲು ಕೊಡವರು ಸದಾ ಸಿದ್ಧರಿರುತ್ತಾರೆ. ಹಾಗಾಗಿ ಕೊಡಗನ್ನು ವೀರರ ನಾಡು ಎಂದು ಗುರುತಿಸಲಾಗುತ್ತದೆ. ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಜನರಲ್ ತಿಮ್ಮಯ್ಯ ಅವರಂತಹ ಹಲವು ಯೋಧ ಸಾಧಕರನ್ನು ದೇಶಕ್ಕೆ ಕೊಡುಗೆ ನೀಡಿದೆ. ಕೊಡಗಿನ ದೇಶ ಸೇವೆಯ ಪರಂಪರೆ ಮುಂದುವರೆದಿದ್ದು, ಈಗಲೂ ಸೈನ್ಯದಲ್ಲಿ ಕೊಡವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎಂದು ಇದೇ ವೇಳೆ ತಿಳಿಸಿದರು.

ಕಾರ್ಯಕ್ರಮದ ಅಂಗವಾಗಿ ನಡೆಸಲಾದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ.ಕಾವೇರಿಯಮ್ಮ ಬಹುಮಾನ ವಿತರಿಸಿದರು. ಸಂಖ್ಯಾಶಾಸ್ತ್ರಜ್ಞ ಎಸ್.ಜೆ.ಸೀತಾರಾಂ, ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ, ಮುಖ್ಯ ಶಿಕ್ಷಕಿ ರಾಣಿ, ಶಿಕ್ಷಕಿಯರಾದ ಭಾಗ್ಯಲಕ್ಷ್ಮಿ, ವನಿತಾ, ಸುಜಾತ, ರೂಪ, ಶ್ರೀಕಂತಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಮಂಗಳವಾರ 30 ಜನವರಿ 2024

ಮಂಡ್ಯದಲ್ಲಿ ಜೆಡಿಎಸ್, ಬಿಜೆಪಿ, ಹಿಂದೂ ಪರ ಸಂಘಟನೆಗಳಿಂದ ಬೃಹತ್ ಪ್ರತಿಭಟನೆ









ಕೆರಗೋಡು ಗ್ರಾಮದಲ್ಲಿ ಹಾರಿಸಿದ್ದ ಹನುಮ ಧ್ವಜವನ್ನು ತೆರೆವುಗೊಳಿಸಿದ ಕ್ರಮವನ್ನು ಖಂಡಿಸಿ ಬಿಜೆಪಿ, ಜೆಡಿಎಸ್ ಮತ್ತು ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರು ಸೋಮವಾರ ಕೆರಗೋಡಿವಿನಿಂದ ಮಂಡ್ಯ ಜಿಲ್ಲಾಧಿಕಾರಿ ಕಚೇರಿವರೆಗೆ ಪಾದಯಾತ್ರೆ ನಡೆಸಿ, ಪ್ರತಿಭಟಿಸಿದರು. ಈ ವೇಳೆ ದಾರಿಯಲ್ಲಿ ಸಿಕ್ಕ ಫ್ಲೆಕ್ಸ್‌ಗಳ ಮೇಲೆ ಕಲ್ಲು ತೂರಾಟ ನಡೆಸಿ ಅವುಗಳನ್ನು ಹರಿದು ಆಕ್ರೋಶ ವ್ಯಕ್ತಪಡಿಸಿದರು. ಮಂಡ್ಯ ಮತ್ತು ಕೆರಗೋಡುವಿನಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಇದರಿಂದ ಮಂಡ್ಯದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು. ಕಲ್ಲು ತೂರಾಟದಿಂದ ಮಹಿಳೆಯರು ಸೇರಿದಂತೆ ಹಲವು ಕಾರ್ಯಕರ್ತರಿಗೆ ಗಾಯಗಳಾಗಿವೆ. ಇದೇ ರೀತಿ ಲಾಠಿ ಚಾರ್ಜ್‌ನಿಂದ ಸಣ್ಣ-ಪುಟ್ಟ ಗಾಯಗಳಾದ ಬಗ್ಗೆಯೂ ವರದಿಗಳು ಬಂದಿವೆ.

ಹನುಮ ಧ್ವಜ ತೆಗೆದ ಸರ್ಕಾರ ರಾಜಕೀಯವಾಗಿ ಭಸ್ಮವಾಗಬೇಕು



ಮಂಡ್ಯಜ.29- ಕೆರಗೋಡಿನಲ್ಲಿ ಹಾರಿಸಿದ್ದ ಹನುಮ ಧ್ವಜವನ್ನು ತೆಗೆದ ರಾಜ್ಯ ಸರ್ಕಾರ ರಾಜಕೀಯವಾಗಿ ಭಸ್ಮವಾಗಬೇಕೆಂದು ಮಾಜಿ ಸಚಿವ ಸಿ.ಟಿ. ರವಿ ಅವರು ಕಿಡಿಕಾರಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಅವರು, ನಮ್ಮ ಹೋರಾಟ ಕಾಂಗ್ರೆಸ್ ಸರ್ಕಾರದ ಹಿಂದೂ ವಿರೋಧಿ ನೀತಿಯ ವಿರುದ್ಧವಾಗಿದ್ದು, ಹನುಮನನ್ನ ಕೆಣಕಿ ಯಾರೂ ಉಳಿದಿಲ್ಲ. ಕಾಂಗ್ರೆಸ್ ಕೂಡ ಜಾಸ್ತಿ ದಿನ ಉಳಿಯಲ್ಲ. ಹನುಮ ಜನಿಸಿದ ನಾಡು ಕರ್ನಾಟಕ, ಈ ನಾಡಲ್ಲಿ ಹನುಮ ಧ್ವಜ ಹಾಕೋದು ಅಪರಾಧ ಎಂದು ಕಾಂಗ್ರೆಸ್ ಭಾವಿಸಿದೆ ಎಂದರು.

ನಾವು ಊರು, ಊರಿನಲ್ಲಿ, ಮನೆ ಮನೆಯಲ್ಲಿ ಹನುಮ ಧ್ವಜ ಹಾರಿಸುತ್ತೇವೆ. ಕಾಂಗ್ರೆಸ್ಸಿಗರಿಗೆ ತಾಕತ್ತಿದ್ದರೆ ತೆಗೆಯಲಿ ನೀವು ಉಳಿಯುತ್ತೀರೋ, ಹನುಮ ಭಕ್ತರು ಉಳಿಯುತ್ತಾರೋ ನೋಡೋಣ ಎಂದು ಸವಾಲು ಹಾಕಿದ ಅವರು, ಸಿದ್ದರಾಮಯ್ಯ ಹೆಸರಲ್ಲಿ ರಾಮ ಇರಬಹುದು ಆದರೆ ರಾಮ ಭಕ್ತಿ ಇಲ್ಲ. ರಾಮನ ವಿರೋಧಿ ಎಂದು ಕೆರಗೋಡು ಘಟನೆ ಬಳಿಕ ಸಿದ್ದರಾಮಯ್ಯ ಸಾಬೀತು ಪಡಿಸಿದ್ದು, ಕಾಂಗ್ರೆಸ್‌ಗೆ ಭೂತ, ಪ್ರೇತಾ ಮೆಟ್ಟಿಕೊಂಡಿದೆ ಎಂದು ಲೇವಡಿ ಮಾಡಿದರು.

ಸಿದ್ದರಾಮಯ್ಯ ಅವರು ತನ್ನ ರಾಜಕೀಯ ಲಾಭಕ್ಕೆ ಹನುಮ ಧ್ವಜ ತೆಗೆದಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ- ಜೆಡಿಎಸ್ ಮೈತ್ರಿಕೂಟ 28ಕ್ಕೆ 28 ಸ್ಥಾನವನ್ನು ಗೆಲ್ಲಲಿದ್ದು, ಸರ್ಕಾರ ತಪ್ಪು ಮಾಡಿದೆ ಸಾರ್ವಜನಿಕವಾಗಿ ಕ್ಷಮೆಯಾಚಿಸಬೇಕು. ಕೆರಗೋಡು ಗ್ರಾಮದಲ್ಲಿ ಮತ್ತೆ ಹನುಮ ಧ್ವಜ ಹಾರಾಡಬೇಕು ಎಂದು ಎಚ್ಚರಿಸಿದರು.

ಹೊರಗಿನವರನ್ನು ಕರೆಸಿ ನನ್ನ ವಿರುದ್ಧ ಗಲಾಟೆ



ಮಂಡ್ಯ: ಹೊರಗಿನಿಂದ ಗಲಭೆಕೋರರನ್ನು ಕರೆಸಿ ನನ್ನ ವಿರುದ್ಧ ಗಲಾಟೆ ಮಾಡಿಸಲಾಗಿದೆ. ನಮ್ಮ ಕೆರಗೋಡು ಜನಕ್ಕೆ ಆ ಘೋಷಣೆ ಕೂಗೋದಕ್ಕೂ ಬರುವುದಿಲ್ಲ. ಹೊರಗಿನಿಂದ ಜನರನ್ನು ಕರೆತಂದು ಗಲಾಟೆ ಮಾಡಿ, ಕಲ್ಲು ಹೊಡೆಸಿದ್ದಾರೆ ಎಂದು ಶಾಸಕ ಗಣಿಗ ರವಿಕುಮಾರ್ ಕಿಡಿಕಾರಿದರು. ಸೋಮವಾರ ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ನಮ್ಮ ಫ್ಲೆಕ್ಸ್‌ಗಳನ್ನು ಕಿತ್ತುಹಾಕಿಸಿ ಗಲಾಟೆ ಮಾಡಿಸಿದ್ದಾರೆ. ತ್ರಿವರ್ಣ ಧ್ವಜ ಹಾರಿಸಿದ್ದಕ್ಕೆ ನಮ್ಮ ವಿರುದ್ಧ ಪ್ರತಿಭಟನೆ ಮಾಡುತ್ತಾರೆ ಎಂದರೆ ಏನರ್ಥ? ಜೆಡಿಎಸ್‌ನ ರಾಮಚಂದ್ರು ಬಿಜೆಪಿ ಮುಖಂಡ ಅಶೋಕ್ ಜಯರಾಮ್ ಹಾಗೂ ಸ್ಥಳೀಯ ಪುಡಾರಿಗಳು ಇಲ್ಲಿ ಗಲಭೆ ಸೃಷ್ಟಿಸಿದ್ದಾರೆ ಎಂದು ಆರೋಪಿಸಿದರು.

ಇದರಲ್ಲಿ ಸ್ಥಳೀಯ ಪಿಡಿಓ ಅವರ ತಪ್ಪು ಇದೆ. ಅವರನ್ನು ಅಮಾನತು ಮಾಡುವಂತೆ ಹೇಳಿದ್ದೇನೆ. ಹನುಮಧ್ವಜ ಹಾರಿಸಲು ಅನುಮತಿ ಕೊಡಲು ಅವರಿಗೆ ಅಧಿಕಾರವಿಲ್ಲ. ಆದರೂ ಆ ಪಿಡಿಓ ಅವರನ್ನು ಬೆದರಿಸಿ ಅನುಮತಿ ಪಡೆದುಕೊಂಡಿದ್ದಾರೆ. ಈ ಬಗ್ಗೆ ತನಿಖೆ ಮಾಡಲು ಹೇಳಿದ್ದೇನೆ ಎಂದು ಸ್ಪಷ್ಟಪಡಿಸಿದರು. ಹನುಮ ಬಾವುಟವನ್ನು ಇಳಿಸಿ ರಾಷ್ಟ್ರಧ್ವಜ ಹಾರಿಸಿರುವುದಕ್ಕೆ ನನ್ನ ವಿರುದ್ಧ ಕೆಂಡಕಾರುತ್ತಿರುವ ಬಿಜೆಪಿ- ಜೆಡಿಎಸ್ ಮುಖಂಡರು ರಾಷ್ಟ್ರಧ್ವಜಕ್ಕಿರುವ ಗೌರವ ಮತ್ತು ತೂಕದ ಬಗ್ಗೆ ಮೊದಲು ತಿಳಿದುಕೊಳ್ಳಲಿ. ರಾಷ್ಟ್ರಧ್ವಜಕ್ಕೆ ತನ್ನದೇ ಆದ ಶಕ್ತಿ ಇದೆ. ದ್ವೇಷದ ರಾಜಕಾರಣವನ್ನು ಬಿಜೆಪಿ, ಜೆಡಿಎಸ್, ಭಜರಂಗದಳ, ಹಿಂದೂಪರ ಕಾರ್ಯಕರ್ತರು ಬಿಡಬೇಕು. ಕ್ಷುಲ್ಲಕ ರಾಜಕಾರಣದಿಂದ ಅಭಿವೃದ್ಧಿ ಅಸಾಧ್ಯ ಎಂದರು.

ಗಣಿಗ ರವಿಕುಮಾರ್ ಮನೆಗೆ ಬಿಗಿ ಪೊಲೀಸ್ ಭದ್ರತೆ

ಮಂಡ್ಯ: ಹನುಮ ಧ್ವಜ ತೆರವು ವಿವಾದದ ಕೇಂದ್ರ ಬಿಂದುವಾಗಿರುವ ಮಂಡ್ಯ ಕ್ಷೇತ್ರದ ಕಾಂಗ್ರೆಸ್ ಶಾಸಕ ಗಣಿಗ ರವಿಕುಮಾರ್ ಮನೆಗೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ನಿನ್ನೆಯಿಂದ ಶಾಸಕ ರವಿ ವಿರುದ್ಧ ರೊಚ್ಚಿಗೆದ್ದಿರುವ ಬಿಜೆಪಿ ಮತ್ತು ಹಿಂದೂ ಪರ ಕಾರ್ಯಕರ್ತರು, ಶಾಸಕರ ಭಾವಚಿತ್ರಗಳನ್ನು ಸುಟ್ಟು ಹಾಕಿದ್ದಾರೆ. ಅವರ ಮನೆಗೆ ಮುತ್ತಿಗೆ ಹಾಕಲು ಸಹ ಭಜರಂಗದಳ ಹಾಗೂ ವಿಎಚ್‌ಪಿ ಕಾರ್ಯಕರ್ತರು ಮುಂದಾಗಿದ್ದರು. ಈ ಹಿನ್ನೆಲೆಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯಬಾರದೆಂದು ನಗರದ ಬಂದೀಗೌಡ ಬಡಾವಣೆಯಲ್ಲಿರುವ ಶಾಸಕರ ನಿವಾಸಕ್ಕೆ 10ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ.

ಬಿಜೆಪಿ ಹೊಂದಾಣಿಕೆ ಬಯಸಿದರೆ ನಾವು ಸಿದ್ಧ



ಶ್ರೀ ಉಗ್ರ ನರಸಿಂಹ ಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿದ ಜನಾರ್ದನ್ ರೆಡ್ಡಿ.

ಮದ್ದೂರು, ಜ.29- ಮುಂಬರುವ ಲೋಕಸಭಾ ಚುನಾವಣೆಯಲ್ಲಿ ನಮ್ಮ ಪಕ್ಷದೊಂದಿಗೆ ಬಿಜೆಪಿ ಹೊಂದಾಣಿಕೆ ಮಾಡಿಕೊಂಡರೆ ನಾವು ಅವರೊಂದಿಗೆ ಚುನಾವಣೆ ಎದುರಿಸಲು ಸಿದ್ಧರಿದ್ದೇವೆ ಎಂದು ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ರಾಜ್ಯಾಧ್ಯಕ್ಷರೂ ಮತ್ತು ಶಾಸಕರೂ ಆದ ಗಾಲಿ ಜನಾರ್ಧನ್ ರೆಡ್ಡಿ ಅವರು ತಿಳಿಸಿದ್ದಾರೆ.

ಪಟ್ಟಣದ ಪುರಾಣ ಪ್ರಸಿದ್ಧ ಶ್ರೀ ಉಗ್ರನರಸಿಂಹ ಸ್ವಾಮಿ ದೇವಾಲಯ, ಶ್ರೀ ಪಟ್ಟಾಭಿರಾಮ, ಶ್ರೀ ವರದರಾಜ ಸ್ವಾಮಿ ದೇವಾಲಯಗಳಲ್ಲಿ ವಿಶೇಷ ಪೂಜೆ ಸಲ್ಲಿಸಿ, ಬಿಜೆಪಿ ಕಾರ್ಯಕರ್ತರಿಂದ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡುತ್ತಿದ್ದರು.

ಪ್ರಧಾನಿ ನರೇಂದ್ರ ಮೋದಿಯವರು ಮತ್ತೊಮ್ಮೆ ಪ್ರಧಾನಿಯಾಗಬೇಕು ಎಂಬ ಉದ್ದೇಶದಿಂದ ಬಿಜೆಪಿ ಹೊಂದಾಣಿಕೆ ಬಯಸಿದರೆ ಒಪ್ಪಿಕೊಳ್ಳಲಾಗುವುದು ಎಂದ ಅವರು, ತಮ್ಮ ಪಕ್ಷ ಮುಂಬರುವ ಲೋಕಸಭಾ ಚುನಾವಣೆ ಸೇರಿದಂತೆ ಐದು ಜಿಲ್ಲೆಗಳಲ್ಲಿ ಸ್ವತಂತ್ರವಾಗಿ ಸ್ಪರ್ಧಿಸಲು ಸಿದ್ಧತೆ ನಡೆಸುತ್ತಿದೆ ಎಂದರು.

ಹೆಚ್ಡಿಕೆ ಆಗಮಿಸುತ್ತಿದ್ದಂತೆ ಕಾಲ್ಕಿತ್ತ ನಾರಾಯಣಗೌಡ, ಪ್ರೀತಮ್‌ಗೌಡ



ನಾರಾಯಣಗೌಡ



ಪ್ರೀತಮ್‌ಗೌಡ

ಮಂಡ್ಯ: ಕೆರಗೋಡಿನಲ್ಲಿ ಹನುಮ ಧ್ವಜ ಹಾರಿಸುವಂತೆ ಆಗ್ರಹಿಸಿ ನಡೆದ ಪಾದಯಾತ್ರೆಗೆ ಡಿಸಿ ಕಚೇರಿ ಬಳಿ ಪ್ರತಿಭಟನಾಕಾರರನ್ನು ಕೂಡಿಕೊಳ್ಳಲು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಆಗಮಿಸುತ್ತಿದ್ದಂತೆಯೇ ಸ್ಥಳದಿಂದ ಬಿಜೆಪಿಯ ಮಾಜಿ ಸಚಿವ ಕೆ.ಸಿ.ನಾರಾಯಣಗೌಡ ಹಾಗೂ ಮಾಜಿ ಶಾಸಕ ಪ್ರೀತಮ್‌ಗೌಡ ಜಾಗ ಖಾಲಿ ಮಾಡಿದರು.

ಜೆಡಿಎಸ್ ಜೊತೆಗೆ ಬಿಜೆಪಿ ಹೊಂದಾಣಿಕೆ ಮಾಡಿಕೊಂಡಾಗಿನಿಂದಲೂ ಮೈತ್ರಿಗೆ ವಿರೋಧ ಮಾಡುತ್ತಿರುವ ಕೆ.ಸಿ.ನಾರಾಯಣಗೌಡ ಮಂಡ್ಯ ಲೋಕಸಭಾ ಕ್ಷೇತ್ರವನ್ನು ಸುಮಲತಾ ಅವರಿಗೆ ಬಿಟ್ಟುಕೊಡಬೇಕೆಂದು ಆಗ್ರಹ ಮಾಡುತ್ತಲೇ ಬಂದಿದ್ದಾರೆ. ಮೈತ್ರಿಯಿಂದ ಕೆ.ಆರ್.ಪೇಟೆಯಲ್ಲಿ ಮುಂದಿನ ಚುನಾವಣೆಗೆ ಬಿಜೆಪಿ ಟಿಕೆಟ್ ತಮಗೆ ತಪ್ಪಬಹುದೆಂಬುದು ನಾರಾಯಣಗೌಡರ ಆತಂಕವಾದರೆ, ಅತ್ತ ಹಾಸನದಲ್ಲೂ ಮೈತ್ರಿಯಿಂದ ಬಿಜೆಪಿ ತಮಗೆ ಟಿಕೆಟ್ ಕೊಡುವುದಿಲ್ಲ ಎಂಬುದು ಪ್ರೀತಮ್‌ಗೌಡ ಲೆಕ್ಕಾಚಾರ. ಈ ನಿಟ್ಟಿನಲ್ಲಿ ಇಬ್ಬರೂ ನಾಯಕರು ಮೈತ್ರಿಗೆ ವಿರೋಧ ವ್ಯಕ್ತಪಡಿಸುತ್ತಾ ಬಂದಿದ್ದು, ಈ ಮುನಿಸು ಪ್ರತಿಭಟನಾ ಸಮಯದಲ್ಲೂ ಮುಂದುವರೆದಿದೆ. ಇವರಿಬ್ಬರು ಜಾಗ ಖಾಲಿ ಮಾಡುತ್ತಿದ್ದಂತೆ ಅವರ ಬೆಂಬಲಿಗರು ಕೂಡ ಅವರನ್ನು ಹಿಂಬಾಲಿಸಿದರು.

ಕೋಮುವಾದ ಕೆರಳಿಸುವ ಬಿಜೆಪಿ ಯತ್ನ ವಿಫಲವಾಗಲಿದೆ



ಮಂಡ್ಯ, ಜ.29- ಮಂಡ್ಯದಲ್ಲಿ ಕೋಮುವಾದದ ವಿಷ ಬೀಜ ಬಿತ್ತಿ, ರಾಜಕೀಯ ಪ್ರಯೋಜನ ಪಡೆಯಲು ಹೊರಟ ಬಿಜೆಪಿ ಹಾಗೂ ಮಿತ್ರ ಪಕ್ಷಗಳ ಪ್ರಯತ್ನ ವಿಫಲವಾಗಲಿದೆ ಎಂದು ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಹೇಳಿದ್ದಾರೆ.

ಮಂಡ್ಯದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಮಂಡ್ಯದ ಕೆರಗೋಡು ಗ್ರಾಮದಲ್ಲಿ ರಾಷ್ಟ್ರ ಧ್ವಜ, ಕನ್ನಡ ಧ್ವಜ ಹಾರಿಸಲು ಗ್ರಾಪಂನಿಂದ ಅನುಮತಿ ಪಡೆದು, ಕೇಸರಿ ಬಾವುಟ ಹಾಗೂ ಹನುಮ ಧ್ವಜ ಹಾರಿಸಲಾಗಿತ್ತು. ಜಿಲ್ಲಾಡಳಿತ ಆ ಧ್ವಜ ಇಳಿಸಿ ರಾಷ್ಟ್ರ ಧ್ವಜ ಹಾರಿಸಿದೆ. ಜಿಲ್ಲಾಡಳಿತ ಸಂವಿಧಾನದ ಆಶಯದಂತೆ ಕಾನೂನಾತ್ಮಕವಾಗಿ ನಡೆದುಕೊಂಡಿದೆ. ಆದರೆ, ಬಿಜೆಪಿ ಹಾಗೂ ಅದರ ಮಿತ್ರ ಪಕ್ಷ ಜೆಡಿಎಸ್ ಅದನ್ನು ಕೋಮುವಾದೀಕರಣಗೊಳಿಸಿ ರಾಜಕೀಯ ಪ್ರಯೋಜನ ಪಡೆಯಲು ಹೊರಟಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಂಡ್ಯ ಹೋರಾಟದ ನಾಡು ನಮ್ಮದು ಎಂಬುದನ್ನು ಯಾರೂ ಸಹ ಮರೆಯಬಾರದು. ಎಚ್.ಕೆ. ವೀರಣ್ಣ ಗೌಡರು, ಎಸ್.ಎಂ.ಕೃಷ್ಣ, ಕೆ.ವಿ.ಶಂಕರೇಗೌಡರು, ಅಂಬರೀಶ್, ಚೌಡಯ್ಯ, ಎಸ್.ಡಿ.ಜಯರಾಂ, ಜಿ.ಮಾದೇಗೌಡರು ಸೇರಿದಂತೆ ಅನೇಕ ನಾಯಕರು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿದ್ದಾರೆ. ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಈ ನೆಲದಲ್ಲಿ ಮಾಡಿದ ಘಟಾನುಘಟಿ ನಾಯಕರ ತವರು ಜಿಲ್ಲೆ ಇದಾಗಿದೆ. ಈಗ ಇಂತಹ ನಾಡಿನಲ್ಲಿ ಬಿಜೆಪಿ ಮತ್ತು ಅವರ ಮಿತ್ರ ಪಕ್ಷ ಜೆಡಿಎಸ್ ಕೋಮುವಾದದ ವಿಷ ಬೀಜ ಬಿತ್ತಲು ಯತ್ನಿಸುತ್ತಿದೆ. ಅದು ಖಂಡಿತಾ ಯಶಸ್ವಿಯಾಗದು ಎಂದರು.

ಮಂಡ್ಯದ ಜನ ಬಹಳ ಪ್ರಜ್ಞಾವಂತರಿದ್ದಾರೆ. ಇಲ್ಲಿ ಶೇ.90 ರಷ್ಟು ರೈತರಿದ್ದಾರೆ. ಅವರನ್ನು ಕೆರಳಿ, ಕೋಮು ವಾತಾವರಣ ನಿರ್ಮಾಣ ಮಾಡಲು ಬಿಜೆಪಿ ನಾಯಕರು ಪ್ರಚೋದನೆ ಮಾಡುತ್ತಿದ್ದಾರೆ. ಬಿಜೆಪಿ ಜನರ ಭಾವನೆಗಳ ಮೇಲೆ ರಾಜಕಾರಣ ಮಾಡಲು ಹೊರಟಿದೆ. ಕಾಂಗ್ರೆಸ್ ಜನರ ಬದುಕನ್ನು ಕಟ್ಟಲು ಹೊರಟಿದೆ. ಅದಕ್ಕಾಗಿಯೇ ಗ್ಯಾರಂಟಿ ಯೋಜನೆಗಳಾದ ಅನ್ನಭಾಗ್ಯ, ಗೃಹಜ್ಯೋತಿ, ಗೃಹಲಕ್ಷ್ಮೀ, ಯುವನಿಧಿಯಂಥ ಯೋಜನೆಯಿಂದ ಲಕ್ಷಾಂತರ ಬಡವರ ಬದುಕಿಗೆ ನೆರವಾಗುತ್ತಿದೆ. ಬರ ಇದ್ದರೂ ಜನ ನೆಮ್ಮದಿ ಬದುಕು ನಡೆಸುವಂತೆ ಮಾಡಿದೆ ಎಂದು ದಿನೇಶ್ ಗೂಳಿಗೌಡ ವಿವರಿಸಿದರು.

ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಚೆಲುವರಾಯ ಸ್ವಾಮಿ ನೇತೃತ್ವದಲ್ಲಿ ಕಾಂಗ್ರೆಸ್ ಸದೃಢವಾಗಿದೆ. ಅಭಿವೃದ್ಧಿಯ ಕರ್ನಾಟಕವನ್ನು ನಿರ್ಮಾಣ ಮಾಡುತ್ತಿದ್ದಾರೆ. ಹೀಗಾಗಿ ಬಿಜೆಪಿಗೆ ಈ ಯತ್ನದಲ್ಲಿ ಯಶಸ್ಸು ಸಿಗದು. ಈ ಧ್ವಜ ವಿವಾದದಲ್ಲಿ ನ್ಯಾಯಕ್ಕೆ ಜಯವಾಗಲಿದ್ದು, ಬಿಜೆಪಿಗರು ನಿರಾಶರಾಗುತ್ತಾರೆ ಎಂದು ದಿನೇಶ ಗೂಳಿಗೌಡ ಹೇಳಿದ್ದಾರೆ.

ಕೆರಗೋಡಿಗೆ ಶಾಸಕ ಜನಾರ್ದನರೆಡ್ಡಿ ಭೇಟಿ, ಹನುಮ ಧ್ವಜ ತೆಗೆದಿದ್ದಕ್ಕೆ ಆಕ್ರೋಶ

ಮಂಡ್ಯ,ಜ.29- ಕೆರಗೋಡು ಗ್ರಾಮಕ್ಕೆ ಸೋಮವಾರ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಗಂಗಾವತಿ ಕ್ಷೇತ್ರದ ಶಾಸಕ ಜನಾರ್ದನರೆಡ್ಡಿ ಭೇಟಿ ನೀಡಿ, ಪರಿಸ್ಥಿತಿ ಅವಲೋಕಿಸಿ, ಗ್ರಾಮಸ್ಥರಿಂದ ಮಾಹಿತಿ ಪಡೆದುಕೊಂಡರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕನ್ನಡನಾಡು ಎಂದರೆ ಹನುಮನ ನಾಡು. ಕರ್ನಾಟಕದಲ್ಲೇ ಹನುಮ ಹುಟ್ಟಿದ್ದಾನೆ. ರಾಜ್ಯ ಸರ್ಕಾರ ರಾತ್ರೋರಾತ್ರಿ 40 ವರ್ಷಗಳಿಂದ ಗ್ರಾಮದಲ್ಲಿ ಹಾರಿಸುತ್ತಿದ್ದ ಹನುಮ ಧ್ವಜವನ್ನು ತೆರವು ಮಾಡಿದ್ದು ತಪ್ಪು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರ ಹೀಗೆ ನಡೆದುಕೊಳ್ಳಬಾರದಿತ್ತು. ಹನುಮ ಎಂದರೆ ಈ ದೇಶದಲ್ಲಿ ಪ್ರತಿಯೊಬ್ಬರಲ್ಲೂ ವಿಶೇಷ ಭಕ್ತಿ ಇದೆ. ಜನರ ಭಾವನೆಗಳಿಗೆ ಸರ್ಕಾರ ಅಪಮಾನ ಮಾಡಿದೆ. ಹನುಮ ಹುಟ್ಟಿದ ಅಂಜನಾದ್ರಿ ವ್ಯಾಪ್ತಿಗೆ ಬರುವ ಗಂಗಾವತಿ ಕ್ಷೇತ್ರದ ಶಾಸಕನಾಗಿ, ಹನುಮನಿಗೆ ಅಪಮಾನವಾದಾಗ ಇಲ್ಲಿ ಬಂದು ಅದನ್ನು ಪ್ರಶ್ನಿಸುವುದು ನನ್ನ ಕರ್ತವ್ಯ ಎಂದು ಹೇಳಿದರು.

ಮಂಡ್ಯ ಜಿಲ್ಲೆಯಲ್ಲಿ ನನ್ನ ಪಕ್ಷದ ಕಾರ್ಯಕರ್ತರಿಲ್ಲ ಆದರೆ ಹನುಮನಿಗಾಗಿ ನಾನು ಇಲ್ಲಿಗೆ ಬಂದಿದ್ದು, ಇಲ್ಲಿ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಅವಶ್ಯಕತೆ ನನಗೆ ಇಲ್ಲ. ಲಂಕೆಗೆ ಹನುಮಂತ ಹೋದಾಗ ರಾವಣ ಹನುಮನ ಬಾಲಕ್ಕೆ ಬೆಂಕಿ ಹಚ್ಚಿ ಲಂಕಾ ದಹನ ಮಾಡಿಕೊಂಡ ಹಾಗೆ ಹನುಮನ ಬಾವುಟ ಇಳಿಸಿ ಕಾಂಗ್ರೆಸ್ ದಹನವಾಗಲಿದೆ. ಪಾಪ ಪ್ರಾಯಶ್ಚಿತಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಕೆರಗೋಡಿಗೆ ಬಂದು ಹನುಮ ಧ್ವಜ ಹಾರಿಸಲಿ ಎಂದು ಅವರು ಸಲಹೆ ನೀಡಿದರು.

ಭಾರತೀನಗರ ಬಳಿ ಕತ್ತು ಸೀಳಿ ಯುವಕನ ಹತ್ಯೆ



ನಾಗೇಶ್

ಭಾರತೀನಗರ, ಜ.29-ಯುವಕನ ಕತ್ತು ಸೀಳಿ ಕೊಲೆ ಮಾಡಿರುವ ಘಟನೆ ಸಮೀಪದ ದೊಡ್ಡರಸಿನಕೆರೆ ಗ್ರಾಮದಲ್ಲಿ ಸೋಮವಾರ ನಡೆದಿದೆ.

ಗ್ರಾಮದ ಚೌಡಯ್ಯ ಉರುಫ್ ತಮ್ಮಯ್ಯ ಎಂಬುವರ ಪುತ್ರ ನಾಗೇಶ್ ಅಲಿಯಾಸ್ ಸ್ಪಾಟ್ (35) ಕೊಲೆಯಾದ ಯುವಕ. ಚೇತನ್ ಅಲಿಯಾಸ್ ಗಣೆಯಾರ ಚೇತ ಎಂಬುವರ ಮನೆಯಲ್ಲಿ ಕೊಲೆ ನಡೆದಿದ್ದು, ಪೊಲೀಸರು ಚೇತನ್ ಮೇಲೆ ಅನುಮಾನ ವ್ಯಕ್ತಪಡಿಸಿದ್ದಾರೆ.

ಭಾನುವಾರ ಮಳವಳ್ಳಿ ತಾಲೂಕಿನ ಕೊಂಡದ ಮಾರಮ್ಮನ ದೇವಾಲಯಕ್ಕೆ ತೆರಳಿದ್ದ ವೇಳೆ ನಾಗೇಶ್ ಮತ್ತು ಚೇತನ್ ನಡುವೆ ಜಗಳ ನಡೆದಿತ್ತು. ಅಭಿ ಅಲಿಯಾಸ್ ಕಟ್ಟಪ್ಪ, ಚಂದ್ರ ಅಲಿಯಾಸ್ ಹಿಟಾಚಿ ಮತ್ತಿತರ ಸ್ನೇಹಿತರೂ ಚೇತನ್‌ಗೆ ಸಾಥ್ ನೀಡಿದ್ದರು. ಅಲ್ಲಿಂದ ಊರಿಗೆ ತೆರಳಿದ ನಂತರ ಗ್ರಾಮದ ಸೊಸೈಟಿ ಹಿಂಭಾಗ ಮತ್ತೆ ಚೇತನ್, ನಾಗೇಶ್ ಮೇಲೆ ಜಗಳ ತೆಗೆದು ಹಲ್ಲೆಗೆ ಮುಂದಾಗಿದ್ದಾನೆ ಎಂದು ಹೇಳಲಾಗಿದೆ. ನಂತರ ಗ್ರಾಮದ ಕೆಲ ಮುಖಂಡರು ರಾಜಿ ಸಂಧಾನ ನಡೆಸಿ ಇಬ್ಬರನ್ನು ಮನೆಗೆ ಕಳುಹಿಸಿದ್ದರು. ಮತ್ತೆ ಸೋಮವಾರ ಹಳೇ ಘಟನೆ ಮರುಕಳಿಸಿದ್ದು, ಗಣೆಯಾರ ಚೇತನ್ ಫೋನ್ ಮಾಡಿ ನಾಗೇಶ್‌ನನ್ನು ತನ್ನ ಮನೆಗೆ ಕರೆಯಿಸಿ, ಕತ್ತು ಸೀಳಿ ಕೊಲೆ ಮಾಡಲಾಗಿದೆ. ಕೆ.ಎಂ.ದೊಡ್ಡಿ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಶವವನ್ನು ಮಂಡ್ಯ ಜಿಲ್ಲಾಸ್ಪತ್ರೆ ಶವಾಗಾರಕ್ಕೆ ಸಾಗಿಸಿದರು.



ಶ್ರೀರಂಗಪಟ್ಟಣ ತಾಲೂಕು ಪಿ.ಹೊಸಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಪೈ. ಹೊನ್ನೇಗೌಡ, ಮಾಧು, ಹೆಚ್.ಆರ್. ವಿವೇಕಾನಂದ, ಕುಮಾರ್, ಹೆಚ್.ಎನ್. ಶೇಖರ್, ಹೆಚ್.ಸಿ. ಚೆಲುವರಾಜು, ಹೆಚ್.ಜಿ. ರವಿ, ಹೆಚ್.ಸಿ. ಮಾದಪ್ಪ, ಜವರಪ್ಪ, ಶ್ರೀಮತಿ ಕುಮಾರಿ, ರತ್ನಮ್ಮ, ಸಾಕಮ್ಮ, ಅವರುಗಳು ಮುಂದಿನ ಐದು ವರ್ಷಕ್ಕೆ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದು, ಅವರನ್ನು ಅಭಿನಂದಿಸಲಾಯಿತು.

ಇಂದು ಗ್ಯಾರಂಟಿ ಫಲಾನುಭವಿಗಳ ಸಮಾವೇಶ

ಮಂಡ್ಯ,ಜ.29- ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ, ಡಿಸಿಸಿ ಬ್ಯಾಂಕ್‌ನ ಸ್ವಸಹಾಯ ಸಂಘಗಳಿಗೆ ಸಾಲ ಸೌಲಭ್ಯ ವಿತರಣೆ ಹಾಗೂ ಮಾಹಿತಿ ನೀಡುವ ಸಮಾವೇಶವನ್ನು ಜ.30 ರಂದು ಬೆಳಿಗ್ಗೆ 10 ಗಂಟೆಗೆ ಸಕ್ಕರೆ ಕಾರ್ಖಾನೆ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಎ.ಬಿ.ರಮೇಶ್ ಬಂಡಿಸಿದ್ದೇಗೌಡ ಉಪಸ್ಥಿತಿ ಇರಲಿದ್ದು, ಶಾಸಕ ಪಿ.ರವಿಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದೆ ಸುಮಲತಾ ಅಂಬರೀಶ್, ಶಾಸಕರಾದ ಮರಿತಿಬ್ಬೇಗೌಡ, ಮಧು ಜಿ. ಮಾದೇಗೌಡ, ದಿನೇಶ್ ಗೂಳಿಗೌಡ, ಪಿ.ಎಂ. ನರೇಂದ್ರಸ್ವಾಮಿ, ದರ್ಶನ್ ಪುಟ್ಟಣ್ಣಯ್ಯ, ಎಚ್.ಟಿ. ಮಂಜು, ಕೆ.ಎಂ. ಉದಯ, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ಅಧ್ಯಕ್ಷ ಜೋಗಿಗೌಡ ಭಾಗವಹಿಸಲಿದ್ದಾರೆ.

ಮೂಗೂರಲ್ಲಿ ವೈಭವದ ವೈಮಾಳಿಗೆ ಉತ್ಸವ



ವೈಭವದ ವೈಮಾಳಿಗೆ ಆಳು ಪಲ್ಲಕ್ಕಿ ಉತ್ಸವ ಮೂರ್ತಿ.

ಮೂಗೂರು, ಜ.29- ಶ್ರೀತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವದ ಕೊನೆ ದಿನವಾದ ಸೋಮವಾರ ವೈಮಾಳಿಗೆ ಉತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವೈಭವದಿಂದ ನಡೆಯಿತು.

ಬೆಳಗ್ಗೆಯಿಂದಲೇ ದೇವಿಗೆ ಅಭಿಷೇಕ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯಗಳು ನಡೆಯಿತು. ಬಳಿಕ ದೇವಾಲಯದ ಎದುರಿನ ಮಂಟಪದಲ್ಲಿ ಅಮ್ಮನವರನ್ನು ಉಯ್ಯಾಲೆ ಆಡಿಸಿದ ಬಳಿಕ ಆಳು ಪಲ್ಲಕ್ಕಿ ಉತ್ಸವ ನಡೆಯಿತು. ನಂತರ 11 ಗಂಟೆಗೆ ನರ್ತಕಿಯರ ಪಲ್ಲಕ್ಕಿ ಉತ್ಸವ ಗ್ರಾಮದ ಪ್ರಮುಖ ಬೀದಿಗಳಲ್ಲಿ ಗೊರವನ ಕುಣಿತ, ಮಂಗಳ ವಾದ್ಯದೊಂದಿಗೆ ಸಾಗಿತು. ಈ ವೇಳೆ ಭಕ್ತರು ಅಮ್ಮನವರಿಗೆ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಉತ್ಸವ ದೇವಾಲಯಕ್ಕೆ ಆಗಮಿಸಿತು.

ನಂತರ ಮಧ್ಯಾಹ್ನ 3.30ಕ್ಕೆ ದೇವಾಲಯದ ಒಳಪ್ರಾಂಗಣದಲ್ಲಿ ಅಮ್ಮನವರ ಉತ್ಸವ ಮೂರ್ತಿಯನ್ನು 11 ಸುತ್ತು ಪ್ರದಕ್ಷಿಣೆ ಹಾಕುವ ಮೂಲಕ ಆಳು ಪಲ್ಲಕ್ಕಿ ಉತ್ಸವ ನಡೆಯಿತು. ಈ ವೇಳೆ ದೇವಾಲಯದಲ್ಲಿದ್ದ ಭಕ್ತರು ನೆಮ್ಮದಿ, ಸಂವೃದ್ಧಿ, ಕೋರಿಕೆ, ಆರೋಗ್ಯ ವೃದ್ಧಿಗಾಗಿ ವೀಳ್ಯದೆಲೆ, ಹೂ, ಹಣ್ಣನ್ನು ಅಮ್ಮನವರಿಗೆ ಅರ್ಪಿಸಿದರು. ಇದೇ ವೇಳೆ ಭಕ್ತರುದಕ್ಷಿಣ ದ್ವಾರದ ಮೂಲಕ ಅಮ್ಮನವರು ದೇವಾಲಯ ಪ್ರವೇಶಿಸುವಾಗ ಈಡುಗಾಯಿ ಹೊಡೆದರು. ರಾತ್ರಿ 10.30ರ ಬಳಿಕ ದೇಗುಲ ಸ್ವಚ್ಛಗೊಳಿಸಿ ಪೂರ್ಣಾಭಿಷೇಕ ನೆರವೇರಿಸುವುದರೊಂದಿಗೆ ಮೂಗೂರು ಜಾತ್ರಾ ಮಹೋತ್ಸವಕ್ಕೆ ತೆರೆ ಬಿದ್ದಿತು. ಪೂಜೆಯಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಕುಟುಂಬ ಸಮೇತರಾಗಿ ಭಾವವಹಿಸಿದ್ದರು.

ಶಿಕ್ಷಣದಿಂದ ಮಾತ್ರ ಉತ್ತಮ ಪ್ರಜೆಯಾಗಲು ಸಾಧ್ಯ

ಮಲ್ಲುಂಡಿ, ಜ.29- ಶಿಕ್ಷಣದಿಂದ ಮಾತ್ರ ಉತ್ತಮ ಪ್ರಜೆಯಾಗಲು ಸಾಧ್ಯ ಎಂದು ಎಂ.ಜಿ.ಸುದೀಪ್ ತಿಳಿಸಿದರು.

ಇಲ್ಲಿಗೆ ಸಮೀಪದ ಹೆಡಿಯಾಲ ಗ್ರಾಮದ ಶ್ರೀಕಮಲಮ್ಮ ಶಂಕರಪ್ಪ ವಿದ್ಯಾಸಂಸ್ಥೆ ಶಾಲಾ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಪೋಷಕರು ತಮ್ಮ ಮಕ್ಕಳಿಗೆ ಆಸ್ತಿ ಮಾಡುವ ಬದಲು ಉತ್ತಮ ಶಿಕ್ಷಣ ಕೊಡಿಸಿ. ಪ್ರಸ್ತುತ ಮೊಬೈಲ್ ಹಾವಳಿ ಹೆಚ್ಚಾಗಿದ್ದು, ಮಕ್ಕಳು ಮೊಬೈಲ್‌ನತ್ತ ಗಮನ ಹರಿಸುತ್ತಿದ್ದಾರೆ. ಆದರೆ ಮಕ್ಕಳು ಓದಿನತ್ತ ಗಮನ ಹರಿಸಬೇಕಿದೆ ಎಂದರು. ಈ ವೇಳೆ ಮೈಸೂರಿನ ವಿಜಯ್ ಸೋಶಿಯಲ್ ಎಜುಕೇಷನ್ ಅಧ್ಯಕ್ಷ ಹೆಚ್.ಪಿ.ಜಗದೀಶ್, ಕಮಲಮ್ಮ ಶಂಕರಪ್ಪ ವಿದ್ಯಾಸಂಸ್ಥೆ ಕಾರ್ಯದರ್ಶಿ ಮಹದೇವಸ್ವಾಮಿ, ಗ್ರಾಪಂ ಅದ್ಯಕ್ಷೆ ಮಹದೇವಿ, ಡಾ.ರವಿಶಂಕರ್ ಸೇರಿದಂತೆ ಇತರರಿದ್ದರು.

ಬಡ ಮಕ್ಕಳ ಏಳಿಗೆಗಾಗಿ ಶಿಕ್ಷಣ ಸಂಸ್ಥೆ ಆರಂಭ



ಬನ್ನೂರು, ಜ.29- ಗ್ರಾಮೀಣ ಮಕ್ಕಳು ನಗರ ಪ್ರದೇಶದ ಮಕ್ಕಳಿಗಿಂತ ಕಡಿಮೆ ಇಲ್ಲ. ನಗರಕ್ಕೆ ಹೋಗಿ ವಿದ್ಯೆ ಕಲಿಯಲಾಗದಿದ್ದರೆ ಗ್ರಾಮೀಣ ಭಾಗದಲ್ಲಿ ವಿದ್ಯೆ ಕಲಿಯಲಿ ಎಂಬ ಮಹದಾಸೆಯೊಂದಿಗೆ ಎನ್‌ಸಿಆರ್ ಶಿಕ್ಷಣ ಸಂಸ್ಥೆ ಆರಂಭಿಸಲಾಗಿದೆ ಎಂದು ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಟಿ.ಸಿ.ರಾಜೇಶ್ ತಿಳಿಸಿದರು.

ಇಲ್ಲಿನ ತುರಗನೂರು ಗ್ರಾಮದ ಎನ್‌ಸಿಆರ್ ವಿದ್ಯಾಸಂಸ್ಥೆ ಆವರಣದಲ್ಲಿ ನಡೆದ ಶಾಲಾ ವಾರ್ಷಿಕೋತ್ಸವದಲ್ಲಿ ಮಾತನಾಡಿದ ಅವರು, ಸುಂದರ ಸುಶಿಕ್ಷಿತ ಸಮಾಜ ನಿರ್ಮಾಣ ಮಾಡುವ ಭವ್ಯ ಭಾರತದ ಕನಸಿನ ಮೂಲಕ ಸತ್ಪ್ರಜೆಯನ್ನು ರೂಪಿಸುವ ಹೊಣೆಗಾರಿಕೆ ಶಿಕ್ಷಕರ ಮೇಲಿದೆ. ಶಿಕ್ಷಕರು ತಮ್ಮ ಜವಾಬ್ದಾರಿ ಅರಿತು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು. ಶಿಕ್ಷಣದ ಜೊತೆಗೆ ಸಮಾಜದ ಮೇಲಾಗುವ ಪರಿಣಾಮಗಳ ಬಗೆಗೂ ಬಾಲ್ಯದಿಂದಲೇ ಎಚ್ಚರಿಕೆ ನೀಡಬೇಕೆಂದು ತಿಳಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಶೋಭ, ಎಂ.ಎಲ್. ಹುಂಡಿ ವಿರಕ್ತ ಮಠದ ಗೌರಿಶಂಕರ ಸ್ವಾಮೀಜಿ ಮಾತನಾಡಿದರು. ಇದೇ ವೇಳೆ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಭೂಮಿಕಾ, ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದ ಟಿ.ಆರ್.ಗೌರಿಶಂಕರನನ್ನು ಸನ್ಮಾನಿಸಲಾಯಿತು.

ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಆದಿಶಕ್ತಿ ಗುರುಕುಲ ಸಂಸ್ಥಾಪಕ ಬೋಳಪ್ಪ ಗುರೂಜಿ, ದೈಹಿಕ ಶಿಕ್ಷಣಾಧಿಕಾರಿ ಸುರೇಶ್, ಚಿತ್ರನಟಿ ಭೂಮಿಕಾ, ಸಂಜನಾ ಬುರ್ಲಿ, ಎನ್‌ಸಿಆರ್ ಇಂಟರ್ ನ್ಯಾಷನಲ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ಟಿ.ಎನ್.ಚೆನ್ನಯ್ಯ, ಪ್ರಾಂಶುಪಾಲ ಭವ್ಯ, ರಾಜ್‌ಕುಮಾರ್ ಸುಪುತ್ರಿ ಲಕ್ಷ್ಮಿ, ಗೋವಿಂದರಾಜು, ರೋಟೆರಿಯನ್ ಮುರಳೀಧರ್ ಸೇರಿದಂತೆ ಶಿಕ್ಷಕ ವರ್ಗ, ಸಿಬ್ಬಂದಿ ಇದ್ದರು.



ತಿ.ನರಸೀಪುರ ತಾಲೂಕಿನ ಮುಸುವಿನಕೊಪ್ಪಲು ಪಿಎಸಿಎಸ್‌ನ 2024ನೇ ಸಾಲಿನ ದಿನದರ್ಶಿಕೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಕೆಡಿಪಿ ಸದಸ್ಯ ಸುನೀಲ್ ಬೋಸ್ ಬಿಡುಗಡೆಗೊಳಿಸಿದರು. ಈ ವೇಳೆ ಸಂಘದ ಅಧ್ಯಕ್ಷ ಎಂ.ಶಿವರಾಂ, ಉಪಾಧ್ಯಕ್ಷ ಕೆಬ್ಬೆಹುಂಡಿ ಮಹೇಶ್, ಸಿಇಓ ಎನ್.ರಾಜು, ನಿರ್ದೇಶಕರಾದ ಪುಟ್ಟಮಾದಯ್ಯ, ಎನ್. ಆನಂದ್, ಎನ್.ಮಹೇಶ್, ನಿಂಗರಾಜು, ಚಿಕ್ಕಮಾದ ನಾಯಕ, ಶಿವಣ್ಣ, ಚಂದ್ರು, ಸಮಾಜ ಕಲ್ಯಾಣ ಸಚಿವರ ಆಪ್ತ ಸಹಾಯಕ ಲಕ್ಷ್ಮೀ ನಾರಾಯಣ, ಗುಮಾಸ್ತ ಮಣಿಕಂಠ ಮತ್ತಿತರರಿದ್ದರು.



ಶತಮಾನ ಸಂಭ್ರಮ ಪಡಬೇಕಿದ್ದ ಶಾಲೆಯಲ್ಲಿ ಶೋಚನೀಯ ಪರಿಸ್ಥಿತಿ; ಇದು ನಮ್ಮ ಹೆಮ್ಮೆಯ ಕನ್ನಡ ಶಾಲೆ!

'ಭಾರತ ರತ್ನ' ಸರ್ ಎಂ.ವಿಶ್ವೇಶ್ವರಯ್ಯನವರು ಇಲ್ಲಿ ಕಾಲಕಳೆಯುತ್ತಿದ್ದರು!

● ಮೋಹನ್ ಕಾಯಕ

ಮೈಸೂರು, ಜ.29– ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯ ಅವರು ಕಾಲ ಕಳೆದ, ಶತಮಾನದ ಹೊಸ್ತಿಲಿನಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಮೂಲ ಶಿಕ್ಷಣ ಶಾಲೆ ಅಳಿವಿನಂಚಿನಲ್ಲಿದೆ.... ಸಂರಕ್ಷಿಸದಿದ್ದಲ್ಲಿ ಮರೆಯಾಗಲಿದೆ ಜ್ಞಾನ ದೇಗುಲ....!!

ಮೈಸೂರಿನ ನಜರ್‌ಬಾದ್‌ನಲ್ಲಿರುವ 1 ರಿಂದ 7ನೇ ತರಗತಿ ವರೆಗಿನ ಸರ್ಕಾರಿ ಹಿರಿಯ ಪ್ರಾಥಮಿಕ ಮೂಲ ಶಿಕ್ಷಣ ಶಾಲೆಯ ಸ್ಥಿತಿ ಅತ್ಯಂತ ಶೋಚನೀಯವಾಗಿದ್ದು, ನಾಳೆಯಾದರೂ ನಮ್ಮ ಶಾಲೆ ಹೊಸ ಹೊಳಪು ಪಡೆದುಕೊಳ್ಳಲಿದೆಯೇ ಎಂಬ ಆಶಾ ಭಾವನೆಯಿಂದ ಶಿಕ್ಷಕರು, ವಿದ್ಯಾರ್ಥಿಗಳು ಜಾತಕ ಪಕ್ಷಿಯಂತೆ ಕಾಯುವಂತಾಗಿದೆ.

ಸುಮಾರು 1925ನೇ ಇಸವಿಯಲ್ಲಿ ಸ್ಥಾಪನೆಗೊಂಡ ಮೂಲ ಶಿಕ್ಷಣ ಶಾಲೆಗೆ ಮುಂದಿನ ವರ್ಷಕ್ಕೆ ಅಂದರೆ 2025ಕ್ಕೆ ನೂರು ವರ್ಷಗಳು ತುಂಬಲಿದೆ. ಶತಮಾನೋತ್ಸವ ಸಂಭ್ರಮ ಆಚರಿಸಿಕೊಳ್ಳಬೇಕಾದ ಜ್ಞಾನ ದೇಗುಲ, ಸುಣ್ಣ–ಬಣ್ಣ ಹಾಗೂ ಸುಭದ್ರತೆ ಕಾಣದೆ ಬಸವಳಿದಿದೆ. ಬಾಯ್ತೆರೆದ ಗೋಡೆ ಗಳು, ತೂತು ಬಿದ್ದ ಅಂಚುಗಳು, ಸೋರುತ್ತಿರುವ ಛಾವಣಿಯಿಂದಾಗಿ ಕಣ್ಮರೆಯಾಗುವ ಹಂತಕ್ಕೆ ತಲುಪಿದೆ.

ಸುವಿಶಾಲ ಜಾಗ, ಮರಗಳ ನೆರಳಿನಲ್ಲಿರುವ ಮೂಲ ಶಿಕ್ಷಣ ಶಾಲೆ, ಕನಿಷ್ಠ ಮೂಲ ಸೌಕರ್ಯವಿಲ್ಲದೆ ಕಂಗೆಟ್ಟಿದೆ. ತರಗತಿಯೊಳಗೆ ಅಕ್ಷರ ಬರೆಯಬೇಕಾದ ಕಪ್ಪು ಬೋರ್ಡ್ ಕಿತ್ತು ಬಂದಿದೆ. ಸುತ್ತಲೂ ಗಿಡ–ಗಂಟಿ ಬೆಳೆದು ನಿಂತಿದೆ. ಎತ್ತರದ ಗೋಡೆಯ ಶಾಲೆಯೊಳಗೆ ತಣ್ಣನೆಯ ಅನುಭವವಾದರೂ ಮುಗ್ಧ ಮಕ್ಕಳ ಮನದಲ್ಲಿ ಆತಂಕ, ದುಗುಡ ಆವರಿಸುವಂತಾಗಿದೆ. ನಮ್ಮೊಂದಿಗೆ ಶಿಕ್ಷಕರಿದ್ದಾರೆಂಬ ಧೈರ್ಯದಿಂದ ಕಲಿಯುತ್ತಿದ್ದೇವೆ. ಮುಂದೊಂದು ದಿನ ಇದೇ ಶಾಲೆಯನ್ನು ಸಂರಕ್ಷಣೆ ಮಾಡುತ್ತೇವೆ ಎಂಬ ಮಕ್ಕಳ ಆತ್ಮವಿಶ್ವಾಸವನ್ನು ಕಿವುಚುವ ಕರುಣಾಹೀನ ಕೆಲಸ ಮಾಡುತ್ತಿರುವ ಜನಪ್ರತಿನಿಧಿಗಳು, ಸರ್ಕಾರ ಜ್ಞಾನ ದೇಗುಲವನ್ನು ಉಳಿಸುವ ಕೆಲಸವನ್ನು ಕಡ್ಡಾಯವಾಗಿದೆ ಮಾಡಬೇಕಿದೆ.



7ನೇ ತರಗತಿಯ ಕೆಲವೇ ಮಕ್ಕಳಿಗೆ ಪಾಠ ಮಾಡುತ್ತಿರುವ ಶಿಕ್ಷಕಿ ಮಂಜುಳ

ಬಾಯ್ಬಡ್ಕರಿಗಿಲ್ಲ ಸರ್ಕಾರಿ ಶಾಲೆ ಉಳಿಸುವ ಪರಿಜ್ಞಾನ...!



ಕನ್ನಡ... ಕನ್ನಡ... ಎಂದು ಹಾದಿ–ಬೀದಿಯಲ್ಲಿ ಬುರುಡೇ ಬಿಡುವ ಜನಪ್ರತಿ ನಿಧಿಗಳು, ಕನ್ನಡಪರ ಹೋರಾಡುತ್ತೇವೆಂಬ ಸುಳ್ಳುಗಳ ಸರಮಾಲೆ ಎಣೆಯುವ ಸಂಘಟನೆಗಳು, ಭರವಸೆಗಳಲ್ಲೇ ಕಾಲಹರಣ ಮಾಡುವ ರಾಜ್ಯ ಸರ್ಕಾರ, ಸರ್ಕಾರಿ ಶಾಲೆಗಳನ್ನು ಉಳಿಸುವ ಸಣ್ಣ ಪ್ರಯತ್ನವನ್ನು ಮಾಡುತ್ತಿಲ್ಲ ಎಂದು ಮೈಸೂರಿನ ಪ್ರಜ್ಞಾವಂತ ನಾಗರಿಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಮಾತೃ ಭಾಷೆ ಕನ್ನಡದ ಮೇಲೆ ಪೋಷಕರಿಂದ ಹಿಡಿದು ಜನಪ್ರತಿನಿಧಿಗಳವರೆಗೆ ಯಾಕಿಷ್ಟು ಅಸಡ್ಡೆಯೋ ಕಾಣೆ... ಬೋರ್ಡ್‌ಗಳಲ್ಲಿ ಕನ್ನಡ ಭಾಷೆ ಬಳಸಿ ಎನ್ನುವವರಿಗ್ಯಾಕಿಲ್ಲಾ ಕನ್ನಡ ಶಾಲೆಗಳನ್ನು ಉಳಿಸುವ ಕಾಳಜಿ. ಕನ್ನಡ ಉಸಿರು ಎನ್ನುವವರದು ಬರೀ ಪ್ರಚಾರಕ್ಕೆ ಹೊರತು ಕನ್ನಡಕ್ಕಾಗಿ ಅಲ್ಲ ಎನ್ನುವುದು ಕಣ್ಣೆದುರೇ ಕಣ್ಮರೆಯಾಗುತ್ತಿರುವ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳನ್ನು ಕಂಡರೆ ಅರಿವಾಗುತ್ತದೆ. ಉಗ್ರ ಹೋರಾಟಗಳನ್ನು ನಡೆಸುವವರಲ್ಲಿ ನಿಜವಾದ ಕನ್ನಡ ಕಾಳಜಿ ಇದ್ದರೆ ಅದು ಸರ್ಕಾರಿ ಶಾಲೆಗಳನ್ನು ಉಳಿಸುವತ್ತಾ ಇರಲಿ ಎಂದು ಮನವಿ ಮಾಡಿದ್ದಾರೆ.

ಇಬ್ಬರು ಶಿಕ್ಷಕರು, 18 ಮಕ್ಕಳು!: ಒಂದು ಕಾಲದಲ್ಲಿ ಕುಳಿತುಕೊಳ್ಳಲು ಪರದಾಡುತ್ತಿದ್ದ ಶಾಲೆಯಲ್ಲಿ ಆಸನಗಳು ಖಾಲಿ ಬಿದ್ದಿವೆ. 1 ರಿಂದ 7ನೇ ತರಗತಿ ವರೆಗಿನ ಶಾಲೆಯಲ್ಲಿ ಸದ್ಯಕ್ಕೆ ಇರುವುದು ಕೇವಲ 18 ಮಕ್ಕಳು ಮಾತ್ರ. ಅವರಿಗೆ 6 ವಿಷಯಗಳ ಪಾಠಕ್ಕೆ ಇರುವುದೇ ಇಬ್ಬರೇ ಶಿಕ್ಷಕರು. ಅದರಲ್ಲಿ 7ನೇ ತರಗತಿಯಲ್ಲಿ ಏಂಟು, 6ನೇ ತರಗತಿಯಲ್ಲಿ ಇಬ್ಬರು, 5ನೇ ತರಗತಿಯಲ್ಲಿ ಮೂವರು, 4ನೇ ತರಗತಿಯಲ್ಲಿ ನಾಲ್ಕು ಹಾಗೂ 1 ರಿಂದ 3ನೇ ತರಗತಿವರೆಗೆ ಒಬ್ಬನೇ(2ನೇ ತರಗತಿ) ವಿದ್ಯಾರ್ಥಿ ಇದ್ದು, ಏನಿಲ್ಲವಾದರೂ ಕಲಿಕೆಯಂತೂ ಸಾಗುತ್ತಿದೆ. ಮಧ್ಯಾಹ್ನದ ವೇಳೆಗೆ ಬಿಸಿಯೂಟ(ಒಬ್ಬರು ಅಡುಗೆ ತಯಾರಕ ಸಿಬ್ಬಂದಿ) ತಯಾರಾಗಲಿದ್ದು, ರುಚಿಯಾದ ಊಟದ ವ್ಯವಸ್ಥೆ, ಸಮವಸ್ತ್ರ ನೀಡಿರುವ ಸರ್ಕಾರ ಶಾಲೆಗಳ ಅಭಿವೃದ್ಧಿ ವಿಚಾರದಲ್ಲಿ ಕಣ್ಮುಚ್ಚಿರುವುದು ಅತ್ಯಂತ ದುರದೃಷ್ಟಕರವಾಗಿದೆ.

ಇಂಗ್ಲಿಷ್ ವ್ಯಾಮೋಹ: ಪೋಷಕರಿಗೆಲ್ಲಾ ಇಂಗ್ಲಿಷ್ ವ್ಯಾಮೋಹ ಮೀತಿ ಮೀರಿದಂತಿದೆ. ಕೆಲವರು ಬಂದು ಯಾವ ಮೀಡಿಯಂ ಎಂದು ಕೇಳುತ್ತಾರೆ. ಕನ್ನಡ ಎಂದ ಕೂಡಲೇ ನಾಪತ್ತೆಯಾಗುತ್ತಾರೆ. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವ ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮವಾಗಿ ಬದಲಾಗುತ್ತಿವೆ. ಆದರೆ ಕಡಿಮೆ ವಿದ್ಯಾರ್ಥಿಗಳಿರುವ ಶಾಲೆಯಲ್ಲಿ ಕನ್ನಡ ಮೀಡಿಯಂ ಮಾತ್ರ ಎಂದು ಶಾಲೆಯ ಶಿಕ್ಷಕರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಶಾಲೆಯ ಆವರಣದಲ್ಲಿ ಗಿಡಗಂಟಿಗಳು ಬೆಳೆದಿರುವುದು.

ನಮ್ಮ ಶಾಲೆಯಲ್ಲಿ ಕಡಿಮೆ ಮಕ್ಕಳಿದ್ದರೂ ಇರುವ ಎಲ್ಲಾ ಮಕ್ಕಳು ಚುರುಕಿದ್ದಾರೆ. 18 ಮಕ್ಕಳಲ್ಲಿ ಒಂದೆರಡು ವಿದ್ಯಾರ್ಥಿಗಳು ಸರಿಯಾಗಿ ಶಾಲೆಗೆ ಬರಲ್ಲ. ಎಲ್ಲವೂ ಉಚಿತವಾಗಿದ್ದರೂ ಶಾಲೆ ಸುತ್ತಲಿನ ವಾತಾವರಣದಿಂದ ಪೋಷಕರು ತಮ್ಮ ಮಕ್ಕಳನ್ನು ಸೇರಿಸಲು ಹಿಂಜರಿಯುತ್ತಿದ್ದಾರೆ. ನಾವು ಕೂಡ ಸರ್ಕಾರಿ ಶಾಲೆಯಲ್ಲಿ ಓದಿ ಶಿಕ್ಷಕರಾಗಿದ್ದೇವೆ. ಸರ್ಕಾರಿ ಶಾಲೆಯ ಮಕ್ಕಳಲ್ಲಿರುವ ಧೈರ್ಯ ಖಾಸಗಿ ಶಾಲೆ ಮಕ್ಕಳಲ್ಲಿರುವುದಿಲ್ಲ ಎಂಬ ಮಾತು ನಮ್ಮ ಶಾಲೆ ಮಕ್ಕಳನ್ನು ನೋಡಿದರೆ ಸತ್ಯವೇನೋ ಅನ್ನಿಸುತ್ತದೆ. ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯನವರು ಈ ಶಾಲೆಗೆ ಬಂದು ಸ್ನೇಹಿತರೊಂದಿಗೆ ಕಲಿಯುತ್ತಿದ್ದರು ಎಂದು ಈ ಹಿಂದಿನ ಶಿಕ್ಷಕರು ಹೇಳುತ್ತಿದ್ದರು. ಅಂತಹ ಮಹಾತ್ಮರು ಕಾಲ ಕಳೆದ ಶಾಲೆ ಉಳಿಯಬೇಕು ಎಂದರು.

ದುಡ್ಡು ಕೊಡಬೇಕು!: ಶಾಲೆಯ ಸುತ್ತಲು ಇರುವ ಗಿಡ–ಗಂಟಿಗಳನ್ನು ಮೂರು ತಿಂಗಳಿಗೊಮ್ಮೆ ನಾವುಗಳೇ ಸ್ವಚ್ಛಗೊಳಿಸುತ್ತೇವೆ. ತಿಂಗಳಿಗೊಮ್ಮೆ ಸ್ವಚ್ಛಗೊಳಿಸುವುದು ಒಳ್ಳೆಯದು. ಇದಕ್ಕೆ ಪಾಲಿಕೆ ಸಿಬ್ಬಂದಿ ಸಹಕಾರ ನೀಡಬೇಕು. ಕೆಲವು ಪಾಲಿಕೆ ಸಿಬ್ಬಂದಿಗೆ ಗಿಡ–ಗಂಟಿ ತೆರವುಗೊಳಿಸುವಂತೆ ಮನವಿ ಮಾಡಿದ್ದೆ. ವಿಪರ್ಯಾಸವೆಂದರೆ ಅವರು ನಮ್ಮ ಬಳಿ ಹಣ ಕೇಳುತ್ತಾರೆ. ವ್ಯವಸ್ಥೆಯೇ ಹೀನಾಯ ಸ್ಥಿತಿ ತಲುಪಿದ್ದರೆ ಏನೂ ಬದಲಾವಣೆ ಮಾಡಲು ಸಾಧ್ಯ ಎಂದು ತಮ್ಮ ಅಸಹಾಯಕ ಸ್ಥಿತಿಯನ್ನು ಬಿಚ್ಚಿಟ್ಟರು.

ಗಣನೀಯವಾಗಿ ಕಡಿಮೆಯಾಯ್ತು: ಕಳೆದ 8–10 ವರ್ಷದ ಹಿಂದೆ 50–60 ವಿದ್ಯಾರ್ಥಿಗಳಿದ್ದರು. ವರ್ಷದಿಂದ ವರ್ಷಕ್ಕೆ ಗಣನೀಯವಾಗಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿ ಸದ್ಯಕ್ಕೆ 18 ಮಕ್ಕಳಿದ್ದಾರೆ. ಅಕ್ಕ–ಪಕ್ಕ ಖಾಸಗಿ ಶಾಲೆಗಳು ಹೆಚ್ಚಾದರೂ ಸರ್ಕಾರಿ ಶಾಲೆಯೇ ಅಚ್ಚುಮೆಚ್ಚು ಎಂಬುದನ್ನು ಪೋಷಕರು ಮರೆತಿದ್ದಾರೆ. ನಮ್ಮ ಶಾಲೆ ಮಕ್ಕಳು ಚೆನ್ನಾಗಿ ಓದಿ, ಸಮಾಜದಲ್ಲಿ ಉನ್ನತ ಸ್ಥಾನಕ್ಕೇರಬೇಕೆಂಬುದೇ ನನ್ನ ಆಶಯ ಎಂದು ಶಾಲೆಯ ಮುಖ್ಯ ಶಿಕ್ಷಕ ನಾಸಿರ್ ಸುಯೇಲ್ ತಿಳಿಸಿದರು.

ಶತಮಾನದ ಹೊಸ್ತಿಲಿನಲ್ಲಿರುವ ಶಾಲೆಯ ದುರಸ್ಥಿಗೆ ಇಲಾಖೆಯ ಮೇಲಾಧಿಕಾರಿಗಳಿಗೆ ಮನವಿ ಮಾಡಲಾಗಿದೆ. ಹೊಸ ಕಟ್ಟಡ ನಿರ್ಮಾಣ ಮಾಡುವುದಾಗಿ ತಿಳಿಸಿದ್ದಾರೆ. ಆದರೆ, ಹೊಸ ಕಟ್ಟಡದ ನಿರ್ಮಾಣ ಕಾರ್ಯವೂ ಆರಂಭವಾಗಿಲ್ಲ. ಪಕ್ಕದಲ್ಲೇ ದೇವಸ್ಥಾನ ಇದೆ. ಶಾಲೆಯ ವಾತಾವರಣ ಶಾಂತವಾಗಿದ್ದು, ಮಕ್ಕಳ ಕಲಿಕೆಗೆ ಅನುಕೂಲವಾಗಿದೆ. ಆದರೆ ಶಾಲೆಯನ್ನು ಉಳಿಸುವ ಕಾರ್ಯ ತುರ್ತಾಗಿ ಆಗಬೇಕಿದೆ ಎಂದರು.

ಶ್ರೀರಾಮನ ಹಾಡಿನ ಮಧ್ಯೆ ಹೊರ ನಡೆದ ಸಚಿವ ವೆಂಕಟೇಶ್; ತೀವ್ರ ಚರ್ಚೆಗೆ ಗ್ರಾಸ

ಚಾಮರಾಜನಗರ, ಜ.29– ಅಯೋಧ್ಯೆ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಿಂದ ಹಿಡಿದು ಇತ್ತೀಚೆಗೆ ಶ್ರೀರಾಮನ ವಿಚಾರವಾಗಿ ಕಾಂಗ್ರೆಸ್ ಮುಖಂಡರು ಪದೇ ಪದೆ ವಿವಾದಕ್ಕೀಡಾಗುತ್ತಿದ್ದಾರೆ.



ಕೆ. ವೆಂಕಟೇಶ್

ಚಾಮರಾಜನಗರದಲ್ಲಿ ಭಾನುವಾರ ಸಂಜೆ ಜಿಲ್ಲಾಡಳಿತದಿಂದ ಆಯೋಜಿಸಲಾಗಿದ್ದ ಸಾಂಸ್ಕೃತಿಕ ಕಾರ್ಯಕ್ರಮದ ಸಂಗೀತ ರಸಸಂಜೆಯಲ್ಲಿ ಶ್ರೀರಾಮನ ಹಾಡು ಹಾಡುವ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರು ಕಾರ್ಯಕ್ರಮ ದಿಂದ ಹೊರನಡೆದದ್ದು ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿದ ಸಚಿವರು ರಸಸಂಜೆ ಕಾರ್ಯಕ್ರಮಕ್ಕೂ ಮುನ್ನ ನಡೆದ ಎಲ್ಲಾ ಕಾರ್ಯಕ್ರಮಗಳನ್ನೂ ಪ್ರೇಕ್ಷಕರ ಮೊದಲ ಸಾಲಿನಲ್ಲಿ ಕುಳಿತು ವೀಕ್ಷಿಸಿ, ಕಲಾವಿದರನ್ನು ಪ್ರೋತ್ಸಾಹಿಸಿದರು. ಅರ್ಜುನ್ ಜನ್ಯ ಅವರ ಸಂಗೀತ ರಸಸಂಜೆ ಆರಂಭವಾದಾಗಲೂ ಸಚಿವರು ಆಸೀನರಾಗೇ ಇದ್ದರು. ಅರ್ಜುನ್ ಜನ್ಯ ತನ್ನ ಎರಡನೇ ಹಾಡಾಗಿ ಚಾಲೆಂಜಿಂಗ್ ಸ್ಟಾರ್ ದರ್ಶನ್ ಅಭಿನಯದ 'ರಾಬರ್ಟ್'ನಲ್ಲಿ ತಾವೇ ಹಾಡಿದ್ದ 'ರಾಮನಾಮ ಹಾಡಿರೋ ರಾಮ ಬರುವನು....' ಹಾಡನ್ನು ಹಾಡಲಾರಂಭಿಸಿದರು. ಈ ಹಾಡಿನಲ್ಲಿ 'ಜೈ ಶ್ರೀರಾಮ್' ಎಂಬ ಪದವನ್ನು ಏರುಧನಿಯಲ್ಲಿ ಹಾಡುತ್ತಿರುವ ವೇಳೆ ಸಚಿವ ವೆಂಕಟೇಶ್ ಎದ್ದು ಹೊರ ನಡೆದರು. ರಾಮನ ಹೆಸರು ಕೇಳುತ್ತಿದ್ದಂತೆಯೇ ವೆಂಕಟೇಶ್ ಹೊರನಡೆದದ್ದು, ಅವರು ರಾಮನ ಕುರಿತ ಹಾಡನ್ನು ವಿರೋಧಿಸಿ ಹೊರ ನಡೆದಿದ್ದಾರೆ. ಸಚಿವರು ಹಿಂದೂ ವಿರೋಧಿ ನಡೆ ಅನುಸರಿಸಿದ್ದಾರೆ ಎಂಬ ಆರೋಪಗಳು ವ್ಯಾಪಕವಾಗಿ ಕೇಳಿಬರುತ್ತಿವೆ. ಈ ಸಂಬಂಧ ಸಾಮಾಜಿಕ ಜಾಲತಾಣದಲ್ಲೂ ಕೂಡ ಟೀಕೆಗಳು ಹರಿದಾಡುತ್ತಿವೆ.

ಆದರೆ, ಸಾಂಸ್ಕೃತಿಕ ಕಾರ್ಯಕ್ರಮ ಸಂಜೆ 7 ಗಂಟೆಗೆ ಆರಂಭವಾಯಿತು. ಕೆಲ ನಿಮಿಷಗಳಲ್ಲಿ ಸಚಿವರು ಕಾರ್ಯನಿಮಿತ್ತ ಹೊರಡುವುದಾಗಿ ತಿಳಿಸಿದ್ದರು. ಆದರೆ ಅರ್ಜುನ್‌ಜನ್ಯ ಇನ್ನೇನು ಬಂದು ಬಿಡುತ್ತಾರೆ. ಅವರ ಸಂಗೀತ ರಸಸಂಜೆ ಆರಂಭವಾದ ನಂತರ ಹೋಗಿ ಎಂದು ಜಿಲ್ಲಾಧಿಕಾರಿ ಸೇರಿದಂತೆ ಕೆಲ ಮುಖಂಡರು ಮನವಿ ಮಾಡಿದ್ದ ಹಿನ್ನೆಲೆಯಲ್ಲಿ ಸಚಿವರು ಅಲ್ಲೇ ಕುಳಿತಿದ್ದರು. ಅರ್ಜುನ್ ಜನ್ಯ ರಾತ್ರಿ 8.15ಕ್ಕೆ ವೇದಿಕೆಗೆ ಆಗಮಿಸಿದರು. ಅದಕ್ಕೂ ಮುನ್ನವೇ 2–3 ಬಾರಿ ಸಚಿವರು ಹೊರ ನಡೆಯಲು ಪ್ರಯತ್ನಿಸಿ, ಅಧಿಕಾರಿಗಳ ಒತ್ತಡದಿಂದ ಕುಳಿತಿದ್ದರು. ಅರ್ಜುನ್ ಜನ್ಯ ಒಂದು ಹಾಡು ಹಾಡಿದ ನಂತರ ಸಚಿವರು ಹೊರಟರು. ಆ ಸಂದರ್ಭದಲ್ಲಿ ಅರ್ಜುನ್ ಜನ್ಯ ಅವರು ಶ್ರೀರಾಮನ ಕುರಿತು ಹಾಡಿರುವುದು ಕಾಕತಾಳೀಯವೇ ಹೊರತು ಈ ಹಾಡನ್ನು ಕೇಳಿ ಸಚಿವರು ಹೊರನಡೆದರೂ ಎಂಬುದು ಸರಿಯಲ್ಲ ಎಂದು ಅವರ ಬೆಂಬಲಿಗರು ಸ್ಪಷ್ಟನೆ ನೀಡಿದ್ದಾರೆ.

ಮೈಸೂರಲ್ಲಿ ಉದ್ಯಾನವನಗಳೇ ಕ್ರೀಡಾಂಗಣಗಳಾಗುತ್ತಿವೆ

ಯುವ ಸಮೂಹ ಸದೃಢಗೊಳಿಸಲು ಕ್ರೀಡಾಂಗಣ ವ್ಯವಸ್ಥೆ ಮಾಡಬೇಕಲ್ಲವೆ?



ಮೈಸೂರು, ಜ.29 (ಎಸ್‌ಪಿಎನ್)– ಮೈಸೂರಿನ ವಿವಿಧ ಬಡಾವಣೆಗಳಲ್ಲಿ ಅಭಿವೃದ್ಧಿಗೊಂಡ ಉದ್ಯಾನವನಗಳು ಇದೀಗ ಮಕ್ಕಳ ಆಟಕ್ಕೆ ಜಾಗವಿಲ್ಲದ ಕಾರಣ ಕ್ರೀಡಾಂಗಣವಾಗಿ ಪರಿವರ್ತನೆಯಾಗುತ್ತಿವೆ.

ಇತ್ತ ಉದ್ಯಾನವನವೂ ಅಲ್ಲ, ಅತ್ತ ಕ್ರೀಡಾಂಗಣವೂ ಅಲ್ಲ ಎನ್ನುವ ಪರಿಸ್ಥಿತಿ ಬಹುತೇಕ ಉದ್ಯಾನವನಗಳಲ್ಲಿ ನಿರ್ಮಾಣವಾಗುತ್ತಿದೆ ಎಂಬ ದೂರು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿದೆ.

ಮೈಸೂರಿನಲ್ಲಿ ಬನ್ನಿಮಂಟಪದ ಪಂಜಿನ ಕವಾಯಿತು, ಜೆ.ಪಿ.ನಗರ ಪುಟ್ಟರಾಜ ಗವಾಯಿ ಹಾಗೂ ಚಾಮುಂಡಿ ವಿಹಾರ, ಕೆ.ಜಿ.ಕೊಪ್ಪಲು ಹಾಗೂ ವಿಜಯನಗರ 2ನೇ ಹಂತದಲ್ಲಿರುವ ಕ್ರೀಡಾಂಗಣಗಳನ್ನು ಬಿಟ್ಟರೆ ಮೈಸೂರಿನ ಬೇರೆ ಬೇರೆ ಬಡಾವಣೆಗಳಲ್ಲಿ ಕ್ರೀಡಾಂಗಣಗಳನ್ನು ಅಭಿವೃದ್ಧಿಪಡಿಸಿಲ್ಲ. ಹಾಗಾಗಿ ಮೈಸೂರು ಹೊರವಲಯದಲ್ಲಿರುವ ಹೊಸ ಬಡಾವಣೆಗಳಲ್ಲಿ ಉದ್ಯಾನವನಗಳಿಗೆ ಜಾಗ ಮೀಸಲಿಟ್ಟಂತೆ, ಕ್ರೀಡಾಂಗಣಕ್ಕೂ ಜಾಗ ಮೀಸಲಿಡಲು ಜಿಲ್ಲಾಡಳಿತ ಕ್ರಮವಹಿಸಬೇಕು. ಹಾಲಿ ಅಭಿವೃದ್ಧಿಗೊಂಡಿರುವ ಮುಡಾ ನಿರ್ಮಿತ ಬಡಾವಣೆಗಳಲ್ಲಿನ ಸಿಎ ನಿವೇಶನಗಳನ್ನೇ ಕ್ರೀಡಾಂಗಣವಾಗಿ ಪರಿವರ್ತಿಸುವಂತೆ ಹಿರಿಯ ನಾಗರಿಕರ ವೇದಿಕೆಯ ಮಂಚೇಗೌಡ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮೈಸೂರಿನವರೇ ಆಗಿರುವುದರಿಂದ ಮುಡಾ, ಒಂದು ಅಥವಾ ಎಕರೆ ಖಾಲಿ ಜಾಗಗಳನ್ನು ಮಿನಿ ಕ್ರೀಡಾಂಗಣಗಳಾಗಿ ಅಭಿವೃದ್ಧಿ ಪಡಿಸಬೇಕು. ಮೈಸೂರಿನಲ್ಲಿ ಕ್ರೀಡಾಂಗಣಗಳಿಲ್ಲದ ಕಾರಣ 5ರಿಂದ 18 ವರ್ಷದೊಳಗಿನ ಮಕ್ಕಳಿಗೆ ಆಟ ಆಡಲು ಸಾಧ್ಯವಾಗುತ್ತಿಲ್ಲ. ಇತ್ತ ಶಾಲೆಗಳಲ್ಲೂ ಮೈದಾನವಿಲ್ಲದೆ, ಕ್ರೀಡೆಗೆ ಅವಕಾಶ ದೊರೆಯುತ್ತಿಲ್ಲ. ಅತ್ತ ನಗರದ ವಿವಿಧ ಬಡಾವಣೆಗಳಲ್ಲೂ ಕ್ರೀಡಾಂಗಣಗಳಿಲ್ಲದೇ, ಮೈಸೂರಿನ ಯುವ ಜನತೆ ಕ್ರೀಡೆಗಳಿಂದ ವಿಮುಖರಾಗುತ್ತಿರುವುದು ಬೇಸರದ ಸಂಗತಿ.

ಅಲ್ಲದೆ ಸಣ್ಣ ಮಕ್ಕಳಿಗೆ ತಮ್ಮ ತಮ್ಮ ಮನೆ ಸಮೀಪ ಆಟ ಆಡಲು ಮೈದಾನಗಳಿಲ್ಲದೆ, ಉದ್ಯಾನವನಗಳನ್ನೇ ಆಟದ ಮೈದಾನವಾಗಿ ಪರಿವರ್ತಿಸಿದ್ದಾರೆ. ಇದನ್ನು ತಪ್ಪಿಸಲು ಹಾಗೂ ಪ್ರತಿಭಾವಂತ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು ಪ್ರಸ್ತುತ ಕ್ರೀಡಾಂಗಣಗಳ ಅಭಿವೃದ್ಧಿ ತ್ವರಿತವಾಗಿ ಆಗಬೇಕಿದೆ ಎನ್ನುತ್ತಾರೆ ಕ್ರೀಡಾಪ್ರೇಮಿ ಮಂಚೇಗೌಡರು.

> ಮೈಸೂರು ನಿವೇದಿತಾನಗರ ಉದ್ಯಾನವನ ಪಕ್ಕದಲ್ಲಿರುವ ಸರ್ವೆ ನಂ.227ರ ಮೂರು ಎಕರೆ ಖಾಲಿ ಜಾಗದಲ್ಲಿ ಮಿನಿ ಕ್ರೀಡಾಂಗಣ ನಿರ್ಮಿಸಬೇಕು ಎಂಬುದು ಸಿಎಫ್‌ಟಿಆರ್‌ಐ, ಶಾರದಾದೇವಿ ನಗರ, ನಿವೇದಿತಾ ನಗರ, ಆನಂದನಗರ, ರಾಜರಾಜೇಶ್ವರಿ ನಗರ, ದಟ್ಟಗಳ್ಳಿ ಸೇರಿದಂತೆ ಇತರೆ ಬಡಾವಣೆ ಜನರ ಆಗ್ರಹವಾಗಿದೆ. ರಾಮಕೃಷ್ಣ ಪರಮ ಹಂಸ ವೃತ್ತದಲ್ಲೂ ಮುಡಾ ಜಾಗವಿದ್ದು, ಈ ಜಾಗದಲ್ಲೂ ಕ್ರೀಡಾಂಗಣ ನಿರ್ಮಿಸಬೇಕು.
>
> – **ಬಸವರಾಜ್,** ಹಿರಿಯ ಕ್ರೀಡಾಪಟು.

ಕಾವೇರಿ ಜಲವಿವಾದ: ವಿಚಾರಣೆಯಿಂದ ಹಿಂದೆ ಸರಿದ ನ್ಯಾಯಮೂರ್ತಿ ಅರವಿಂದಕುಮಾರ್

ನವದೆಹಲಿ, ಜ. 29– ಕಾವೇರಿ ನದಿ ನೀರು ಹಂಚಿಕೆ ವಿವಾದದ ವಿಚಾರಣೆಯಿಂದ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಅರವಿಂದಕುಮಾರ್ ಸೋಮವಾರ ಹಿಂದೆ ಸರಿದಿದ್ದಾರೆ. ಅವರು ಕರ್ನಾಟಕ ಮೂಲದವರು. ಪ್ರಕರಣದ ವಿಚಾರಣೆ ಸೋಮವಾರ ನಿಗದಿಯಾಗಿತ್ತು. ಅವರು ಪ್ರಕರಣದ ವಿಚಾರಣೆಯಿಂದ ಹಿಂದೆ ಸರಿದಿರುವುದರಿಂದ ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರು ಪ್ರಕರಣವನ್ನು ಮುಖ್ಯ ನ್ಯಾಯಮೂರ್ತಿಗಳಿಗೆ ವರ್ಗಾಯಿಸಿದ್ದಾರೆ. ಪ್ರಕರಣ ಹೊಸ ಪೀಠದ ಎದುರು ವಿಚಾರಣೆಗೆ ಬರಬೇಕಿದೆ.

ಇಂದು ಸ್ಪರ್ಶ್ ಕುಷ್ಠರೋಗ ಅರಿವು ಜಾಗೃತಿ ಜಾಥಾ

ಮೈಸೂರು,ಜ.29– ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮದಡಿಯಲ್ಲಿ ಜ.30 ರಂದು ಬೆಳಗ್ಗೆ 8ಕ್ಕೆ 'ಸ್ಪರ್ಶ್ ಕುಷ್ಠರೋಗ ಅರಿವು ಆಂದೋಲನ–2024'ರ ಪ್ರಯುಕ್ತ ಸಮುದಾಯದಲ್ಲಿ ಅರಿವು ಮೂಡಿಸಲು ಜಾಗೃತಿ ಜಾಥಾ ಏರ್ಪಡಿಸಲಾಗಿದೆ.

ಜಾಥಾ ಹೊರಡುವ ಮಾರ್ಗ: ಮೈಸೂರಿನ ಅರಮನೆ ಆವರಣದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಹೊರಟು ಆಲ್ಬರ್ಟ್ ವಿಕ್ಟರ್ ರಸ್ತೆ ಮಾರ್ಗವಾಗಿ, ಹಾರ್ಡಿಂಗ್ ವೃತ್ತದಿಂದ ಸಿದ್ದಾರ್ಥ ಹೋಟೆಲ್ ಮಾರ್ಗವಾಗಿ ಹೊರಟು ಕ್ರಿಸ್ಟಲ್ ಪಾರ್ಕ್ ಥಿಯೋಬಾಲ್ಡ್ ರಸ್ತೆ ಮಾರ್ಗವಾಗಿ ಎಸ್.ಪಿ. ಕಚೇರಿ ವೃತ್ತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಚೇರಿಯಲ್ಲಿ ಕೊನೆಗೊಳ್ಳುತ್ತದೆ ಎಂದು ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ 'ಮಾಂಗಲ್ಯ ಭಾಗ್ಯ ಸಾಮೂಹಿಕ ಸರಳ ವಿವಾಹ'

ಮೈಸೂರು, ಜ.29– ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಇಲಾಖೆ, ಜಿಲ್ಲಾಡಳಿತದ ವತಿಯಿಂದ "ಮಾಂಗಲ್ಯ ಭಾಗ್ಯ ಸಾಮೂಹಿಕ ಸರಳ ವಿವಾಹ" ಕಾರ್ಯಕ್ರಮ ಜ.31 ರಂದು ಬೆಳಗ್ಗೆ 11:20 ರಿಂದ 12:20 ರವರೆಗೆ ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದಲ್ಲಿ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಮಾರಂಭ ಉದ್ಘಾಟನೆ ಮಾಡಲಿದ್ದಾರೆ.

ನಂಜನಗೂಡು ವಿಧಾನಸಭಾ ಕ್ಷೇತ್ರದ ಸದಸ್ಯ ದರ್ಶನ್ ಧ್ರುವನಾರಾಯಣ್ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸುವರು. ಪಶುಸಂಗೋಪನೆ ಮತ್ತು ರೇಷ್ಮೆ ಇಲಾಖೆಯ ಸಚಿವ ಕೆ.ವೆಂಕಟೇಶ್ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರು ಉಪಸ್ಥಿತರಿರುವರು.

ಮುಖ್ಯ ಅತಿಥಿಗಳಾಗಿ ಮೈಸೂರು–ಕೊಡಗು ಕ್ಷೇತ್ರದ ಲೋಕಸಭಾ ಸದಸ್ಯ ಪ್ರತಾಪ್ ಸಿಂಹ, ಚಾಮರಾಜನಗರ ಕ್ಷೇತ್ರದ ಲೋಕಸಭಾ ಸದಸ್ಯ ವಿ.ಶ್ರೀನಿವಾಸ್ ಪ್ರಸಾದ್, ಮಂಡ್ಯ ಕ್ಷೇತ್ರದ ಲೋಕಸಭಾ ಸದಸ್ಯ ಸುಮಲತಾ ಅಂಬರೀಶ್ ಭಾಗವಹಿಸುವರು.

ಸಮಾರಂಭದ ಅತಿಥಿಗಳಾಗಿ ವಿಧಾನ ಸಭೆಯ ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಅನಿಲ್ ಕುಮಾರ್.ಸಿ, ರವಿಶಂಕರ್.ಡಿ, ಜಿ.ಡಿ.ಹರೀಶ್‌ಗೌಡ, ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ ಹಾಗೂ ವಿಧಾನ ಪರಿಷತ್ತಿನ ಶಾಸಕರಾದ ಮರಿತಿಬ್ಬೇಗೌಡ, ಎಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ ಆಗಮಿಸುವರು.

ನಾಳೆ ಮೈಸೂರು ವಿವಿ ಶಿಕ್ಷಣ ಮಂಡಳಿ ಸಭೆ

ಮೈಸೂರು, ಜ.29– ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣ ಮಂಡಳಿಯ 2ನೇ ಸಾಮಾನ್ಯ ಸಭೆಯನ್ನು ಜ.31ರಂದು ಬೆಳಗ್ಗೆ 11.30ಕ್ಕೆ ಕ್ರಾಫರ್ಡ್ ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ ಎಂದು ವಿವಿಯ ಉಪ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಗಸ್ತ್ಯ ಕೋ ಅಪರೇಟಿವ್ ಸೊಸೈಟಿ ಚುನಾವಣೆ ಸಿ.ವಿ ಪಾರ್ಥಸಾರಥಿ ತಂಡ ಜಯಭೇರಿ

ಮೈಸೂರು, ಜ.29– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಅಗಸ್ತ್ಯ ಕ್ರೆಡಿಟ್ ಕೋ ಅಪರೇಟಿವ್ ಸೊಸೈಟಿ ಚುನಾವಣೆಯಲ್ಲಿ ಸಿ.ವಿ ಪಾರ್ಥಸಾರಥಿ ನೇತೃತ್ವದ ಕಲ್ಕೆರೆ ನಾಗರಾಜ್ ಅವರ ತಂಡ ಜಯಭೇರಿ ಭಾರಿಸಿದೆ.



ನಾಗರಾಜ್

ಜಯನಗರದಲ್ಲಿರುವ ವಿವೇಕ ಬಾಲೋದ್ಯಾನ ಶಾಲೆಯಲ್ಲಿ ಭಾನುವಾರ ನಡೆದ ಚುನಾವಣೆಯಲ್ಲಿ ಸಿ.ವಿ ಪಾರ್ಥಸಾರಥಿ, ಎಂ.ಡಿ ಗೋಪಿನಾಥ್, ಹೆಚ್.ಎನ್ ಪ್ರಶಾಂತ್ ತಾತಾಚಾರ್, ಕೆ.ನಾಗರಾಜ್, ಎನ್.ಫಣಿರಾಜ್, ಹೆಚ್.ಪಿ. ಚೇತನ್, ಸೌಮ್ಯ ಎಂ.ಎನ್, ಎನ್. ನಾಗಶ್ರೀ, ಕೆ.ಮಹಿಮಾ, ಎಂ.ಪಿ. ಶಾಶ್ವತಿ ನಾಯಕ, ಶಿವರುದ್ರಪ್ಪ, ರಾಜಮ್ಮ ಅವರು ಜಯಗಳಿಸಿದ್ದಾರೆ.

ಕಾವೇರಿ ಹೋರಾಟದಲ್ಲಿ ಶಾಸಕ ಶ್ರೀವತ್ಸ, ಬಿಜೆಪಿ ಮುಖಂಡ ಕವೀಶ್‌ಗೌಡ ಭಾಗಿ



ಕಾವೇರಿ ಕ್ರಿಯಾ ಸಮಿತಿ ಹೋರಾಟದಲ್ಲಿ ಸೋಮವಾರ ಶಾಸಕ ಟಿ.ಎಸ್.ಶ್ರೀವತ್ಸ ಭಾಗಿಯಾಗಿ, ಮಾತನಾಡಿದರು.

ಮೈಸೂರು, ಜ.29(ಎಸ್‌ಬಿಡಿ)– ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ವಿರೋಧಿಸಿ, ಕಾವೇರಿ ಕ್ರಿಯಾ ಸಮಿತಿ ನಡೆಸುತ್ತಿರುವ ಹೋರಾಟದ 84ನೇ ದಿನವಾದ ಸೋಮವಾರ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಭಾಗಿಯಾಗಿ, ಬೆಂಬಲ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಅವರು, ಐಎನ್‌ಡಿಐಎ(India) ಒಕ್ಕೂಟದ ಹಿತಕ್ಕಾಗಿ ರಾಜ್ಯದ ಕಾಂಗ್ರೆಸ್ ಸರ್ಕಾರ ಕಾವೇರಿ ನೀರನ್ನು ಪದೇ ಪದೆ ತಮಿಳುನಾಡಿಗೆ ಹರಿಸುತ್ತಿರುವುದು ಖಂಡನೀಯ. ಈ ವಿಚಾರವಾಗಿ ಮುಂದಿನ ಅಧಿವೇಶನದಲ್ಲಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಮಾತನಾಡುವುದಾಗಿ ಹೇಳಿದ್ದಾರೆ. ನಾನೂ ಕೂಡ ಸರ್ಕಾರದ ನಡೆಯನ್ನು ಅಧಿವೇಶನದಲ್ಲಿ ಪ್ರಶ್ನಿಸುತ್ತೇನೆಂದು ತಿಳಿಸಿದರು.

ಬಿಜೆಪಿ ಮುಖಂಡ ಕವೀಶ್‌ಗೌಡ ಮಾತನಾಡಿ, ಕಾವೇರಿ ನೀರು ವಿಚಾರದಲ್ಲಿ ರಾಜ್ಯ ಸರ್ಕಾರ ರೈತ ವಿರೋಧಿ ಧೋರಣೆ ಅನುಸರಿಸುತ್ತಿದೆ. ಕಾವೇರಿ ನದಿ ನೀರು ವಿಚಾರವಾಗಿ ರಾಜ್ಯದ ಪರ ಹೋರಾಟಕ್ಕೆ ನಾವು ಬೆಂಬಲ ನೀಡುತ್ತೇವೆ ಎಂದು ಹೇಳಿದರು.

ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷರೂ ಆದ ಬಿಜೆಪಿ ಮುಖಂಡ ಜಯ ಪ್ರಕಾಶ್ (ಜೆಪಿ) ಮಾತನಾಡಿ, ಬ್ರಿಟಿಷರ ಕಾಲದ ಕಾವೇರಿ ನೀರಿನ ಒಪ್ಪಂದವನ್ನು ಸಂಪೂರ್ಣವಾಗಿ ರದ್ದುಪಡಿಸಬೇಕು. ಪದೇ ಪದೆ ಕರ್ನಾಟಕಕ್ಕೆ ಅನ್ಯಾಯವಾಗುವಂತಹ ಆದೇಶ ನೀಡುವ ಕಾವೇರಿ ನ್ಯಾಯಮಂಡಳಿ ಯನ್ನು ರದ್ದುಪಡಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಮುಂದಾಗಬೇಕು ಎಂದು ಮನವಿ ಮಾಡಿದರು.

ಶಿಕ್ಷಕರ ಸ್ಥಾನಪನ್ನ ಬಡ್ತಿಗೆ ಫೆ.3ರಂದು ಕೌನ್ಸಿಲಿಂಗ್

ಮೈಸೂರು, ಜ.29(ಎಸ್‌ಪಿಎನ್)– 2023–24ನೇ ಸಾಲಿನಲ್ಲಿ ರಾಜ್ಯ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಶಿಕ್ಷಕರಿಗೆ, ಮುಖ್ಯಶಿಕ್ಷಕರ(ಎಚ್‌ಎಂ) ವೃಂದಕ್ಕೆ ಹಾಗೂ ಮುಖ್ಯಶಿಕ್ಷಕರ ವೃಂದದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರಿಗೆ ಹಿರಿಯ ಮುಖ್ಯ ಶಿಕ್ಷಕರ(ಎಸ್‌ಎಚ್‌ಎಂ) ವೃಂದಕ್ಕೆ ಸ್ಥಾನಪನ್ನ ಬಡ್ತಿ ನೀಡಲು ಫೆ.3ರಂದು ಆನ್‌ಲೈನ್ ಮೂಲಕ ಕೌನ್ಸಿಲಿಂಗ್ ನಡೆಸಲು ಶಾಲಾ ಶಿಕ್ಷಣ ಇಲಾಖೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದೆ.

ಈ ಹಿಂದೆ ಜ.30ರಂದು ಆಯಾಯ ಜಿಲ್ಲಾ ಹಂತದಲ್ಲಿ ವಲಯ ವರ್ಗಾವಣೆ ಕೌನ್ಸಿಲಿಂಗ್ ನಿಗಧಿಪಡಿಸಲಾಗಿತ್ತು. ಆದರೆ, ಈ ಕೌನ್ಸಿಲಿಂಗ್ ಅನ್ನು ಆನ್‌ಲೈನ್ ಮೂಲಕ ನಿರ್ವಹಿಸಲು ವಿವಿಧ ಜಿಲ್ಲೆಗಳ ಡಿಡಿಪಿಐ (ಆಡಳಿತ) ಅವರ ಕೋರಿಕೆ ಮೇರೆಗೆ ಜ.30 ರಂದು ನಿಗಧಿಯಾಗಿದ್ದ ಕೌನ್ಸಿಲಿಂಗ್ ಫೆ.3ರಂದು ಆನ್‌ಲೈನ್ ಕೌನ್ಸಿಲಿಂಗ್ ನಡೆಸಲು ತೀರ್ಮಾನಿಸಲಾಗಿದೆ.

ಫೆ.3ರಂದು 'ಬಿ' ವಲಯದಿಂದ 'ಎ' ವಲಯಕ್ಕೆ ಮುಖ್ಯಶಿಕ್ಷಕರು ಮತ್ತು ಹಿರಿಯ ಮುಖ್ಯಶಿಕ್ಷಕರರಿಂದ ವರ್ಗಾವಣೆ ಕೌನ್ಸಿಲಿಂಗ್ ಮಧ್ಯಾಹ್ನದವರೆಗೆ ನಡೆಯಲಿದೆ. 'ಸಿ' ವಲಯದಿಂದ 'ಬಿ' ವಲಯಕ್ಕೆ ಮುಖ್ಯಶಿಕ್ಷಕರು ಮತ್ತು ಹಿರಿಯ ಮುಖ್ಯಶಿಕ್ಷಕರಿಂದ ವರ್ಗಾವಣೆ ಕೌನ್ಸಿಲಿಂಗ್ ಮಧ್ಯಾಹ್ನದಿಂದ ಸಂಜೆಯವರಿಗೆ ನಡೆಯಲಿದೆ ಎಂದು ಬೆಂಗಳೂರು ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರಾದ ಬಿ.ಬಿ.ಕಾವೇರಿ ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಬಿ. ವಿಠ್ಠಲ ನಿಧನ

ಮೈಸೂರು, ಜ.29– ಮೈಸೂರಿನ ಶಾರದಾದೇವಿನಗರ ನಿವಾಸಿ, ಗಣೇಶ ಬೀಡಿ ವರ್ಕ್ಸ್‌ನ ನಿವೃತ್ತ ನೌಕರ ಬಿ. ವಿಠ್ಠಲ (80) ಅವರು ಸೋಮವಾರ ನಿಧನರಾದರು.



ಮಂಗಳೂರು ಮೂಲದವರಾದ ಇವರು ಪತ್ನಿ ಸೀತಾ, ಪುತ್ರ ಬಿಜೆಪಿ ಮುಖಂಡ ರಾಜಕುಮಾರ್, ಪುತ್ರಿಯರಾದ ರಾಜೇಶ್ವರಿ, ಜಯಶ್ರೀ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ವಿಜಯನಗರದಲ್ಲಿರುವ ಶಾಂತಿ ಧಾಮದಲ್ಲಿ ನಾಳೆ (ಮಂಗಳವಾರ) ಮಧ್ಯಾಹ್ನ 2 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ ಮಂಗಳವಾರ 30 ಜನವರಿ 2024

ಕಾಂಗ್ರೆಸ್ ವಿರುದ್ಧ ಬಿಜೆಪಿ ಪ್ರತಿಭಟನೆ

● ರಾಜ್ಯ ಸರ್ಕಾರದಿಂದ ಹಿಂದೂಗಳ ಭಾವನೆಗೆ ಧಕ್ಕೆ ● ಬಿಜೆಪಿ ಕಾರ್ಯಕರ್ತರ ಆರೋಪ



ರಾಜ್ಯ ಸರ್ಕಾರ ಹಿಂದೂಗಳ ಭಾವನೆಗೆ ಧಕ್ಕೆ ಉಂಟು ಮಾಡಿದೆ ಎಂದು ಆರೋಪಿಸಿ ಕೊಡಗು ಜಿಲ್ಲಾ ಬಿಜೆಪಿ ಕಾರ್ಯಕರ್ತರು ಸೋಮವಾರ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಿದರು.

ಮಡಿಕೇರಿ, ಜ.29–ಮಂಡ್ಯ ಜಿಲ್ಲೆಯ ಕೆರಗೋಡು ಗ್ರಾಮದಲ್ಲಿ ಹನುಮ ಧ್ವಜ ತೆರವುಗೊಳಿಸುವ ಮೂಲಕ ರಾಜ್ಯ ಸರ್ಕಾರ ಹಿಂದೂಗಳ ಭಾವನೆಗೆ ಧಕ್ಕೆ ಉಂಟು ಮಾಡಿದೆ ಎಂದು ಆರೋಪಿಸಿ ಕೊಡಗು ಜಿಲ್ಲಾ ಬಿಜೆಪಿ ಕಾರ್ಯಕರ್ತರು ಸೋಮವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಕಾಂಗ್ರೆಸ್ ಸರ್ಕಾರ ಓಲೈಕೆ ರಾಜಕಾರಣ ಮಾಡುತ್ತಿದ್ದು, ಹಿಂದೂ ವಿರೋಧಿ ಧೋರಣೆ ಅನುಸರಿಸುತ್ತಿದೆ ಎಂದು ಆರೋಪಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಗೃಹ ಸಚಿವ ಪರಮೇಶ್ವರ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಹಿಂದೂ ವಿರೋಧಿ ಕಾಂಗ್ರೆಸ್ ಸರ್ಕಾರವನ್ನು ವಜಾಗೊಳಿಸಬೇಕು. ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಬುದ್ಧಿ ಕಲಿಸುತ್ತೇವೆ ಎಂದು ಪ್ರಧಾನಿ ನರೇಂದ್ರ ಮೋದಿ ಪರ ಬಿಜೆಪಿ ಪ್ರಮುಖರು ಮತ್ತು ಕಾರ್ಯಕರ್ತರು ಘೋಷಣೆ ಕೂಗಿದರು.

ಮಾಜಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಮಾತನಾಡಿ, ಕಾಂಗ್ರೆಸ್ ಸರ್ಕಾರದ ಹಿಂದೂ ವಿರೋಧಿ ನೀತಿಯ ಭಾಗವಾಗಿ ಮಂಡ್ಯದ ಕೆರಗೋಡುವಿನಲ್ಲಿ ಹನುಮ ಧ್ವಜವನ್ನು ತೆರವುಗೊಳಿಸಿದೆ. ಜೊತೆಗೆ ಪೊಲೀಸರಿಂದ ಲಾಠಿ ಚಾರ್ಜ್ ನಡೆಸಿದ್ದಲ್ಲದೇ, ಸೆಕ್ಷನ್ 144 ಅಡಿ ನಿಷೇಧಾಜ್ಞೆ ಜಾರಿಗೊಳಿಸಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಏಕವಚನದಲ್ಲಿ ಮಾತನಾಡಿದ್ದಾರೆ. ಅವರು ನಾಲಗೆಯ ನಿಯಂತ್ರಣ ಕಳೆದುಕೊಂಡು ದರ್ಪ ತೋರುತ್ತಿದ್ದಾರೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ವಿಧಾನಪರಿಷತ್ ಮಾಜಿ ಸದಸ್ಯ ಎಂ.ಪಿ.ಸುನಿಲ್ ಸುಬ್ರಮಣಿ, ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ, ಉಪಾಧ್ಯಕ್ಷೆ ಸವಿತಾ ರಾಕೇಶ್, ಸ್ಥಾಯಿ ಸಮಿತಿ ಅಧ್ಯಕ್ಷ ಎಸ್.ಸಿ.ಸತೀಶ್, ಬಿಜೆಪಿ ಜಿಲ್ಲಾ ವಕ್ತಾರ ಮಹೇಶ್ ಜೈನಿ, ಮಾಜಿ ಅಧ್ಯಕ್ಷ ರಾಬಿನ್ ದೇವಯ್ಯ, ನಗರಾಧ್ಯಕ್ಷ ಮನು ಮಂಜುನಾಥ್ ಮತ್ತಿತರರು ಪಾಲ್ಗೊಂಡಿದ್ದರು.

ಈ ಬಾರಿ ಕೊಡಗಿನವರಿಗೆ ಬಿಜೆಪಿ ಟಿಕೆಟ್ ನೀಡಲಿ

ಮಾಜಿ ಶಾಸಕ ಅಪ್ಪಚ್ಚು ರಂಜನ್ ಒತ್ತಾಯ

ಮಡಿಕೇರಿ, ಜ.29– ಈ ಬಾರಿ ಲೋಕಸಭಾ ಚುನಾವಣೆಗೆ ಕೊಡಗಿನವರಿಗೆ ಬಿಜೆಪಿ ಟಿಕೆಟ್ ನೀಡಬೇಕೆಂದು ಮಾಜಿ ಶಾಸಕ ಅಪ್ಪಚ್ಚು ರಂಜನ್ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ 15–20 ವರ್ಷಗಳಿಂದ ಮೈಸೂರಿನವರಿಗೆ ಬಿಜೆಪಿಯಿಂದ ಟಿಕೆಟ್ ನೀಡಲಾಗಿದೆ. ಆದ್ದರಿಂದ ಈ ಬಾರಿ ಕೊಡಗಿನವರಿಗೆ ಟಿಕೆಟ್ ನೀಡುವಂತೆ ಜಿಲ್ಲಾ ಬಿಜೆಪಿ ಒತ್ತಾಯಿಸಿದೆ. ಎಲ್ಲಾ ಕೋರ್ ಕಮಿಟಿಯಲ್ಲೂ ಈ ಬಗ್ಗೆ ಚರ್ಚಿಸಲಾಗಿದೆ ಎಂದು ತಿಳಿಸಿದರು.

ಅಭಿವೃದ್ಧಿಗೆ ಬಿಡಿಗಾಸು ನೀಡಿಲ್ಲ: ಮುಖ್ಯಮಂತ್ರಿ ಸಿದ್ದರಾಮಯ್ಯ ಕೊಡಗಿನಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿದ್ದಾರೆ. ಆದರೆ, ಯಾವುದೇ ಕಾಮಗಾರಿಗಳಿಗೆ ಇನ್ನೂ ಟೆಂಡರ್ ಅಂತಿಮವಾಗಿಲ್ಲ. ರಸ್ತೆಗಳ ಗುಂಡಿ ಮುಚ್ಚುವ ಕಾರ್ಯ ಕೂಡ ಆಗಿಲ್ಲ. ಮುಖ್ಯಮಂತ್ರಿಗಳು ಬರುತ್ತಾರೆ ಅನ್ನುವ ಕಾರಣಕ್ಕೆ ಕೆಲ ರಸ್ತೆಗಳ ಗುಂಡಿಯನ್ನು ಮುಚ್ಚಲಾಗಿದೆ. ಕುಡಿಯುವ ನೀರಿನ ಕಾಮಗಾರಿಗಳಿಗೆ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಅನುಮೋದನೆಯಾಗಿದೆ. ಕೊಡಗು ಜಿಲ್ಲೆಯ ಯಾವುದೇ ಅಭಿವೃದ್ಧಿಗೆ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಕಳೆದ 7 ತಿಂಗಳ ಅವಧಿಯಲ್ಲಿ ಬಿಡಿಗಾಸು ಬಿಡುಗಡೆ ಮಾಡಿಲ್ಲ ಎಂದು ಕಾಂಗ್ರೆಸ್ ಶಾಸಕರೇ ಹೇಳುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.



ಅಪ್ಪಚ್ಚು ರಂಜನ್

3600 ಕೋಟಿ ರೂ. ಅಭಿವೃದ್ಧಿ: ತಮ್ಮ ಅಧಿಕಾರಾವಧಿಯಲ್ಲಿ ಇಂಜಿನಿಯರಿಂಗ್ ಕಾಲೇಜು, ಕೂಡಿಗೆಯ ಸೈನಿಕ ಶಾಲೆ, ವಿಶ್ವವಿದ್ಯಾನಿಲಯ, ಸ್ಪೋರ್ಟ್ಸ್ ಕಾಲೇಜು, ಹಾಕಿ ಟರ್ಫ್ ಗ್ರೌಂಡ್ ಸೇರಿದಂತೆ ಸುಮಾರು 3600 ಕೋಟಿ ರೂ. ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗಿದೆ. ಜಿಲ್ಲೆಯ ಎಲ್ಲಾ ರಸ್ತೆಗಳನ್ನು ಸರ್ವಋತು ರಸ್ತೆಗಳನ್ನಾಗಿ ಮಾಡಲಾಗಿದೆ. 138 ಕೋಟಿ ರೂ. ವೆಚ್ಚದಲ್ಲಿ ಮಡಿಕೇರಿಯ ಜಿಲ್ಲಾಸ್ಪತ್ರೆಯ ನೂತನ ಕಟ್ಟಡ ನಿರ್ಮಿಸಲಾಗಿದ್ದು, ಇದರಲ್ಲಿ 100 ಕೋಟಿ ರೂ. ಬಿಡುಗಡೆಯಾಗಿದೆ ಬಾಕಿ 38 ಕೋಟಿ ರೂ. ಬಿಡುಗಡೆಯಾಗಬೇಕಿದೆ ಎಂದು ಹೇಳಿದರು.

ವಿರಾಜಪೇಟೆ ಕರ್ನಾಟಕ ಸಂಘದಿಂದ ಧ್ವಜಾರೋಹಣ

ವಿರಾಜಪೇಟೆ: ವಿರಾಜಪೇಟೆ ಕರ್ನಾಟಕ ಸಂಘದ ಆವರಣದಲ್ಲಿ ಗಣರಾಜ್ಯೋತ್ಸವ ಅಂಗವಾಗಿ ಸಂಘದ ಅಧ್ಯಕ್ಷ ಮಾಳೇಟಿರ ಎಂ.ಬೆಲ್ಲು ಬೋಪಯ್ಯ ಧ್ವಜಾರೋಹಣ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಗಡಿಭಾಗ ವಿರಾಜಪೇಟೆ ವ್ಯಾಪ್ತಿಯಲ್ಲಿ ಕನ್ನಡ ನಾಡು, ನುಡಿ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕರ್ನಾಟಕ ಸಂಘ ಕನ್ನಡದ ಬಗ್ಗೆ ಹೆಚ್ಚಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದಾಗಿ ತಿಳಿಸಿದರು.



ಸಂಘದ ಉಪಾಧ್ಯಕ್ಷ ಸಿ.ಈ.ಗಿರೀಶ್ ಪೂಣಚ್ಚ, ಕಾರ್ಯದರ್ಶಿ ಎಂ.ಕುಸುಮ ಸೋಮಣ್ಣ, ಕೋಶಾಧಿಕಾರಿ ಕೆಯು.ಗಣೇಶ್ ತಮ್ಮಯ್ಯ, ನಿರ್ದೇಶಕರಾದ ಸಿ.ಪಿ. ಕಾವೇರಪ್ಪ, ಸಿ.ಎಂ.ಸುರೇಶ್ ನಾಣಯ್ಯ, ಎ.ಎಂ.ಜೋಯಪ್ಪ ಎಂ.ರಾಜು ಮಂದಣ್ಣ ಬಿ.ಎಂ.ಸುರೇಶ್, ಬಿ.ಆರ್. ಗಣೇಶ್, ಕೆ.ಎಂ.ಮೊಣ್ಣಪ್ಪ ಎಂ.ಬಿ.ದೇವಯ್ಯ, ಕಚೇರಿ ಕಾರ್ಯದರ್ಶಿ ರಾಧಾ ಇದ್ದರು.

ಕಿವುಡ ಮಕ್ಕಳಿಗೆ ಸೌಲಭ್ಯ ದೊರಕಿಸಲು ಪ್ರಯತ್ನ

ಮೈಸೂರು ಕಿವುಡರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಸ್.ಮೂರ್ತಿ ಭರವಸೆ

ವಿರಾಜಪೇಟೆ, ಜ.29–ಕಿವುಡ ಮಕ್ಕಳಿಗೆ ಉತ್ತಮ ಆರೋಗ್ಯ, ಶಿಕ್ಷಣ, ಕ್ರೀಡೆ, ಉದ್ಯೋಗ ಸೇರಿದಂತೆ ಸರ್ಕಾರದ ಸೌಲಭ್ಯಗಳನ್ನು ದೊರಕಿಸಲು ಪ್ರಯತ್ನಿಸಲಾಗುವುದು ಎಂದು ಮೈಸೂರು ಕಿವುಡರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹಾಗೂ ಲಯನ್ಸ್ ಚೇರ್‌ಮೆನ್ ಎಸ್.ಮೂರ್ತಿ ಹೇಳಿದರು.

ವಿರಾಜಪೇಟೆಯ ಪುರಭವನದಲ್ಲಿ ಕೊಡಗು ಜಿಲ್ಲಾ ಕಿವುಡರ ಸಂಘದ ವತಿಯಿಂದ ಆಯೋಜಿಸಿದ್ದ ಸಮಾರಂಭದಲ್ಲಿ ಮಾತನಾಡಿದ ಅವರು, ಕಿವುಡರಿಗೆ ಸರ್ಕಾರ ಉಚಿತ ಬಸ್ ಪ್ರಯಾಣಕ್ಕೆ ಅವಕಾಶ ಮಾಡಿಕೊಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗಿದೆ. ಕೊರೋನಾದಿಂದ ಕಳೆದ ನಾಲ್ಕು ವರ್ಷಗಳಿಂದ ಕಿವುಡರ ಕಾರ್ಯ ಚಟುವಟಿಕೆಗಳನ್ನು ನಡೆಸಲು ಕೊಡಗು ಜಿಲ್ಲೆಯಲ್ಲಿ ಸಾಧ್ಯವಾಗಿಲ್ಲ. ಕಿವುಡರ ಸೌಲಭ್ಯಗಳಿಗಾಗಿ ಕ್ಷೇಮಾಭಿವೃದ್ಧಿ ಸಂಘ ಮತ್ತು ಲಯನ್ಸ್ ಸಂಸ್ಥೆ ಶ್ರಮಿಸಲಿದೆ. ಮುಂದಿನ ವರ್ಷದಿಂದ ಕೊಡಗು ಜಿಲ್ಲೆಯಲ್ಲಿ ಹೆಚ್ಚು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಾಗಿ ತಿಳಿಸಿದರು.

ಸೌಭಾಗ್ಯ ವಿಕಲಚೇತನರ ಸೇವಾ ಟ್ರಸ್ಟ್‌ನ ಉಪಾಧ್ಯಕ್ಷೆ ಆಯಿಷಾ ಮಾತನಾಡಿ, ವಿಕಲಚೇತನ ಮಕ್ಕಳು ಸಮಾಜದ ಮುಖ್ಯವಾಹಿನಿಗೆ ಬರಲು ಸರ್ಕಾರದ ಯೋಜನೆಗಳು ದೊರಕುವಂತಾಗಬೇಕು. ಇದಕ್ಕೆ ಪೋಷಕರ ಪ್ರೋತ್ಸಾಹ, ಅಧಿಕಾರಿಗಳು ಮತ್ತು ಶಿಕ್ಷಕರ ಸಹಕಾರ ಅಗತ್ಯ. ಮುಖ್ಯವಾಗಿ ವಿಕಲಚೇತನರಿಗೆ ಗುಂಪು ಚಟುವಟಿಕೆಗಳನ್ನು ನಡೆಸಿ, ಅವರ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರದ ಯೋಜನೆಗಳು ದೊರಕಿಸಲು ಎಲ್ಲರ ಪ್ರಯತ್ನ ಅಗತ್ಯ ಎಂದರು.



ವಿರಾಜಪೇಟೆಯ ಪುರಭವನದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಭಾಗವಹಿಸಿದ್ದ ಕೊಡಗು ಜಿಲ್ಲಾ ಕಿವುಡರ ಸಂಘದ ಪದಾಧಿಕಾರಿಗಳು.

ಕಿವುಡರ ಸಂಘದ ಕೊಡಗು ಜಿಲ್ಲಾಧ್ಯಕ್ಷೆ ಗೌರಮ್ಮ ಸೋಮಣ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಇದೇ ವೇಳೆ ಮೈಸೂರು ಕಿವುಡರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಸ್.ಮೂರ್ತಿ ಅವರನ್ನು ಸನ್ಮಾನಿಸಲಾಯಿತು. ಮೈಸೂರು ಲಯನ್ಸ್ ಸಂಸ್ಥೆಯ ಸುಬ್ಬಣ್ಣ, ಜಯಕುಮಾರ್, ಎ.ಗಣೇಶ್ ರಾವ್, ಜೆ.ವಿ.ಮಹೇಶ್ ವರ್ಮ ಹಾಗೂ ಕಿವುಡರ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಇಂದು ಚಿತಾಭಸ್ಮ ಮೆರವಣಿಗೆ

ಮಡಿಕೇರಿ: ಜಿಲ್ಲಾಡಳಿತ ಹಾಗೂ ಸರ್ವೋದಯ ಸಮಿತಿ ವತಿಯಿಂದ ಹುತಾತ್ಮರ ದಿನ ಪ್ರಯುಕ್ತ ಜ.30 ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾಡಳಿತ ಭವನದ ಜಿಲ್ಲಾ ಖಜಾನೆ ಕಚೇರಿಯಿಂದ ಮಹಾತ್ಮ ಗಾಂಧೀಜಿ ಚಿತಾಭಸ್ಮ ಮೆರವಣಿಗೆ ನಡೆಸಲಾಗುವುದು.

ದೈವಾರಾಧಕರ ಕುಟುಂಬ ಸಮ್ಮಿಲನ ಕಾರ್ಯಕ್ರಮಕ್ಕೆ ನಿರ್ಧಾರ

ಮಡಿಕೇರಿ, ಜ.29–ದೈವ ಆರಾಧಕರ ಕುಟುಂಬ ಸಮ್ಮಿಲನ ಕಾರ್ಯಕ್ರಮ ನಡೆಸಲು ಕೊಡಗು ಜಿಲ್ಲಾ ದೈವ ಆರಾಧಕರು ಹಾಗೂ ದೈವ ನರ್ತಕರ ಸಂಘದ ಸಭೆಯಲ್ಲಿ ನಿರ್ಧರಿಸಲಾಯಿತು.

ನಗರದ ಖಾಸಗಿ ಹೋಟೇಲ್ ಸಭಾಂಗಣದಲ್ಲಿ ಸಂಘದ ಅಧ್ಯಕ್ಷ ಸದಾಶಿವ ರೈ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ದೈವಾರಾಧನೆಯ ಕಟ್ಟುಪಾಡುಗಳ ಕುರಿತು ಚರ್ಚಿಸಲಾಯಿತು. ಕೊಡಗು ಜಿಲ್ಲೆಯಲ್ಲಿ ಅನೇಕ ವರ್ಷಗಳಿಂದ ದೈವಾರಾಧನೆಯನ್ನು ಮಾಡಿಕೊಂಡು ಬರುತ್ತಿರುವ 90ಕ್ಕೂ ಹೆಚ್ಚು ದೈವಸ್ಥಾನಗಳಿವೆ. ದೈವಾರಾಧಕರು ಹಾಗೂ ದೈವನರ್ತಕರನ್ನು ಒಂದೇ ವೇದಿಕೆಯಡಿ ಸಂಘಟಿಸಿ ದೈವಾರಾಧನೆ ಪದ್ಧತಿಯನ್ನು ಕ್ರಮಬದ್ಧವಾಗಿ ನಡೆಸಲು ತುಳುನಾಡಿನ ಜನಪದ ವಿದ್ವಾಂಸರಿಂದ ಮಾಹಿತಿ ನೀಡುವ ಪ್ರಯತ್ನ ಮಾಡಲಾಗುವುದು. ಇದಕ್ಕಾಗಿ ಜಿಲ್ಲೆಯ ಎಲ್ಲಾ ದೈವ ಆರಾಧಕರ ಹಾಗೂ ದೈವನರ್ತಕರ ಕುಟುಂಬ ಸಮ್ಮಿಲನ ಕಾರ್ಯಕ್ರಮವನ್ನು ಮಡಿಕೇರಿಯಲ್ಲಿ ಆಯೋಜಿಸಲಾಗುವುದು ಎಂದು ಪ್ರಮುಖರು ತಿಳಿಸಿದರು.



ಮಡಿಕೇರಿಯ ಖಾಸಗಿ ಹೋಟೇಲ್‌ನಲ್ಲಿ ಕೊಡಗು ಜಿಲ್ಲಾ ದೈವ ಆರಾಧಕರು ಹಾಗೂ ದೈವ ನರ್ತಕರ ಸಂಘದ ಅಧ್ಯಕ್ಷ ಸದಾಶಿವ ರೈ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಜಿಲ್ಲೆಯ ಎಲ್ಲಾ ದೈವ ಆರಾಧಕರು, ದೈವನರ್ತಕರು ಹಾಗೂ ಅವರ ಕುಟುಂಬದ ಎಲ್ಲಾ ಸದಸ್ಯರನ್ನು ಆಹ್ವಾನಿಸುವುದು, ದೈವ ಆರಾಧನಾ ಕ್ಷೇತ್ರದ ವಿದ್ವಾಂಸರಿಂದ ಮಾಹಿತಿ ನೀಡುವುದು. ಕೊಡಗು ಜಿಲ್ಲೆಯ ದೈವಸ್ಥಾನಗಳ ಅಭಿವೃದ್ಧಿಗಾಗಿ ಸರ್ಕಾರದ ಗಮನ ಸೆಳೆಯುವುದು. ಜಿಲ್ಲೆಯ ವಿವಿಧೆಡೆಯ ದೈವಸ್ಥಾನಗಳು, ಗ್ರಾಮ, ದೈವ ಆರಾಧಕರ ಹೆಸರನ್ನು ನೋಂದಾಯಿಸುವುದು ಮತ್ತು ದಾಖಲೀಕರಣ ಮಾಡುವುದು. ದೈವ ಆರಾಧಕರ ಹಾಗೂ ನರ್ತಕರ ಸದಸ್ಯತ್ವ ಸೇರಿದಂತೆ ಕುಟುಂಬ ಸಮ್ಮಿಲನ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಸಂಘದ ಸ್ಥಾಪಕ ಅಧ್ಯಕ್ಷ ಪಿ.ಎಂ.ರವಿ, ಸಂಘಟನಾ ಕಾರ್ಯದರ್ಶಿ ರಮೇಶ್, ಖಜಾಂಚಿ ಬಿ.ಎ.ಜನಾರ್ಧನ ಸಲಹೆ ನೀಡಿದರು. ಸದಸ್ಯರಾದ ಅಣ್ಣು ಪೂಜಾರಿ, ಪವನ್ ಮೊಗೇರ, ಸಂತೋಷ್ ಕುಲಾಲ್, ಮಂಜುನಾಥ್ ಎಂ.ಎಚ್, ಬಿ.ಎ.ಸುಜಿತ್, ಎಂ.ಜಿ. ಚೇತನ್, ಮಂಜುನಾಥ್ ಸಭೆಯಲ್ಲಿ ಉಪಸ್ಥಿತರಿದ್ದರು.

ಕೆರಗೋಡುವಿನಲ್ಲಿ ಹನುಮಧ್ವಜ ತೆರವು ಖಂಡಿಸಿ ಜಿಲ್ಲಾಡಳಿತ ಭವನ ಮುತ್ತಿಗೆ ಯತ್ನ

ಬಿಜೆಪಿ ಮುಖಂಡರ ಬಂಧನ, ಬಿಡುಗಡೆ



ಚಾಮರಾಜನಗರದ ಶ್ರೀಚಾಮರಾಜೇಶ್ವರ ಉದ್ಯಾನದ ಮುಂಭಾಗ ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಹಾಗೂ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್‌ಕುಮಾರ್ ನೇತೃತ್ವದಲ್ಲಿ ಕಾರ್ಯಕರ್ತರು ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಜ.29–ಮಂಡ್ಯ ಜಿಲ್ಲೆಯ ಕೆರಗೋಡು ಗ್ರಾಮದಲ್ಲಿ ಹನುಮಧ್ವಜ ತೆರವು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಮಹಿಳಾ ರಾಷ್ಟ್ರಪತಿಗಳನ್ನು ಏಕವಚನದಲ್ಲಿ ಸಂಭೋದಿಸಿರುವುದನ್ನು ಖಂಡಿಸಿ ನಗರದ ಜಿಲ್ಲಾಡಳಿತ ಭವನಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ 100ಕ್ಕೂ ಹೆಚ್ಚು ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ, ನಂತರ ಬಿಡುಗಡೆಗೊಳಿಸಿದರು.

ನಗರದ ಶ್ರೀ ಚಾಮರಾಜೇಶ್ವರ ಉದ್ಯಾನದ ಮುಂಭಾಗದಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಹಾಗೂ ಜಿಲ್ಲಾಧ್ಯಕ್ಷ ಸಿ.ಎಸ್. ನಿರಂಜನ್‌ಕುಮಾರ್ ನೇತೃತ್ವದಲ್ಲಿ ಜಮಾಯಿಸಿದ್ದ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಸ್ತೆ ತಡೆ ನಡೆಸಿದರು. ಹನುಮ ಧ್ವಜ ತೆರವು ಖಂಡಿಸಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ನಂತರ ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳುತ್ತಿದ್ದಂತೆ ಪೊಲೀಸರು ಜಿಲ್ಲಾಡಳಿತ ಭವನದ ಮುಖ್ಯದ್ವಾರ ಬಂದ್ ಮಾಡಿದರು. ಗೇಟ್ ಮುಂದೆ ಪೊಲೀಸರ ಸರ್ಪಗಾವಲು ಹಾಕಿದ್ದರು. ಪ್ರತಿಭಟನಾಕಾರರು ಜಿಲ್ಲಾಡಳಿತ ಭವನಕ್ಕೆ ನುಗ್ಗಲು ಯತ್ನಿಸಿದ್ದರು. ಪೊಲೀಸರು ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಮಾಜಿ ಶಾಸಕ ಎಸ್.ಬಾಲರಾಜು, ವೆಂಕಟರಮಣಸ್ವಾಮಿ, ಪಾಪು, ಪ್ರಣಯ್, ಮೂಡ್ನಾಕೂಡ್ ಪ್ರಕಾಶ್, ಜನಧ್ವನಿ ವೆಂಕಟೇಶ್, ದತ್ತೇಶ್, ಡಾ.ಎ.ಆರ್.ಬಾಬು, ಕೂಡ್ಲೂರು ಶ್ರೀಧರ ಮೂರ್ತಿ, ಅಯ್ಯನಪುರ ಶಿವಕುಮಾರ್, ಕೆರೆಹಳ್ಳಿ ಮಹದೇವಸ್ವಾಮಿ, ಶಾಂತಮೂರ್ತಿ, ಚಾಮುಲ್ ಅಧ್ಯಕ್ಷ ನಾಗೇಂದ್ರ, ಬಂಗಾರ ನಾಯಕ, ಶಿವರಾಜ್, ನಟರಾಜು, ಮಹೇಂದ್ರ, ಆಶಾ ನಟರಾಜು, ದಾಕ್ಷಾಯಿಣಿ, ಸರಸ್ವತಿ, ಸೂರ್ಯ ಬಾಲರಾಜು, ಲೋಕೇಶ್ ಕೆ.ಎಲ್.ವೃಷಬೇಂದ್ರ, ಕೂಸಣ್ಣ ಸೇರಿದಂತೆ 100ಕ್ಕೂ ಹೆಚ್ಚು ಕಾರ್ಯಕರ್ತರನ್ನು ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಿದರು.

ಇದೇ ವೇಳೆ ಮಾತನಾಡಿದ ಎನ್.ಮಹೇಶ್, ಸಿಎಂ ಸಿದ್ದರಾಮಯ್ಯ ಹಿಂದೂಗಳನ್ನು ವಿರೋಧಿಸುವ ಮೂಲಕ ಅಲ್ಪಸಂಖ್ಯಾತರನ್ನು ಓಲೈಸುವಲ್ಲಿ ನಿರತರಾಗಿದ್ದಾರೆ. ಕೆರಗೋಡಿನಲ್ಲಿ ಹನುಮ ಧ್ವಜವನ್ನು ತೆರವು ಮಾಡುವ ಮೂಲಕ ಉದ್ದೇಶ ಪೂರ್ವಕವಾಗಿ ಹಿಂದೂಗಳ ಭಾವನೆಗಳನ್ನು ಧಕ್ಕೆ ಉಂಟು ಮಾಡಿದ್ದಾರೆ. ಕೆರಗೋಡು ಗ್ರಾಮಸ್ಥರ ಪ್ರತಿಭಟನೆಗೆ ಬೆಂಬಲ ನೀಡಲು ಬಂದ ಬಿಜೆಪಿ ನಾಯಕರನ್ನು ಬಂಧಿಸುವ ಮೂಲಕ ಪೊಲೀಸರನ್ನು ಅಸ್ತ್ರ ಮಾಡಿಕೊಂಡಿದ್ದಾರೆ. ಇದರ ವಿರುದ್ಧ ನಾವು ನಿರಂತರ ಹೋರಾಟ ಮಾಡಲಿದ್ದೇವೆ ಎಂದರು.

ದೇಶದ ಅತ್ಯುನ್ನತ ಪದವಿಯಲ್ಲಿರುವ ರಾಷ್ಟ್ರಪತಿ ದ್ರೌಪತಿ ಮುರ್ಮು ಅವರನ್ನು ಏಕ ವಚನದಲ್ಲಿ ಸಂಭೋದಿಸುವ ಮೂಲಕ ಸಿಎಂ ಸಿದ್ದರಾಮಯ್ಯ ತಮ್ಮ ವ್ಯಕ್ತಿತ್ವವನ್ನು ತೋರಿಸಿದ್ದಾರೆ. ಇದು ಕಾಂಗ್ರೆಸ್ ಸಂಸ್ಕೃತಿಯಾಗಿದೆ. ಕೆಳ ಮಟ್ಟದ ವ್ಯಕ್ತಿತ್ವವನ್ನು ತೋರಿಸಿದ್ದಾರೆ ಎಂದು ಕಿಡಿಕಾರಿದರು.

ಆರೋಗ್ಯ ಸೇವೆ ಜನರ ಬಳಿಗೆ ತಲುಪಲಿ

● ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿಕೆ ● ಕೊಳ್ಳೇಗಾಲದಲ್ಲಿ ಬೃಹತ್ ಆರೋಗ್ಯ ಮೇಳ

ಕೊಳ್ಳೇಗಾಲ, ಜ.29–ಆರೋಗ್ಯ ಸೇವೆ ಜನರ ಬಳಿ ತಲುಪಬೇಕು. ತಜ್ಞ ವೈದ್ಯರ ಸೇವೆ, ವೈದ್ಯಕೀಯ ಅತ್ಯಾಧುನಿಕ ಸಲಕರಣೆಗಳ ಸೌಲಭ್ಯವನ್ನು ಆಯಾ ಭಾಗದಲ್ಲೇ ದೊರಕಿಸಿ ಸಮಗ್ರ ಆರೋಗ್ಯ ತಪಾಸಣೆ ಮಾಡಬೇಕು ಎನ್ನುವ ಉದ್ದೇಶದಿಂದ ಆರೋಗ್ಯ ಮೇಳ ಹಮ್ಮಿಕೊಳ್ಳಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಪಟ್ಟಣದ ಎಂಜಿಎಸ್‌ವಿ ಕಾಲೇಜು ಆವರಣದಲ್ಲಿ ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಸಹಯೋಗದೊಂದಿಗೆ ಏರ್ಪಡಿಸಿದ್ದ ಬೃಹತ್ ಆರೋಗ್ಯ ಮೇಳ ಉದ್ಘಾಟಿಸಿ ಮಾತನಾಡಿದ ಅವರು, ವಿಶೇಷವಾಗಿ ಕಾಡಂಚಿನ, ದೂರದ ಪ್ರದೇಶಗಳ ಜನತೆಗೆ ಆರೋಗ್ಯ ಸೇವೆ ಸಿಗಬೇಕು ಎನ್ನುವ ಕಾರಣದಿಂದ ಕೊಳ್ಳೇಗಾಲದಂತಹ ಪಟ್ಟಣದಲ್ಲಿ ಆರೋಗ್ಯ ಮೇಳ ಏರ್ಪಡಿಸಲಾಗಿದೆ ನಾನು ಹನೂರು, ಕೊಳ್ಳೇಗಾಲ ಭೇಟಿ ವೇಳೆ ಇಲ್ಲಿಯೇ ಆರೋಗ್ಯ ಮೇಳ ಆಯೋಜನೆಗೆ ನಿರ್ಧರಿಸಿ ಸಚಿವರು, ಶಾಸಕರು, ಅಧಿಕಾರಿಗಳೊಂದಿಗೆ ಚರ್ಚಿಸಿದ್ದೆ. ಅದರಂತೆ ಜಿಲ್ಲಾಡಳಿತ, ಆರೋಗ್ಯ ಇಲಾಖೆ ಅಧಿಕಾರಿಗಳು ವ್ಯವಸ್ಥಿತವಾಗಿ ಆರೋಗ್ಯ ಮೇಳ ಏರ್ಪಡಿಸಿದ್ದಾರೆ ಎಂದರು.

ಈ ಆರೋಗ್ಯ ಮೇಳಕ್ಕೆ ನಿರೀಕ್ಷೆಗೂ ಮೀರಿ ಸ್ಪಂದನೆ ದೊರೆತಿದ್ದು, ರಾಜ್ಯದ ಇತರೆ ಕಡೆಗಳಲ್ಲೂ ಆರೋಗ್ಯ ಮೇಳ ಆಯೋಜನೆಗೆ ನಾಂದಿಯಾಗಿದೆ. ತಪಾಸಣೆಗೆ ಒಳಗಾದವರಿಗೆ ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದರೆ ಮೈಸೂರು, ಬೆಂಗಳೂರಿನ ಆಸ್ಪತ್ರೆಗಳಿಗೆ ಕಳುಹಿಸಲಾಗುವುದು. ತಪಾಸಣೆ ಮಾಡಿಸಿಕೊಂಡವರ ಆರೋಗ್ಯ ಸ್ಥಿತಿ ತಿಳಿಯುವಂತೆ ಜಿಲ್ಲಾ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು. ಆಶಾಕಿರಣ ಯೋಜನೆಯಡಿ ಜಿಲ್ಲೆಯಲ್ಲಿ ಸಮಗ್ರ ನೇತ್ರ ತಪಾಸಣೆ ನಡೆದಿದೆ. 60 ಸಾವಿರ ಜನರಿಗೆ ಹಾಗೂ 17 ಸಾವಿರ ಮಕ್ಕಳಿಗೆ ಸದ್ಯದಲ್ಲೇ ಕನ್ನಡಕ ವಿತರಿಸಲಾಗುವುದು ಎಂದು ತಿಳಿಸಿದರು.



ಕೊಳ್ಳೇಗಾಲದ ಎಂಜಿಎಸ್‌ವಿ ಕಾಲೇಜು ಆವರಣದಲ್ಲಿ ಏರ್ಪಡಿಸಿದ್ದ ಆರೋಗ್ಯ ಮೇಳವನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಉದ್ಘಾಟಿಸಿದರು. ಸಚಿವ ಕೆ.ವೆಂಕಟೇಶ್, ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಎಂ.ಆರ್.ಮಂಜುನಾಥ್, ಆರೋಗ್ಯ ಇಲಾಖೆ ಆಯುಕ್ತ ಡಿ.ರಣದೀಪ್, ಜಿಲ್ಲಾಧಿಕಾರಿ ಶಿಲ್ಪಾನಾಗ್ ಮತ್ತಿತರರಿದ್ದರು.

12,047 ಜನರಿಗೆ ಆರೋಗ್ಯ ಸೇವೆ

ಕೊಳ್ಳೇಗಾಲದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಿದ್ದ ಆರೋಗ್ಯ ಮೇಳಕ್ಕೆ ಅಭೂತಪೂರ್ವ ಸ್ಪಂದನೆ ದೊರೆತಿದ್ದು, ಮೇಳದಲ್ಲಿ 12,047 ಜನರು ತಪಾಸಣೆಗೆ ಒಳಗಾಗಿ ವಿವಿಧ ಆರೋಗ್ಯ ಸೇವೆ ಪಡೆದರು. ಕೊಳ್ಳೇಗಾಲದ ಎಂಜಿಎಸ್‌ವಿ ಕಾಲೇಜಿನಲ್ಲಿ ಅಚ್ಚುಕಟ್ಟಾಗಿ ಆರೋಗ್ಯ ಶಿಬಿರ ಏರ್ಪಾಡಾಗಿತ್ತು. ಬೆಳಗ್ಗಿನಿಂದಲೇ ಜಿಲ್ಲೆಯ ವಿವಿಧ ಭಾಗಗಳಿಂದ ಜನರು ಬರತೊಡಗಿದರು. 11 ಗಂಟೆ ವೇಳೆಗೆ ಸುಮಾರು 7 ಸಾವಿರ ಮಂದಿ ನೋಂದಾಯಿಸಿದ್ದರು. ಸಂಜೆ ವೇಳೆಗೆ 12,047 ಜನರು ವೈದ್ಯಕೀಯ ಸೇವೆ ಪಡೆದುಕೊಂಡರು.

ಈ ಶಿಬಿರದಲ್ಲಿ ತಪಾಸಣಾ ವಿವಿಧ ವಿಭಾಗಗಳು ಇದ್ದು, ತಜ್ಞ ವೈದ್ಯರು ಪರೀಕ್ಷಿಸಿ ಉಚಿತವಾಗಿ ಔಷಧ ವಿತರಣೆಗೆ ಕೌಂಟರ್‌ಗಳನ್ನು ತೆರೆಯಲಾಗಿತ್ತು. ವಿಶೇಷ ಅತ್ಯಾಧುನಿಕ ವೈದ್ಯಕೀಯ ಪರೀಕ್ಷಾ ಉಪಕರಣಗಳನ್ನು ಒಳಗೊಂಡ ತಪಾಸಣಾ ವಾಹನಗಳು ಸಹ ಇದ್ದವು. ಮೇಳಕ್ಕೆ ಜಿಲ್ಲೆಯ ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ನೋಂದಾಯಿಸಿರುವ ಜನರನ್ನು ಕರೆತರಲಾಗಿತ್ತು. ಮೇಳದಲ್ಲಿ ಕುಡಿಯುವ ನೀರು, ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು. ಒಟ್ಟಾರೆ ನಿರೀಕ್ಷೆಗೂ ಮೀರಿ ಆರೋಗ್ಯ ಮೇಳ ಯಶಸ್ಸು ಕಂಡಿದೆ.

> ❝ ಗುತ್ತಿಗೆ ಪದ್ಧತಿ ಆಧಾರದಲ್ಲಿ ತಜ್ಞ ವೈದ್ಯರನ್ನು ನೇಮಿಸಲು ಈಗಾಗಲೇ ರಾಜ್ಯ ಸರ್ಕಾರ ಒಪ್ಪಿಗೆ ಸೂಚಿಸಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಕ್ರಮವಹಿಸಬೇಕು. ಆಸ್ಪತ್ರೆಗಳಲ್ಲಿ ಹೊರಗೆ ಔಷಧ ತರಲು ಚೀಟಿ ಬರೆಯಬಾರದು. ಆಸ್ಪತ್ರೆಗಳಲ್ಲೇ ಎಲ್ಲಾ ಔಷಧಗಳನ್ನು ನೀಡಬೇಕು. ಈ ನಿಟ್ಟಿನಲ್ಲಿ ಇನ್ನಷ್ಟು ಸುಧಾರಣಾ ಕ್ರಮಗಳಿಗೆ ಆರೋಗ್ಯ ಇಲಾಖೆ ಮುಂದಾಗಿದೆ. 42 ತಾಲೂಕುಗಳಲ್ಲಿ ಹೊಸದಾಗಿ ಡಯಾಲಿಸಿಸ್ ಘಟಕ ತೆರೆಯಲು ಆದೇಶಿಸಲಾಗಿದೆ. ಅದರಲ್ಲಿ ಹನೂರು ತಾಲೂಕಿನ ರಾಮಾಪುರವು ಸೇರಿದೆ. ತಾಲೂಕು ಆಸ್ಪತ್ರೆಗಳ ಅಭಿವೃದ್ಧಿಗೆ ಕ್ರಮ ತೆಗೆದುಕೊಳ್ಳಲಾಗುವುದು.
>
> – ದಿನೇಶ್ ಗುಂಡೂರಾವ್, ಸಚಿವ

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಮಾತನಾಡಿ, ಪಟ್ಟಣದಲ್ಲಿ ಆಯೋಜಿಸಿರುವ ಬೃಹತ್ ಆರೋಗ್ಯ ಮೇಳ ಮಹತ್ವದ ಕಾರ್ಯಕ್ರಮವಾಗಿದೆ. ಅವಶ್ಯಕವಿರುವ ಕಡೆಗಳಲ್ಲಿ ಇಂತಹ ಮೇಳಗಳನ್ನು ಹಮ್ಮಿಕೊಳ್ಳುವುದು ಒಳ್ಳೆಯದು. ಜನರು ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಲಿ ಎಂಬ ಉದ್ದೇಶದಿಂದ ಎಲ್ಲಾ ವಿಭಾಗಗಳ ತಜ್ಞ ವೈದ್ಯರನ್ನು ಕರೆತರಲಾಗಿದೆ. ಬಡವರು, ಅಲ್ಪಸಂಖ್ಯಾತರು, ಹಿಂದುಳಿದವರು ಹೆಚ್ಚಾಗಿರುವ ಜಿಲ್ಲೆಯಲ್ಲಿ ಇಂತಹ ಮೇಳ ನಡೆಸಿದ್ದು ಸೂಕ್ತವಾಗಿದೆ ಎಂದು ಹೇಳಿದರು.

ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿದರು. ಇದೇ ವೇಳೆ ಆರೋಗ್ಯ ಕಾರ್ಡ್, ದಂತ ಪಂಕ್ತಿ ವಿತರಣೆ ಮಾಡಲಾಯಿತು. ಶಾಸಕರಾದ ಎಂ.ಆರ್. ಮಂಜುನಾಥ್, ಎಚ್.ಎಂ.ಗಣೇಶ ಪ್ರಸಾದ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯುಕ್ತ ಡಿ.ರಣದೀಪ್, ಎನ್‌ಆರ್‌ಎಚ್‌ಎಂ ನಿರ್ದೇಶಕ ಡಾ. ನವೀನ್ ಭಟ್, ಆರೋಗ್ಯ ಇಲಾಖೆಯ ನಿರ್ದೇಶಕಿ ಡಾ.ಬಿ.ಎಸ್.ಪುಷ್ಪಲತಾ, ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಪಂ ಸಿಇಓ ಆನಂದ್‌ಪ್ರಕಾಶ್ ಮೀನಾ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್. ಚಿದಂಬರ ಉಪಸ್ಥಿತರಿದ್ದರು.

ಚಿಕ್ಕಲ್ಲೂರು ಸಿದ್ದಪ್ಪಾಜಿ ಜಾತ್ರೆಗೆ ಸಂಭ್ರಮದ ತೆರೆ




ಮುತ್ತತ್ತಿರಾಯನ ಸೇವೆಯೊಂದಿಗೆ ಕರಿಯಣ್ಣ, ಕೆಂಚಣ್ಣ ದೇವರಿಗೆ ಪೂಜೆ ಸಲ್ಲಿಸಿ ಚಿಕ್ಕಲ್ಲೂರು ಜಾತ್ರೆಗೆ ಮುಕ್ತಾಯಗೊಳಿಸಲಾಯಿತು.

ಹನೂರು: ಇತಿಹಾಸ ಪ್ರಸಿದ್ಧ ಚಿಕ್ಕಲ್ಲೂರು ಜಾತ್ರೆ ಸೋಮವಾರ ಮುತ್ತತ್ತಿರಾಯನ ಸೇವೆಯೊಂದಿಗೆ ಮುಕ್ತಾಯಗೊಂಡಿತು.

ಜ.25ರಿಂದ ಐದು ದಿನ ಗ್ರಾಮೀಣ ಸಂಸ್ಕೃತಿಯ ಸಮ್ಮಿಲನದೊಂದಿಗೆ ನಡೆದ ಜಾತ್ರೆ ಜನಸಂಭ್ರಮದೊಂದಿಗೆ ತೆರೆಕಂಡಿದ್ದು, ಮೊದಲ ದಿನದ ಚಂದ್ರಮಂಡಲೋತ್ಸವ ಹಾಗೂ ಸಿದ್ದಪ್ಪಾಜಿ ಕಂಡಾಯ, ನಂತರದ ಮಂಟೇಸ್ವಾಮಿ ಪರಂಜ್ಯೋತಿ ಉತ್ಸವಗಳು, ಹುಲಿವಾಹನ ಮತ್ತು ಪಂಕ್ತಿಸೇವೆಯೊಂದಿಗೆ ಅದ್ದೂರಿಯಾಗಿ ನಡೆದ ಜಾತ್ರೆಯಲ್ಲಿ ರಾಜ್ಯದ ಮೂಲೆ ಮೂಲೆಗಳಿಂದ ಆಗಮಿಸಿದ್ದ ಲಕ್ಷಾಂತರ ಭಕ್ತರು ಸಂಭ್ರಮವನ್ನು ಇಮ್ಮಡಿಗೊಳಿಸಿದರು.

ಸೋಮವಾರ ಮುತ್ತತ್ತಿರಾಯನ ಸೇವೆಯೊಂದಿಗೆ ಕರಿಯಣ್ಣ, ಕೆಂಚಣ್ಣ ದೇವರನ್ನು ಹೊರವಲಯದ ಅರಳಿ ಮರದವರೆಗೆ ಕೊಂಡೊಯ್ದು, ಪೂಜೆ ಸಲ್ಲಿಸಿ ಅಲ್ಲಿಂದ ಭಕ್ತರು ಮೆರವಣಿಗೆ ಮೂಲಕ ಸಿದ್ದಪ್ಪಾಜಿ ದೇವಸ್ಥಾನಕ್ಕೆ ತಂದು ಪೂಜೆ ಸಲ್ಲಿಸಿದರು. ನಂತರ ದೇವಸ್ಥಾನದ ಆವರಣದ ಆಂಜನೇಯಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಐದು ದಿನದ ಜಾತ್ರೆಗೆ ತೆರೆ ಎಳೆದರು. ಪ್ರತಿದಿನದ ಒಂದಲ್ಲೊಂದು ಸೇವೆಯೂ ಸಡಗರದಿಂದ ಕೂಡಿತ್ತು. ಇಡೀ ಜಾತ್ರೆಯ ಮೈದಾನ ಭಕ್ತ ಸಮೂಹದಿಂದ ತುಂಬಿತ್ತು. ಭಾನುವಾರದ ಪಂಕ್ತಿಸೇವೆಯಲ್ಲಂತೂ ಲಕ್ಷಾಂತರ ಭಕ್ತರು ನೆರೆದು, ಸಹ ಪಂಕ್ತಿ ಭೋಜನ ಸ್ವೀಕರಿಸುವ ಮೂಲಕ ಧನ್ಯತಾಭಾವ ಅನುಭವಿಸಿದರು. ಪೊಲೀಸರು ಬಿಗಿಬಂದೋಬಸ್ತ್ ಕೈಗೊಂಡಿದ್ದರು.



ಬೇಗೂರು ಸಮೀಪದ ಹಾಲಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಎಚ್.ಎಸ್.ನಂಜುಂಡ ಪ್ರಸಾದ್ ಹಾಗೂ ಉಪಾಧ್ಯಕ್ಷರಾಗಿ ಕೆಂಚಪ್ಪ ಆಯ್ಕೆ ಆಗಿದ್ದು, ನಿರ್ದೇಶಕರಾದ ಎಚ್.ಎಸ್ ಚಂದ್ರಪ್ಪ, ಎಚ್.ಜೆ.ಮಹದೇವಪ್ಪ, ಸಿದ್ದವೀರಪ್ಪ, ಹಾಲಪ್ಪ, ಲೋಕೇಶ್, ರೇವಗೌಡ, ಎಚ್.ಬಿ.ಸಿದ್ದಲಿಂಗಪ್ಪ ಹಾಜರಿದ್ದರು.

ಭಯೋತ್ಪಾದಕ ಸಂಘಟನೆ ಸಿಮಿ ಮೇಲಿನ ನಿಷೇಧ ವಿಸ್ತರಿಸಿದ ಕೇಂದ್ರ


ಅಮಿತ್ ಶಾ

ನವದೆಹಲಿ: ಭಯೋತ್ಪಾದಕ ಸಂಘಟನೆ ಸ್ಟೂಡೆಂಟ್ಸ್ ಇಸ್ಲಾಮಿಕ್ ಮೂವ್ ಮೆಂಟ್ ಆಫ್ ಇಂಡಿಯಾ (ಸಿಮಿ) ಮೇಲಿನ ನಿಷೇಧವನ್ನು ಸರ್ಕಾರ ವಿಸ್ತರಿಸಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸೋಮವಾರ ಹೇಳಿದ್ದಾರೆ. ನಿಷೇಧಿತ ಸಿಮಿ ಸಂಘಟನೆಯನ್ನು ಯುಎಪಿಎ ಅಡಿಯಲ್ಲಿ ಮತ್ತೆ ಐದು ವರ್ಷಗಳ ಕಾಲ 'ಕಾನೂನುಬಾಹಿರ ಸಂಘ' ಎಂದು ಘೋಷಿಸಲಾಗಿದೆ ಎಂದು ಕೇಂದ್ರ ಗೃಹ ಸಚಿವರು ತಿಳಿಸಿದ್ದಾರೆ.

ಸ್ಟೂಡೆಂಟ್ಸ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾ (ಸಿಮಿ) ಮೇಲೆ ಹೇರಿರುವ ನಿಷೇಧವನ್ನು ಸಮರ್ಥಿಸಿಕೊಂಡಿರುವ ಕೇಂದ್ರ ಸರ್ಕಾರ, ಈ ಸಂಬಂಧ ಸುಪ್ರೀಂ ಕೋರ್ಟ್‌ನಲ್ಲಿ ಅಫಿಡವಿಟ್ ಸಲ್ಲಿಸಿದೆ. ಭಾರತದ ಸಾರ್ವಭೌಮತೆ, ಭದ್ರತೆ ಮತ್ತು ಸಮಗ್ರತೆಗೆ ಧಕ್ಕೆ ತರಲು ಭಯೋ ತ್ಪಾದನೆ, ಶಾಂತಿ ಮತ್ತು ಕೋಮು ಸೌಹಾರ್ದವನ್ನು ಕದಡುವಲ್ಲಿ ಸ್ಟೂಡೆಂಟ್ಸ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾ ತೊಡಗಿಸಿಕೊಂಡಿದೆ ಎಂದು ಕೇಂದ್ರ ಗೃಹ ಸಚಿವಾಲಯ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ. 2014ರ ಫೆಬ್ರವರಿ 1ರಂದು ಸಿಮಿ ಸಂಘಟನೆಯನ್ನು ನಿಷೇಧಿಸಲಾಯಿತು. ನಂತರ ಈ ನಿಷೇಧ ವನ್ನು 2019ರವರೆಗೆ ವಿಸ್ತರಿಸಲಾಗಿತ್ತು.

ಒಂದನೇ ಪುಟದಿಂದ

ಇಬ್ಬರ ಬಲಿ ಪಡೆದ ರೋಡ್ ಹಂಪ್ಸ್

ಚಿಕಿತ್ಸೆಗಾಗಿ ಜೆಎಸ್‌ಎಸ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತಾದರೂ, ಚಿಕಿತ್ಸೆ ಫಲಕಾರಿಯಾಗದೇ ಇಂದು ಮುಂಜಾನೆ ಯಶವಂತ ಕೊನೆಯುಸಿರೆಳೆ ದಿದ್ದಾರೆ ಎಂದು ಕೆಆರ್ ಸಂಚಾರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಬಡ ತರಕಾರಿ ವ್ಯಾಪಾರಿ: ಮತ್ತೊಂದು ಪ್ರಕರಣದಲ್ಲಿ ಹೋಟೆಲುಗಳಿಗೆ ತರಕಾರಿ ಸರಬರಾಜು ಮಾಡಲು ಹೆಚ್.ಡಿ. ಕೋಟೆಯಿಂದ ಬಂದ ಆಪೆ ಆಟೋ, ಭಾನುವಾರ ರಾತ್ರಿ ಸುಮಾರು 11.30 ಗಂಟೆ ವೇಳೆಗೆ ಆಯಿಷ್ ಬಳಿ ಇಳಿಜಾರಿ ನಲ್ಲಿ ಅಳವಡಿಸಿದ್ದ ರೋಡ್ ಹಂಪ್ಸ್‌ನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಎದುರಿಗೆ ಬರುತ್ತಿದ್ದ ಕಾರಿಗೆ ಡಿಕ್ಕಿ ಹೊಡೆದು, ಉರುಳಿಬಿದ್ದಿತ್ತು. ಆಟೋದಲ್ಲಿ ಡ್ರೈವರ್ ಪಕ್ಕ ಕುಳಿತಿದ್ದ ತರಕಾರಿ ವ್ಯಾಪಾರಿ ಕುಮಾರ ಮತ್ತು ಚಾಲಕ ದುಗ್ಗೇಶ್ ತೀವ್ರವಾಗಿ ಗಾಯಗೊಂಡಿದ್ದರು. ತಕ್ಷಣ ಅವರನ್ನು ಮೈಸೂರಿನ ಕೆಆರ್ ಆಸ್ಪತ್ರೆಗೆ ದಾಖಲಿ ಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ದುಗ್ಗೇಶ್ ಇಂದು ಮುಂಜಾನೆ ಕೊನೆ ಯುಸಿರೆಳೆದಿದ್ದಾರೆ.

ತೀವ್ರ ಗಾಯ: ಇನ್ನೊಂದು ದುರಂತದಲ್ಲಿ ಸರಸ್ವತಿಪುರಂ ನಿವಾಸಿ, ಮೂಲತಃ ವಿರಾಜಪೇಟೆಯವರಾದ ಶಿವಂ, ಭಾನುವಾರ ಬೆಳಗ್ಗೆ 6.30 ಗಂಟೆಯಲ್ಲಿ ಬೈಕ್‌ನಲ್ಲಿ ಆಯಿಷ್ ಕಡೆಗೆ ಹೋಗುತ್ತಿದ್ದಾಗ ಆಯಿಷ್ ಬಳಿ ಇಳಿಜಾರಿನಲ್ಲಿ ಅಳವಡಿಸಿರುವ ರೋಡ್ ಹಂಪ್ಸ್‌ನಲ್ಲಿ ನಿಯಂತ್ರಣ ತಪ್ಪಿ ಬಿದ್ದು ತೀವ್ರವಾಗಿ ಗಾಯಗೊಂಡಿದ್ದು, ಅವರನ್ನು ಕಾಮಾಕ್ಷಿ ಆಸ್ಪತ್ರೆಗೆ ದಾಖಲಿಸಿ, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಜೆಎಸ್‌ಎಸ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಶಿವಂ ತಲೆಗೆ ತೀವ್ರ ಗಾಯಗಳಾಗಿದ್ದು, ಪರಿಸ್ಥಿತಿ ಗಂಭೀರವಾಗಿದೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ. ಕೆಆರ್ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಇರ್ಷಾದ್ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಹಂಪ್ಸ್ ಹಾಕಿದವರ ವಿರುದ್ಧ ಪ್ರಕರಣ ದಾಖಲು

ಹಂಪ್ಸ್ ನಿರ್ಮಿಸಲಾಗಿದೆ. ಅದರಿಂದಾಗಿ ಏಕಾಏಕಿ ತಲೆ ಎತ್ತಿದ್ದ ರೋಡ್ ಹಂಪ್ಸ್ ಅರಿವಿಲ್ಲದೆ ಶನಿವಾರ ಮತ್ತು ಭಾನುವಾರ ರಾತ್ರಿ ಈ ರಸ್ತೆಗಳಲ್ಲಿ ಸಾಕಷ್ಟು ಅಪಘಾತಗಳು ಸಂಭವಿಸಿವೆ. ಇದರಲ್ಲಿ ಯುವಕರಿಬ್ಬರು ಸಾವನ್ನಪ್ಪಿದ್ದು, ಹಲವು ಬೈಕ್ ಸವಾರರು ತೀವ್ರವಾಗಿ ಗಾಯಗೊಂಡಿದ್ದಾರೆ. ಹಂಪ್ಸ್ ಹಾಕುವ ಮೊದಲು ಸಂಚಾರ ಪೊಲೀಸರಿಂದ ಅನುಮತಿ ಪಡೆದು ವೈಜ್ಞಾನಿಕವಾಗಿ ಅಳವಡಿಸಬೇಕಿತ್ತು. ಆದರೆ, ಪಾಲಿಕೆ ಇಂಜಿನಿಯರ್ ಗಳು ನಮ್ಮ ಗಮನಕ್ಕೆ ತಾರದೇ ಅವೈಜ್ಞಾನಿಕವಾಗಿ ತರಾತುರಿಯಲ್ಲಿ ರೋಡ್ ಹಂಪ್ಸ್ ಹಾಕಿರುವುದು ಅವಘಡಕ್ಕೆ ಕಾರಣವಾಗಿದೆ.

ಮಾಹಿತಿ ಪಡೆಯಬೇಕಿತ್ತು: ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ, ನಗರ ಪೊಲೀಸ್ ವ್ಯಾಪ್ತಿಯಲ್ಲಿ ರೋಡ್ ಹಂಪ್ಸ್ ಹಾಕಬೇಕಾದರೆ, ಮೊದಲು ನಮ್ಮಿಂದ ಮಾಹಿತಿ ಪಡೆದು ಸುರಕ್ಷಿತ ವಿನ್ಯಾಸದಂತೆ ಹಾಕಬೇಕು. ಆದರೆ, ನಮ್ಮ ಗಮನಕ್ಕೆ ಬಾರದಂತೆ ಬೋಗಾದಿ ರಸ್ತೆ ಮತ್ತು ಎಸ್‌ಜೆಸಿಇ ರಸ್ತೆಯಲ್ಲಿ ಅವೈಜ್ಞಾನಿಕವಾಗಿ ಹಂಪ್ಸ್ ಅಳವಡಿಸಿರುವುದರಿಂದ ಒಂದೇ ದಿನ ಹಲವು ಅಪಘಾತಗಳಾಗಿವೆ ಎಂದರು.

ಪೊಲೀಸರು, ಕುಲಪತಿ ಹೇಳಿದ್ದರು: ರೋಡ್ ಹಂಪ್ಸ್ ಕುರಿತು ಸಂಪರ್ಕಿಸಿದ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಮೈಸೂರು ಮಹಾನಗರ ಪಾಲಿಕೆ ವಲಯ ಕಚೇರಿ-4ರ ಅಭಿವೃದ್ಧಿ ಅಧಿಕಾರಿ ಏಗಾನಂದ, ಅತೀ ವೇಗವಾಗಿ ವಾಹನ ಸವಾರರು ಸಂಚರಿಸುತ್ತಿದ್ದು ಅಪಘಾತಗಳಾಗುತ್ತಿದ್ದರಿಂದ ಬೋಗಾದಿ ರಸ್ತೆ ಮತ್ತು ಎಸ್‌ಜೆಸಿಇ ರಸ್ತೆಗಳಲ್ಲಿ ರೋಡ್ ಹಂಪ್ಸ್ ನಿರ್ಮಿಸಿ, ವೇಗಕ್ಕೆ ಕಡಿವಾಣ ಹಾಕುವಂತೆ ಪೊಲೀಸರು ಪತ್ರ ಬರೆದು ಕೋರಿಕೊಂಡಿದ್ದರಲ್ಲದೇ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳೂ ಮೌಖಿಕವಾಗಿ ಹೇಳಿದ್ದರಿಂದ ಪಾಲಿಕೆಯಿಂದಲೇ ಹಂಪ್ಸ್ ಅಳವಡಿಸಲಾಗಿತ್ತು ಎಂದರು. ರೋಡ್ ಹಂಪ್ಸ್ ಹಾಕಿದ ದಿನವೇ ಬಿಳಿ ಪಟ್ಟೆ ಬಳಿಯಬಾರದೆಂದು ಒಂದು ದಿನ ಬಿಟ್ಟು ಭಾನುವಾರ ಬಳಿಯಲಾಗಿದೆ. ಇಂತಹ ಸ್ಥಳಗಳಲ್ಲಿ ಬ್ಯಾರಿಕೇಡ್ ಅಳವಡಿಸಿದ್ದೆವಾದರೂ ಅದನ್ನು ಲೆಕ್ಕಿಸದೆ ವೇಗವಾಗಿ ಬಂದು ಕೆಲವರು ನಿಯಂತ್ರಣ ತಪ್ಪಿ ಬಿದ್ದಿದ್ದಾರೆ ಎಂದು ಏಗಾನಂದ ತಿಳಿಸಿದರು.

ರಾಜ್ಯ ಬಿಜೆಪಿ ಪೂರ್ಣ ಉಸ್ತುವಾರಿ

ಕಾರಣ ಎಂದು ರಾಜ್ಯದ ಹಲವು ಮುಖಂಡರು ಮತ್ತು ಸಂಸದರು ಆಂತರಿಕ ಹಾಗೂ ಬಹಿರಂಗವಾಗಿ ದೂರು ನೀಡಿದ ಬೆನ್ನಲ್ಲೇ ವರಿಷ್ಠರು ಎಚ್ಚೆತ್ತಿದ್ದಾರೆ.

ಈ ಉಭಯ ನಾಯಕರನ್ನು ಕರ್ನಾಟಕದಿಂದ ದೂರ ಇರಿಸುತ್ತಿದ್ದಂತೆ ಪಕ್ಷದಿಂದ ಹೊರಹೋಗಿದ್ದ ಜಗದೀಶ್ ಶೆಟ್ಟರ್ ಸೇರಿದಂತೆ ಹಲವು ಮುಖಂಡರು ಮರಳಿ ಪಕ್ಷಕ್ಕೆ ಬಂದಿದ್ದಾರೆ, ಬರುತ್ತಿದ್ದಾರೆ. ಶೆಟ್ಟರ್ ದೆಹಲಿಯಲ್ಲಿ ಪಕ್ಷಕ್ಕೆ ಸೇರ್ಪಡೆಗೊಂಡ ಸಂದರ್ಭದಲ್ಲೂ ಭೂಪೇಂದರ್ ಯಾದವ್ ಅವರ ಸಮ್ಮುಖದಲ್ಲೇ ಎಲ್ಲಾ ನಡೆಯಿತು. ಕಳೆದ ವಾರ ಅರಮನೆ ಆವರಣದಲ್ಲಿ ಮುಂದಿನ ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ನಡೆದ ಪದಾಧಿಕಾರಿಗಳ ಸಭೆಯಲ್ಲೂ ಅರುಣ್ ಸಿಂಗ್ ಭಾಗವಹಿಸಿರಲಿಲ್ಲ, ಅಲ್ಲಿಯೂ ಭೂಪಿಂದರ್ ಯಾದವ್ ಅವರೇ ಮುಂದಾಳತ್ವ ವಹಿಸಿದ್ದರು.

ಸಂಘ ಪರಿವಾರದಿಂದ ಬಂದಿರುವ ಭೂಪೇಂದರ್ ಯಾವುದೇ ರಾಜ್ಯದಲ್ಲಿ ಪಕ್ಷ ಸಂಕಷ್ಟಕ್ಕೆ ಸಿಲುಕಿದಾಗ ಅಲ್ಲಿನ ಜವಾಬ್ದಾರಿ ವಹಿಸಿಕೊಂಡು ಸಂಕಷ್ಟದಿಂದ ಪಾರು ಮಾಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿರುವ ಯಾದವ್ ಅವರಿಗೆ ಈಗ ಕರ್ನಾಟಕದ ಉಸ್ತುವಾರಿ ನೀಡಲಾಗಿದೆ. ಇದೇ ಸಮಯದಲ್ಲಿ ಸಂತೋಷ್ ಅವರ ಹಿಡಿತದಿಂದ ರಾಜ್ಯ ಘಟಕ ಮತ್ತು ಸಂಘಟನಾ ಚಟುವಟಿಕೆಗಳನ್ನು ಮುಕ್ತಗೊಳಿಸಲಾಗಿದೆ. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಸಲಹೆಯಂತೆ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸಿದ್ಧಪಡಿಸಿರುವ ಪದಾಧಿಕಾರಿಗಳ ಪಟ್ಟಿಗೂ ವರಿಷ್ಠರು ಹಸಿರು ನಿಶಾನೆ ನೀಡಿದರು. ಪದಾಧಿಕಾರಿಗಳ ಈ ಪಟ್ಟಿಯಲ್ಲಿ ಸಂತೋಷ್ ಅವರ ಯಾವುದೇ ಆಪ್ತರಿಗೆ ಮತ್ತು ಬೆಂಬಲಿಗರಿಗೆ ಸ್ಥಾನಮಾನ ನೀಡಲಿಲ್ಲ ಮತ್ತು ರಾಜ್ಯ ಬಿಜೆಪಿ ಕಚೇರಿಯಲ್ಲಿ ಪ್ರಮುಖ ಹೊಣೆಗಾರಿಕೆ ನಿರ್ವಹಿಸುತ್ತಿದ್ದವರನ್ನೂ ಬದಲಾವಣೆ ಮಾಡಲಾಗಿದೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಎಲ್ಲ 28 ಸ್ಥಾನಗಳಲ್ಲೂ ಗೆಲ್ಲುವ ಗುರಿಯೊಂದಿಗೆ ಬಿಜೆಪಿ ವರಿಷ್ಠರು ಅನೇಕ ಬದಲಾವಣೆಗಳನ್ನು ಪಕ್ಷದಲ್ಲಿ ಮಾಡಿ, ಚುನಾವಣೆಗೆ ಅಣಿಯಾಗುತ್ತಿದ್ದಾರೆ.

ಇದುವೇ ನನ್ನ ಕೊನೆಯ ಚುನಾವಣೆ

ಕೊನೆಯ ಅವಕಾಶ. ಈ ಚುನಾವಣೆಯಲ್ಲಿ ನೀವು ಬಿಜೆಪಿ ವಿರುದ್ಧ ಮತ ಚಲಾಯಿಸಿದರೆ ದೇಶ ಉಳಿಯಲಿದೆ. ಇಲ್ಲದಿದ್ದರೆ ಮುಂದೆ ನಿಮಗೆ ಮತ ಚಲಾಯಿಸುವ ಅವಕಾಶವೂ ಇರುವುದಿಲ್ಲ. ಬಿಜೆಪಿ ತನ್ನ ಸರ್ವಾಧಿಕಾರದಿಂದ ಎಲ್ಲಾ ಅವಕಾಶಗಳನ್ನು ಕಸಿದುಕೊಳ್ಳಲಿದೆ ಎಂದು ಖರ್ಗೆ ಎಚ್ಚರಿಸಿದ್ದಾರೆ.

2024ರ ಲೋಕಸಭಾ ಚುನಾವಣೆ ದೇಶದ ಮತದಾರರಿಗೆ ಕೊನೆಯ ಚುನಾವಣೆ. ಈ ಚುನಾವಣೆಯಲ್ಲಿ ಮತ್ತೆ ಮೋದಿಯನ್ನು ಗೆಲ್ಲಿಸಿದರೆ, ಭಾರತದ ಕತೆ ಮುಗೀತು ಎಂದು ಪರೋಕ್ಷವಾಗಿ ಖರ್ಗೆ ಮತದಾರರಿಗೆ ಎಚ್ಚರಿಕೆ ನೀಡಿದ್ದಾರೆ. ಮೊಹಬ್ಬತ್ ಕಿ ದುಕಾನ್ ಮೂಲಕ ರಾಹುಲ್ ಗಾಂಧಿ ದೇಶವನ್ನೂ ಒಗ್ಗೂಡಿಸುತ್ತಿದ್ದಾರೆ. ಆದರೆ ಬಿಜೆಪಿ ಹಾಗೂ ಆರ್‌ಎಸ್‌ಎಸ್ ಭಾರತವನ್ನು ಒಡೆದು ಆಳುತ್ತಿದೆ ಎಂದಿದ್ದಾರೆ.

ಇದೇ ವೇಳೆ ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ವಿರುದ್ಧವೂ ಹರಿಹಾಯ್ದಿದ್ದಾರೆ. ಮೋದಿ ಸ್ನೇಹ ಬೆಳೆಸಿರುವ ನವೀನ್ ಪಟ್ನಾಯಕ್ ಹಾಗೂ ಒಡಿಶಾಗೆ ಏನು ಸಿಕ್ಕಿದೆ ಎಂದು ಖರ್ಗೆ ಪ್ರಶ್ನಿಸಿದ್ದಾರೆ. ಒಂದು ಎಂಜಿನ್ ವಿಫಲವಾದರೆ, ಮತ್ತೊಂದು ಎಂಜಿನ್ ಕಾರ್ಯನಿರ್ವಹಿಸುವುದಿಲ್ಲ ಎಂದು ಬಿಜೆಪಿಯ ಡಬಲ್ ಎಂಜಿನ್ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ರಾಜ್ಯಸಭೆಯ 56 ಸ್ಥಾನಗಳಿಗೆ ಫೆ.27ರಂದು ಚುನಾವಣೆ

ಈ ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ರಾಜೀವ್ ಚಂದ್ರಶೇಖರ್ (ಬಿಜೆಪಿ), ಜಿ.ಸಿ. ಚಂದ್ರಶೇಖರ್, ಡಾ. ಎಲ್. ಹನುಮಂತಯ್ಯ ಹಾಗೂ ಸಯ್ಯದ್ ನಾಸಿರ್ ಹುಸೇನ್ (ಕಾಂಗ್ರೆಸ್) ರಾಜ್ಯಸಭಾ ಸದಸ್ಯತ್ವ ಅವಧಿ ಕೊನೆಗೊಳ್ಳಲಿದೆ. ಈ ನಾಲ್ಕು ಕ್ಷೇತ್ರಗಳ ಚುನಾವಣೆಗಾಗಿ ಫೆಬ್ರವರಿ 8ರಂದು ಅಧಿಸೂಚನೆ ಹೊರಬೀಳಲಿದ್ದು, ಅಂದಿನಿಂದಲೇ ನಾಮಪತ್ರ ಸಲ್ಲಿಕೆ ಮಾಡಬಹುದಾಗಿದೆ. ಫೆಬ್ರವರಿ 15ರಂದು ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿದ್ದು, 16ರಂದು ಪರಿಶೀಲನೆ, 20 ರಂದು ನಾಮಪತ್ರ ಹಿಂತೆಗೆದುಕೊಳ್ಳಲು ಕೊನೆಯ ದಿನವಾಗಿದೆ. ಅಗತ್ಯ ಬಿದ್ದರೆ ಫೆಬ್ರವರಿ 27 ರಂದು ಬೆಳಗ್ಗೆ 9 ರಿಂದ ಸಂಜೆ 4 ಗಂಟೆವರೆಗೆ ಮತದಾನ ನಡೆಯಲಿದ್ದು, ಅಂದೇ ಮತ ಎಣಿಕೆ ನಡೆದು ಫಲಿತಾಂಶ ಪ್ರಕಟಗೊಳ್ಳುವ ಸಾಧ್ಯತೆ ಇದೆ.

ರಾಜರ ಕಾಲದ ಪ್ರೋತ್ಸಾಹವೇ ಸಾಂಸ್ಕೃತಿಕ ನಗರಿ ಬಿರುದಿಗೆ ಕಾರಣ

ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಭಿಮತ


ಶ್ರೀ ನಟರಾಜ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ ಹಾಗೂ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಸೋಮವಾರ ಆಯೋಜಿಸಿದ್ದ ಮೂರು ದಿನಗಳ 'ಮಂಜಿರ ಮಹೋತ್ಸವ-2024'ರ ಕಾರ್ಯಕ್ರಮವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸಿದರು.

ಮೈಸೂರು, ಜ.29(ಎಸ್‌ಪಿಎನ್)- ರಾಜರ ಕಾಲದಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿ, ಸಂಗೀತ ಹಾಗೂ ಭರತನಾಟ್ಯ ಕಲೆಗಳನ್ನು ಪ್ರೋತ್ಸಾಹಿಸಿದ್ದೇ 'ಸಾಂಸ್ಕೃತಿಕ ನಗರಿ ಮೈಸೂರು' ಎಂಬ ಹಿರಿಮೆಗೆ ಕಾರಣ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಅಭಿಪ್ರಾಯಪಟ್ಟರು.

ಮೈಸೂರು ಕುವೆಂಪುನಗರದ ಗಾನ ಭಾರತೀ ಆವರಣದ ರಮಾ ಗೋವಿಂದ ಕಲಾವೇದಿಕೆಯಲ್ಲಿ ಶ್ರೀ ನಟರಾಜ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ ಹಾಗೂ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಸೋಮವಾರ ಆಯೋಜಿಸಿದ್ದ ಮೂರು ದಿನಗಳ 'ಮಂಜಿರ ಮಹೋತ್ಸವ-2024'ರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಾವ, ರಾಗ, ತಾಳಗಳನ್ನೊಳಗೊಂಡ ಭರತನಾಟ್ಯ ಆಧ್ಯಾತ್ಮಿಕ ಧಾರ್ಮಿಕತೆಯನ್ನು ಹೊಂದಿರುತ್ತದೆ. ನಮ್ಮ ವಿವಿಯಲ್ಲೂ ಕಲಾಕ್ಷೇತ್ರದಲ್ಲಿ ಆಸಕ್ತಿ ತೋರುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಸಹಕಾರ ನೀಡಲಾಗುತ್ತಿದೆ. ಕಲಾಪ್ರೇಮಿಗಳು, ಕಲಾ ಪೋಷಕರು, ಯುವ ಪ್ರತಿಭೆಗಳು ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಯುವ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಕೆಲಸವಾಗಬೇಕು. ಅಲ್ಲದೆ, ಮೈಸೂರಿನ ಅನೇಕ ಸಂಘ-ಸಂಸ್ಥೆಗಳು ಈ ಕಾರ್ಯದಲ್ಲಿ ತೊಡಗಿರುವುದು ಸಂತೋಷದ ಸಂಗತಿ ಎಂದರು.

ಹಿರಿಯ ನೃತ್ಯ ಕಲಾವಿದೆ ಡಾ.ವಸುಂಧರಾ ದೊರೆಸ್ವಾಮಿ ಅವರ ಈ ಕ್ಷೇತ್ರದ ಕಾಯಕ ನಿಜಕ್ಕೂ ಅದ್ಭುತ. ಕಳೆದ 35 ವರ್ಷಗಳಿಗೂ ಹೆಚ್ಚು ಕಾಲ ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಅಲ್ಲದೆ, ಅನೇಕ ಶಿಷ್ಯವೃಂದವನ್ನು ಹೊಂದಿದ್ದಾರೆ. ಈ ಶಾಸ್ತ್ರೀಯ ಕಲೆಗಳು ಇಂದಿಗೂ ಜೀವಂತ ಇರುವುದು ರಾಜರ ಕಾಲದಲ್ಲಿ ಆಶ್ರಯ ಸಿಕ್ಕಿದ್ದಕ್ಕೆ. ಅಂತೆಯೇ ಕಲೆ ಮತ್ತು ಸಂಸ್ಕೃತಿ ಮೂಲಕ ರಾಜರು ಸಾಂಸ್ಕೃತಿಕ ಕ್ಷೇತ್ರದಲ್ಲಿ ಮೈಸೂರಿನ ಹಿರಿಮೆಯನ್ನು ದೇಶ-ವಿದೇಶಗಳಲ್ಲಿ ಶಾಶ್ವತಗೊಳಿಸಿದ್ದಾರೆ. ಯುವಕರು ಕಲೆಯಲ್ಲಿ ತೊಡಗಿಸಿಕೊಂಡು ಅಭ್ಯಾಸ ಮಾಡಿದರೆ, ಅಂತಹ ಸಾಧಕರ ಸಾಧನೆ ಶಿಖರದೆತ್ತರಕ್ಕೆ ಸಾಗುತ್ತದೆ. ಹಾಗಾಗಿ ಕಲೆಗಳನ್ನು ಪ್ರತಿಯೊಬ್ಬರು ಒಲಿಸಿಕೊಳ್ಳಲು ಪ್ರಯತ್ನಿಸಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ದೇಶದ ಬೇರೆಬೇರೆ ರಾಜ್ಯಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಿ, ಸ್ಥಳೀಯ ಪ್ರತಿಭೆಗಳಿಗೆ ಅವಕಾಶ ದೊರೆಯುವಂತಾಗಬೇಕು. ನಟರಾಜ ಪರ್ಫಾರ್ಮಿಂಗ್ ಆರ್ಟ್ಸ್ ಸಂಸ್ಥೆಯ ಪದಾಧಿಕಾರಿಗಳ ಕಲಾಕ್ಷೇತ್ರದ ಸೇವೆ ನಿಜಕ್ಕೂ ಹೆಮ್ಮೆಯ ಸಂಗತಿ. ಅಲ್ಲದೆ, ಇಂದಿನ ವೇದಿಕೆಯಲ್ಲಿ ಹಿರಿಯ ಕಲಾವಿದೆ ಡಾ.ವಸುಂಧರಾ ದೊರೆಸ್ವಾಮಿ ಪ್ರಸ್ತುತಪಡಿಸುತ್ತಿರುವ ಭರತನಾಟ್ಯ ಪ್ರದರ್ಶನ ಅಪರಿಮಿತ ಎಂದರು.

ಕಲಾ ಪೋಷಕರಾದ ಮುಂಬೈನ ಶೇಷುಕುಮಾರಿ ಅವರು, ತಮ್ಮ ಪತಿ ಟಿ.ರಘು ಅವರ ಹೆಸರಿನಲ್ಲಿ ವಿದುಷಿ ಸಿಂಧು ಕಿರಣ್ ಅವರನ್ನು ಸನ್ಮಾನಿಸಲಾಯಿತು. ನಂತರ ಹಿರಿಯ ಕಲಾವಿದೆ ಡಾ.ವಸುಂಧರ ದೊರೆಸ್ವಾಮಿ ಅವರನ್ನು ಗೌರವಿಸಲಾಯಿತು. ವೇದಿಕೆ ಕಾರ್ಯಕ್ರಮದ ನಂತರ ವಿದುಷಿ ಡಾ.ವಸುಂಧರ ದೊರೆಸ್ವಾಮಿ ಅವರು ಮಹಾಭಾರತದ ದ್ರೌಪದಿ ಪಾತ್ರದ ಕುರಿತು ನೃತ್ಯರೂಪಕ ನಡೆಸಿಕೊಟ್ಟರು. ನಂತರ ಮೈಸೂರು ರುದ್ರ ನೃತ್ಯ ಯೋಗಶಾಲೆಯ ನಿರ್ದೇಶಕಿ ವಿದುಷಿ ಸಿಂಧು ಕಿರಣ್ ಅವರ ಒಡಿಸ್ಸಿ ನೃತ್ಯ ಪ್ರದರ್ಶಿಸಿ ಪ್ರೇಕ್ಷಕರ ಮನಗೆದ್ದರು.

ವೇದಿಕೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ಖ್ಯಾತ ಗಾಯಕ ವಿಜಯ್ ಪ್ರಕಾಶ್, ನೃತ್ಯಗಿರಿ ಪ್ರದರ್ಶಕ ಕಲೆಗಳ ಸಂಶೋಧನಾ ಕೇಂದ್ರದ ನಿರ್ದೇಶಕರಾದ ವಿದುಷಿ ಡಾ ಕೃಪಾ ಫಡಕೆ, ಮ್ಯಾನೇಜಿಂಗ್ ಟ್ರಸ್ಟಿ ವಿದುಷಿ ನಾಗಶ್ರೀ ಫಣೀಂದ್ರಕುಮಾರ್, ಕಾರ್ಯದರ್ಶಿ ಫಣೀಂದ್ರ ಕುಮಾರ್, ಶ್ರೀ ನಟರಾಜ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ ಅಧ್ಯಕ್ಷ ಎಂ.ಕೆ.ಬಾಲರಾಜು ಇನ್ನಿತರರಿದ್ದರು.

ಜ.30ರಂದು ಸಂಜೆ 6ಕ್ಕೆ ಕೇರಳದ ನೃತ್ಯಾಲಯ ಸ್ಕೂಲ್ ಫಾರ್ ಕ್ಲಾಸಿಕಲ್ ಡ್ಯಾನ್ಸ್ ಸಂಸ್ಥೆಯ ವಿದ್ವಾನ್ ಎನ್. ಶ್ರೀಕಾಂತ್, ವಿದುಷಿ ಅಶ್ವತಿ ವಿನಾಯರ್ ಭರತನಾಟ್ಯ ಪ್ರದರ್ಶನ ನೀಡಲಿದ್ದಾರೆ. ಸಂಜೆ 7.30ಕ್ಕೆ ಬೆಂಗಳೂರು ವಿದುಷಿ ನಿರುಪಮಾ ರಾಜೇಂದ್ರ ಮತ್ತು ವಿದ್ವಾನ್ ಟಿ.ಡಿ.ರಾಜೇಂದ್ರ ಶಿಷ್ಯರಾದ ವಿದುಷಿ ಅದಿತಿ ಅಶೋಕ್, ವಿದುಷಿ ಸ್ಫೂರ್ತಿ ಅಶೋಕ್ ಜೋಡಿ ಕಥಕ್ ನೃತ್ಯ ಪ್ರದರ್ಶನ ನೀಡಲಿದ್ದಾರೆ.

ಫೆ.3, 4ರಂದು ಅಂತಾರಾಷ್ಟ್ರೀಯ ಕಿರುಚಿತ್ರ, ಸಾಕ್ಷ್ಯಚಿತ್ರೋತ್ಸವ


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಚಿತ್ರೋತ್ಸವ ಕುರಿತು ಸಂಯೋಜಕ ಎಂ.ಆರ್.ಹರೀಶ್ ಮಾತನಾಡಿದರು.

ಮೈಸೂರು,ಜ.29(ಎಂಟಿವೈ)- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಫೆ.3 ಮತ್ತು 4ರಂದು 'ಪರಿದೃಶ್ಯ' ಅಂತರರಾಷ್ಟ್ರೀಯ ಕಿರುಚಿತ್ರ ಮತ್ತು ಸಾಕ್ಷ್ಯಚಿತ್ರೋತ್ಸವ ಆಯೋಜಿಸಲಾಗಿದೆ ಎಂದು ಚಿತ್ರೋತ್ಸವದ ಸಂಯೋಜಕ ಎಂ.ಆರ್.ಹರೀಶ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಸಿನಿಮಾ ಸೊಸೈಟಿ ಹಾಗೂ ಭಾರತೀಯ ಚಿತ್ರ ಸಾಧನದ ಸಂಯುಕ್ತಾಶ್ರಯದಲ್ಲಿ ಅಂತರರಾಷ್ಟ್ರೀಯ ಕಿರುಚಿತ್ರ ಮತ್ತು ಸಾಕ್ಷ್ಯಚಿತ್ರೋತ್ಸವ ಆಯೋಜಿಸಲಾಗಿದ್ದು, ಫೆ3ರಂದು ಬೆಳಗ್ಗೆ 10 ಗಂಟೆಗೆ ಹಿರಿಯ ರಂಗಕರ್ಮಿ ಪ್ರಕಾಶ್ ಬೆಳವಾಡಿ ಉದ್ಘಾಟಿಸಲಿದ್ದಾರೆ. ಈ ಸಂದರ್ಭದಲ್ಲಿ ನಟಿ ಹರಿಪ್ರಿಯಾ, ಮುಕ್ತ ಉಪ ಕುಲಪತಿ ಡಾ. ಶರಣಪ್ಪ ಹಲಸೆ ಹಾಗೂ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಈ ಚಿತ್ರೋತ್ಸವಕ್ಕಾಗಿ ಈಗಾಗಲೇ ಕಿರುಚಿತ್ರಗಳ ಸ್ಪರ್ಧೆ ನಡೆಸಲಾಗಿತ್ತು. ಈ ಸ್ಪರ್ಧೆಯಲ್ಲಿ 20 ದೇಶಗಳಿಂದ 300ಕ್ಕೂ ಹೆಚ್ಚು ಕಿರುಚಿತ್ರ ಮತ್ತು ಸಾಕ್ಷ್ಯಚಿತ್ರಗಳು ಪ್ರದರ್ಶನಗೊಂಡಿದ್ದವು. ಅವುಗಳಲ್ಲಿ ಆಯ್ಕೆಯಾದ ಅತ್ಯುತ್ತಮ ಕಿರುಚಿತ್ರ, ಸಾಕ್ಷ್ಯಚಿತ್ರಗಳನ್ನು ಚಿತ್ರೋತ್ಸವದಲ್ಲಿ ಪ್ರದರ್ಶಿಸಲಾಗುತ್ತಿದೆ. ಶನಿವಾರ ಮೂಕ ಮತ್ತು ಶ್ರವಣದೋಷವುಳ್ಳ ಮಕ್ಕಳಿಗಾಗಿ ವಿಶೇಷ ಮೂಕಿ ಚಿತ್ರ ಪ್ರದರ್ಶಿಸಲಾಗುವುದು. ಫೆ.4ರಂದು ಸಂಜೆ ನಡೆಯುವ ಸಮಾರೋಪ ಸಮಾರಂಭದಲ್ಲಿ ಹಿರಿಯ ನಿರ್ದೇಶಕ ಗಿರೀಶ್ ಕಾಸರವಳ್ಳಿ ಹಾಗೂ ಇನ್ನಿತರ ಗಣ್ಯರು ಪಾಲ್ಗೊಳ್ಳಲಿದ್ದಾರೆ. ಈ ಕಾರ್ಯಕ್ರಮದಲ್ಲಿ ವಿಜೇತ ಚಿತ್ರಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಚಿತ್ರೋತ್ಸವದ ಸಹ ಸಂಯೋಜಕರಾದ ಪದ್ಮಾವತಿ ಎಸ್. ಭಟ್ ಹಾಗೂ ಜಿ.ಆರ್. ಚೇತನ್ ಇದ್ದರು.

ಬೌದ್ಧ ಸಾಹಿತ್ಯದಲ್ಲಿ ವಿಮಲಕೀರ್ತಿಯ 'ನಿರ್ದೇಶ ಸೂತ್ರ' ಮಹತ್ವದ್ದು

ವಿಮರ್ಶಕ ಬಿ.ಮಹೇಶ್ ಹರವೆ



ಮೈಸೂರಿನಲ್ಲಿ ಭಾನುವಾರ ಕನ್ನಡ ಉಪನ್ಯಾಸಕರ ವೇದಿಕೆಯಿಂದ 'ವಿಮಲ ಕೀರ್ತಿಯ ನಿರ್ದೇಶ' ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಮೈಸೂರು,ಜ.29(ಪಿಎಂ)- ಬೌದ್ಧ ಸಾಹಿತ್ಯದಲ್ಲಿ ವಿಮಲಕೀರ್ತಿಯ 'ನಿರ್ದೇಶ ಸೂತ್ರ' ಮಹತ್ವ ಪಡೆದಿದ್ದು, ಅಂದು ಸಾಮಾನ್ಯ ಜನತೆಗೆ ಮಾತ್ರವಲ್ಲದೆ, ರಾಜ ಮಹಾರಾಜರಿಗೂ ಬುದ್ಧನ ಚಿಂತನೆಗಳನ್ನು ವಿಮಲಕೀರ್ತಿ ತಿಳಿಸಿಕೊಟ್ಟರು ಎಂದು ಚಿಂತಕ ಮತ್ತು ವಿಮರ್ಶಕ ಬಿ.ಮಹೇಶ್ ಹರವೆ ತಿಳಿಸಿದರು.

ಮೈಸೂರಿನ ಜಯಲಕ್ಷ್ಮೀಪುರಂನ ಸತ್ಯ ಸಾಯಿಬಾಬಾ ಕಾಲೇಜಿನ ಆವರಣದಲ್ಲಿ ಮೈಸೂರು ಜಿಲ್ಲೆ ಪದವಿಪೂರ್ವ ಶಿಕ್ಷಣ ಇಲಾಖೆಯ ಪದವಿಪೂರ್ವ ಕಾಲೇಜು ಕನ್ನಡ ಉಪನ್ಯಾಸಕರ ವೇದಿಕೆ ವತಿಯಿಂದ 'ವಿಮಲಕೀರ್ತಿಯ ನಿರ್ದೇಶ' ಕುರಿತು ಭಾನುವಾರ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿಮಲಕೀರ್ತಿಯು ಬುದ್ಧ ಗುರುವಿನ ಸಮಕಾಲೀನ. ವಿಮೋಚನಾ ಕೌಶಲ್ಯದ ಮೂಲಕ ಬೌದ್ಧ ಗುರುವಿನ ಚಿಂತನೆಗಳನ್ನು ಇವರು ಪಸರಿಸಿದರು. ಸಕಲ ಜೀವಿಗಳು ಸಂತಸದಿಂದ ಬದುಕುವಂತಹ ಜಗತ್ತು ಕಟ್ಟುವುದೇ ವಿಮಲಕೀರ್ತಿಯ ಮಹದುದ್ದೇಶ. ಪ್ರಕೃತಿಯಲ್ಲಿರುವ ಪ್ರತಿಯೊಂದು ಜೀವಿಯ ಸ್ವಾತಂತ್ರ್ಯಕ್ಕೆ ಧಕ್ಕೆಯಾಗದೆ, ಪರಾವಲಂಬಿಗಳು ಆಗದಂತೆ ಸಹಾನುಭೂತಿಯಿಂದ ಹೇಗಿರಬೇಕೆಂಬುದನ್ನು ವಿಮಲಕೀರ್ತಿ ಚಿಂತನೆಗಳಲ್ಲಿ ಕಾಣಬಹುದು ಎಂದರು.

ಕನ್ನಡದಲ್ಲಿ ನೋಡುವುದಾದರೆ ಅಲ್ಲಮ ಮತ್ತು ಬಸವಣ್ಣನವರ ವ್ಯಕ್ತಿತ್ವದ ಸಂಗಮದಂತೆ ವಿಮಲಕೀರ್ತಿ ಅವರನ್ನು ನೋಡಬಹುದು. ಕನ್ನಡದಲ್ಲಿ 'ಅಲ್ಲಮ ಹಾಗೂ ವಿಮಲಕೀರ್ತಿ'ಯ ಸ್ವಾಮ್ಯತೆಯನ್ನು ನಟರಾಜ್ ಭೂತಾಳ್ ಗುರುತಿಸಿದ್ದಾರೆ. ಇದನ್ನು ಹೊರತುಪಡಿಸಿ ಎಲ್ಲಿಯೂ ವಿಮಲಕೀರ್ತಿಯ ಬಗ್ಗೆ ಚರ್ಚೆಗಳು ಕಂಡುಬಂದಿಲ್ಲ ಎಂದು ತಿಳಿಸಿದರು. ಪ್ರಾಂಶುಪಾಲ ಬಾಲಸುಬ್ರಹ್ಮಣ್ಯಂ, ನಿವೃತ್ತ ಪ್ರಾಂಶುಪಾಲ ಮಾದಯ್ಯ, ಕನ್ನಡ ಉಪನ್ಯಾಸಕರ ವೇದಿಕೆ ಅಧ್ಯಕ್ಷ ನೀ.ಗೂ.ರಮೇಶ್, ಖಜಾಂಚಿ ಕೆಂಪಯ್ಯ, ಉಪಾಧ್ಯಕ್ಷರಾದ ಡಾ.ಮಾಲತಿ, ಡಾ.ಉಮೇಶ್, ಉಪನ್ಯಾಸಕರಾದ ಮಹದೇವು, ಸುನೀತ ಮತ್ತಿತರರು ಹಾಜರಿದ್ದರು.


ಇತ್ತೀಚೆಗೆ ಮೈಸೂರು ತಾಲೂಕು ಹುಯಿಲಾಳು ಗ್ರಾಮದ ಶ್ರೀ ಮನೆಮಂಚಮ್ಮ ಕೃಪಾಪೋಷಿತ ನಾಟಕ ಮಂಡಳಿಯವರಿಂದ ಮೈಸೂರಿನ ಪುರಭವನದಲ್ಲಿ 'ದಕ್ಷಯಜ್ಞ' ಅಥವಾ 'ಬೃಗುಮುನಿಯ ಗರ್ವಭಂಗ' ನಾಟಕದಲ್ಲಿ ದಕ್ಷಬ್ರಹ್ಮನ ಪಾತ್ರದಲ್ಲಿ ಅಭಿನಯಿಸಿದ ಹುಯಿಲಾಳು ರಾಮಸ್ವಾಮಿ ಅವರನ್ನು ಬೆಂಗಳೂರಿನ ಉದ್ಯಮಿ ಪಟೇಲ್ ಗಂಗರಾಜು ಅಭಿನಂದಿಸಿದರು. ಎಂ.ಎಲ್.ರವೀಶ್, ಶ್ರೀನಿವಾಸ್, ಚೆಟ್ಟಿಹುಂಡಿ ರಾಚಪ್ಪ.ಸಿ, ಕೋದಂಡರಾಮು, ಹನುಮಂತು, ಲೋಕೇಶ್ ಮಂಜುನಾಥ್ ಪ್ರಸಾದ್ ಇತರರನ್ನು ಚಿತ್ರದಲ್ಲಿ ಕಾಣಬಹುದು

ಮೈಸೂರು ಮೆಗಾಡೈರಿಯಲ್ಲಿ ಫೆ.3 ರಂದು 'ನಂದಿನಿ ಪಾಕ ಸ್ಪರ್ಧೆ'

ಮೈಸೂರು, ಜ.29(ಎಸ್‌ಪಿಎನ್)- ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟದ ಮೆಗಾ ಡೈರಿ ಆವರಣದಲ್ಲಿ ಫೆ.3ರಂದು ಬೆಳಗ್ಗೆ 10.30ಕ್ಕೆ ನಂದಿನಿ ಪನ್ನೀರ್ ಮತ್ತು ಖೋವಾ ಪದಾರ್ಥಗಳಿಂದ ಖಾದ್ಯಗಳನ್ನು ತಯಾರಿಸುವ ಸಂಬಂಧ 'ನಂದಿನಿ ಪಾಕ ಸ್ಪರ್ಧೆ' ಆಯೋಜಿಸಲಾಗಿದೆ. ಈ ಸ್ಪರ್ಧೆಯಲ್ಲಿ ಸುಮಾರು 30 ಮಹಿಳೆಯರಿಗೆ ಅವಕಾಶ ನಿಗದಿಗೊಳಿಸಲಾಗಿದೆ.

ಈ ಸ್ಪರ್ಧೆಯಲ್ಲಿ 'ನಂದಿನಿ ಖೋವಾ' ಮತ್ತು 'ಪನ್ನೀರ'ನ್ನು ಬಳಸಿ ವಿಶೇಷ ಖಾದ್ಯ ತಯಾರಿಸುವ ನಂದಿನಿ ಪಾಕ ಸ್ಪರ್ಧೆಯಲ್ಲಿ ನೋಂದಾಯಿಸಿಕೊಂಡ ಮೊದಲ 30 ಸ್ಪರ್ಧಾರ್ಥಿಗಳಿಗೆ ಅವಕಾಶ ಇರುತ್ತದೆ. ಈ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಮೊದಲ ಬಹುಮಾನ 10 ಸಾವಿರ, ಎರಡನೇ ಬಹುಮಾನ 7,500, ಮೂರನೇ ಬಹುಮಾನ 5 ಸಾವಿರ ಹಾಗೂ 5 ಸಮಾಧಾನಕರ ಬಹುಮಾನಗಳಿವೆ ಎಂದು ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ವ್ಯವಸ್ಥಾಪಕ(ಮಾರುಕಟ್ಟೆ)ರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ:8123139504 ಹಾಗೂ www.mymul.coop ವೆಬ್‌ಸೈಟ್ ಪರಿಶೀಲಿಸಬಹುದು.

ಬಿಡಿಎ ಅಧ್ಯಕ್ಷರಾಗಿ ಎನ್‌ಎ ಹ್ಯಾರಿಸ್ ಅಧಿಕಾರ ಸ್ವೀಕಾರ



ಬೆಂಗಳೂರು: ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ನೂತನ ಅಧ್ಯಕ್ಷರಾಗಿ ಶಾಂತಿನಗರ ಶಾಸಕ ಎನ್.ಎ.ಹ್ಯಾರಿಸ್ ಅಧಿಕಾರ ವಹಿಸಿಕೊಂಡಿದ್ದಾರೆ.

ನಿಗಮ ಮಂಡಳಿ ಅಧ್ಯಕ್ಷರ ಮೊದಲ ಪಟ್ಟಿಯಲ್ಲಿ ಹ್ಯಾರಿಸ್ ಆಯ್ಕೆ ಆಗಿದ್ದರು. ಒಟ್ಟು 36 ಶಾಸಕರಿಗೆ ವಿವಿಧ ನಿಗಮ-ಮಂಡಳಿಗಳಲ್ಲಿ ಸ್ಥಾನ ಸಿಕ್ಕಿದ್ದು ಬಿಡಿಎ ಕೇಂದ್ರ ಕಚೇರಿಯಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ಸಮ್ಮುಖದಲ್ಲಿ ಶಾಸಕ ಎನ್.ಎ. ಹ್ಯಾರಿಸ್ ಬಿಡಿಎ ನೂತನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು. ಶಾಸಕ ಜಮೀರ್ ಅಹ್ಮದ್ ಕೂಡ ಕಚೇರಿಗೆ ಆಗಮಿಸಿ ಶುಭ ಕೋರಿದರು.

ಬಿಡಿಎ ನೂತನ ಅಧ್ಯಕ್ಷರಾಗಿ ಎನ್.ಎ. ಹ್ಯಾರಿಸ್ ನೇಮಕಗೊಂಡ ಬಳಿಕ ಡಿಕೆ ಶಿವಕುಮಾರ್ ಅವರು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿದ್ದು ಶುಭ ಕೋರಿದ್ದಾರೆ.

ಬೆಂಗಳೂರು ನಗರದ ಬಗ್ಗೆ ನನಗೆ ಗೊತ್ತಿದೆ. ಈಗಾಗಲೇ ನಾಲ್ಕು ಬಾರಿ ಶಾಸಕನಾಗಿ ಕೆಲಸ ಮಾಡಿದ್ದೇನೆ. ಪಾರದರ್ಶಕತೆ ತರುವಲ್ಲಿ ಪ್ರಯತ್ನಿಸುತ್ತೇನೆ. ಬಿಡಿಎಯನ್ನು ಜನಸ್ನೇಹಿ ಮಾಡಲು ಯತ್ನಿಸುತ್ತೇನೆ. ಸಿಎಂ, ಡಿಸಿಎಂ, ಬಿಡಿಎ ಜನಸ್ನೇಹಿ ಮಾಡಿ ಎಂದಿದ್ದಾರೆ. ಹೊಸ ಲೇಔಟ್ ಬಗ್ಗೆಯೂ ಯೋಜನೆ ಇದೆ ಎಂದು ತಿಳಿಸಿದರು. ಶಾಂತಿನಗರ ಅಭಿವೃದ್ಧಿಯಾಗಿಲ್ಲ. ಈಗ ನಿಮ್ಮನ್ನು ಬಿಡಿಎ ಅಧ್ಯಕ್ಷರನ್ನಾಗಿ ಮಾಡಿರುವುದಕ್ಕೆ ವಿರೋಧ ವ್ಯಕ್ತವಾಗಿದೆ ಎಂಬ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಹ್ಯಾರಿಸ್, ರಾಜಕೀಯವಾಗಿ ಮಾತನಾಡಿದರೆ ನಾನು ರಾಜಕೀಯ ಮಾತನಾಡ್ತೇನೆ. ಬೆಂಗಳೂರು ಎಲ್ಲವೂ ಬಿಡಿಎನಲ್ಲಿ ಬರಲ್ಲ. ಎಲ್ಲರ ಸಲಹೆಯನ್ನ ತೆಗೆದುಕೊಂಡು ಕೆಲಸ ಮಾಡ್ತೇನೆ. ಬಿಡಿಎಯನ್ನ ಇನ್ನಷ್ಟು ಅಭಿವೃದ್ಧಿ ಮಾಡ್ತೇವೆ. ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಮುಂದಾಗುತ್ತೇವೆ ಎಂದರು.

ಯಾವುದೇ ಸಂಶೋಧನೆಯಾಗಲಿ ಉತ್ತಮ ಪ್ರಶ್ನೆಗಳ ವಿನ್ಯಾಸ ಅಗತ್ಯ

ಮೈಸೂರು ವಿವಿ ಕಾಲೇಜು ಸಿಡಿಸಿ ನಿರ್ದೇಶಕ ಪ್ರೊ.ಡಿ.ಆನಂದ್



ಮೈಸೂರಿನ ಶಾರದಾವಿಲಾಸ ಕಾಲೇಜಿನಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಕಾರ್ಯಾಗಾರದ ಸಮಾರೋಪದಲ್ಲಿ ಮೈಸೂರು ವಿವಿ ಕಾಲೇಜು ಸಿಡಿಸಿ ನಿರ್ದೇಶಕ ಪ್ರೊ.ಡಿ.ಆನಂದ್ ಮಾತನಾಡಿದರು.

ಮೈಸೂರು,ಜ.29(ಪಿಎಂ)- ಯಾವುದೇ ಕ್ಷೇತ್ರದ ಸಂಶೋಧನೆಯಾದರೂ ಉತ್ತಮ ಪ್ರಶ್ನೆಗಳ ವಿನ್ಯಾಸದಿಂದ ಮಾತ್ರ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಸೂತ್ರಗಳು ದೊರೆಯಲಿವೆ ಎಂದು ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಮಂಡಳಿ (ಸಿಡಿಸಿ) ನಿರ್ದೇಶಕ ಪ್ರೊ.ಡಿ.ಆನಂದ್ ಅಭಿಪ್ರಾಯಪಟ್ಟರು.

ಮೈಸೂರಿನ ಶಾರದಾವಿಲಾಸ ಕಾಲೇಜಿನ ಎವಿ ಹಾಲ್‌ನಲ್ಲಿ ಕಾಲೇಜಿನ ಸ್ನಾತಕೋತ್ತರ ಪದವಿಯ ರಸಾಯನಶಾಸ್ತ್ರ ವಿಭಾಗದ ವತಿಯಿಂದ 'ಸಂಶೋಧನಾ ವಿಧಾನದಲ್ಲಿ ಇತ್ತೀಚೆಗಿನ ಪ್ರವೃತ್ತಿಗಳು' ಕುರಿತು ಸೋಮವಾರ ಹಮ್ಮಿಕೊಂಡಿದ್ದ ಒಂದು ದಿನದ ರಾಷ್ಟ್ರೀಯ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಯಾವುದೇ ವಿಷಯದ ಬಗ್ಗೆ ಸಂಶೋಧನೆ ಮತ್ತು ಪ್ರಕಟಣೆಗಳನ್ನು ಮಾಡುವ ಕಷ್ಟವನ್ನು ಪ್ರಾಧ್ಯಾಪಕನಾಗಿರುವ ಹಿನ್ನೆಲೆಯಲ್ಲಿ ನಾನೂ ಅನುಭವಿಸಿದ್ದೇನೆ. ವಿದ್ಯಾರ್ಥಿ ಹಂತದಲ್ಲಿಯೇ ಸಂಶೋಧನಾ ಮನೋಭಾವ ಬೆಳೆಸುವುದು ಅಗತ್ಯ. ಇದರಿಂದ ಭವಿಷ್ಯದಲ್ಲಿ ಅವರು ವಿದ್ವಾಂಸರಾಗಲು ಸಾಧ್ಯವಾಗುತ್ತದೆ. ಆ ಮೂಲಕ ಅವರ ಆಯ್ಕೆಯ ಕ್ಷೇತ್ರದಲ್ಲಿ ಸಂಶೋಧನೆ ಕೈಗೊಳ್ಳಲು ಅನುಕೂಲವಾಗಲಿದೆ ಎಂದು ತಿಳಿಸಿದರು.

ಇಂತಹ ಕಾರ್ಯಾಗಾರವು ಸಂಶೋಧನೆ ಪ್ರಾಮುಖ್ಯತೆ ಬಗ್ಗೆ ವಿದ್ಯಾರ್ಥಿಗಳು ಆಲೋಚನೆ ಮಾಡಲು ಪ್ರೇರಣೆಯಾಗಲಿದೆ. ರಸಾಯನಶಾಸ್ತ್ರ ಅಥವಾ ಯಾವುದೇ ವೈಜ್ಞಾನಿಕ ಸಂಶೋಧನೆಯಲ್ಲಿ ಪ್ರಯೋಜನಕಾರಿಯಾದ ಹೊಸ ಫಲಿತಾಂಶ ಹೊರತರುವುದು ಅಗತ್ಯ. ಸಂಶೋಧನೆಯ ಫಲಿತಾಂಶವು ಈವರೆಗೆ ಉತ್ತರ ಕಂಡುಕೊಳ್ಳಲು ಸಾಧ್ಯವಾಗದ ಪ್ರಶ್ನೆಗಳಿಗೆ ಉತ್ತರ ದೊರೆಯುವಂತಿರಬೇಕು ಎಂದರು.

ಸಂಶೋಧನಾ ಪ್ರಕ್ರಿಯೆಯು ಆಳವಾದ ಅಧ್ಯಯನದ ಮೂಲಕ ತಿಳುವಳಿಕೆ ಮಟ್ಟ ಹೆಚ್ಚಿಸಲಿದೆ. ಮನುಕುಲದ ಜೀವನ ಮಟ್ಟದ ಸುಧಾರಣೆಗೆ ಸಂಶೋಧನಾ ಸಹಕಾರಿಯಾಗಬೇಕು. ಯಾವುದೇ ಸಂಶೋಧನೆಯಲ್ಲಿ ತೊಡಗಿಸಿಕೊಂಡರೂ ಅಂತಿಮವಾಗಿ ಉತ್ತಮ ವ್ಯಾಖ್ಯಾನದಿಂದ ಕೂಡಿರುವ ಪರಿಹಾರ ಸೂತ್ರ ದೊರೆಯಬೇಕೆಂದು ತಿಳಿಸಿದರು. ಮೈಸೂರು ವಿವಿ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ಹೆಚ್.ಡಿ.ರೇವಣಸಿದ್ದಪ್ಪ, ಶಾರದಾವಿಲಾಸ ಕಾಲೇಜು ಪ್ರಾಂಶುಪಾಲರಾದ ಡಾ.ಎಂ.ಡಿ.ವಿಹಾ, ಕಾರ್ಯಾಗಾರದ ಸಂಚಾಲಕ ಡಾ.ಆರ್. ಗುರುರಾಜ ಮತ್ತಿತರು ಹಾಜರಿದ್ದರು.

ಬಿಜೆಪಿ, ಜೆಡಿಎಸ್, ಹಿಂದೂ ಪರ ಸಂಘಟನೆಗಳ ಪಾದಯಾತ್ರೆ: ಕಲ್ಲು ತೂರಾಟ, ಲಾಠಿ ಪ್ರಹಾರ







ಒಂದನೇ ಪುಟದಿಂದ

ಲಾಠಿ ಚಾರ್ಜ್ ಮಾಡಿ, ರಾಷ್ಟ್ರಧ್ವಜವನ್ನು ಹಾರಿಸಲಾಗಿತ್ತು. ಹೋರಾಟ ಹತ್ತಿಕ್ಕಿದ್ದನ್ನು ಖಂಡಿಸಿ ಸೋಮವಾರ ಬೆಳಿಗ್ಗೆ ಕೆರಗೋಡಿನ ಧ್ವಜಸ್ತಂಭದ ಬಳಿಯಿಂದ ಮಂಡ್ಯ ನಗರದ ಜಿಲ್ಲಾಧಿಕಾರಿ ಕಚೇರಿ ವರೆಗೂ ಪಾದಯಾತ್ರೆ ನಡೆಸಲಾಯಿತು.

ಕೆರಗೋಡು ಗ್ರಾಮದ ಹನುಮ ದೇವಾಲಯದಲ್ಲಿ ವಿಶೇಷ ಪೂಜೆ ನಂತರ ಪಾದಯಾತ್ರೆ ಆರಂಭಗೊಂಡಿತು. ಶ್ರೀರಾಮನ ಭಾವಚಿತ್ರ ಹಿಡಿದು, ಕೇಸರಿ ಶಾಲು ಹಾಕಿಕೊಂಡು, ಕೇಸರಿ ಬಾವುಟಗಳನ್ನು ಹಿಡಿದು ಹೊರಟ ಸಾವಿರಾರು ಕಾರ್ಯಕರ್ತರು, ಜಿಲ್ಲಾಡಳಿತ, ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪಾದಯಾತ್ರೆಯು ಮಂಡ್ಯ– ಯಡಿಯೂರು ರಸ್ತೆ ಮುಖಾಂತರ ಕೆರಗೋಡು, ಹುಲಿವಾನ, ಕೊಮ್ಮೇರಹಳ್ಳಿ, ಸಾತನೂರು, ಚಿಕ್ಕಮಂಡ್ಯ, ಕಾಳಿಕಾಂಭ ದೇಗುಲ, ನಂದಾ ವೃತ್ತದ ಮಾರ್ಗವಾಗಿ ಸಾಗಿ ಬೆಂಗಳೂರು– ಮೈಸೂರು ಹೆದ್ದಾರಿ ಮೂಲಕ ನಗರದ ಡಿಸಿ ಕಚೇರಿ ತಲುಪಿತು.

ಪಾದಯಾತ್ರೆಯಲ್ಲಿ ಕೇಸರಿ ಕಹಳೆ ಮೊಳಗಿದರೆ ಪಾದಯಾತ್ರೆ ಸಂಪೂರ್ಣ ಕೇಸರಿಮಯವಾಗಿತ್ತು. ಜೈ ಶ್ರೀರಾಮ್, ಜೈ ಹನುಮಾನ್ ಘೋಷಣೆ ಕೂಗುತ್ತಾ ಹೆಜ್ಜೆ ಹಾಕಿದ ಪಾದಯಾತ್ರಿಗಳಿಗೆ ಬೆಂಬಲ ಸೂಚಿಸಿ, ಯುವಕರು ಬೈಕ್ ಜಾಥಾ ಮೂಲಕ ಸಾಗಿದರೆ ಮಾರ್ಗದ ಹಳ್ಳಿ ಹಳ್ಳಿಗಳಲ್ಲಿ ಗ್ರಾಮಸ್ಥರು ಪಾದಯಾತ್ರಿಗಳಿಗೆ ಕುಡಿಯಲು ನೀರು, ಮಜ್ಜಿಗೆ, ಪಾನಕ ನೀಡಿದರು. ಪಾದಯಾತ್ರೆ ಮಂಡ್ಯ ನಗರ ಪ್ರವೇಶ ಮಾಡಿದಾಗ ಕಾರಿಮನೆ ಗೇಟ್‌ನಲ್ಲಿ ಪಾದಯಾತ್ರಿಗಳಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಸ್ವಾಗತಿಸಲಾಯಿತು. ಹೆದ್ದಾರಿಯಲ್ಲಿ ಈಡುಗಾಯಿ ಒಡೆದು, ಕರ್ಪೂರ ಹಚ್ಚಿ ಪಾದಯಾತ್ರೆ ಮುಂದುವರೆಸಿದರು.

ದಾರಿಯುದ್ದಕ್ಕೂ ಶಾಸಕ ಗಣಿಗ ರವಿಕುಮಾರ್ ಫ್ಲೆಕ್ಸ್ ಹರಿದು ಆಕ್ರೋಶ: ದಾರಿಯುದ್ದಕ್ಕೂ ಹಾಕಿದ್ದ ಶಾಸಕ ಗಣಿಗ ರವಿಕುಮಾರ್ ಫ್ಲೆಕ್ಸ್‌ಗಳನ್ನು ಹರಿದು ಹಾಕಿದರೆ ಕೆಲವೆಡೆಯಂತು ಫ್ಲೆಕ್ಸ್‌ಗಳಿಗೆ ಕಲ್ಲು ತೂರಾಟ ಮಾಡಲಾಯಿತು. ಇತ್ತೀಚೆಗೆ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡಿದ್ದ ಶಾಸಕ ರವಿಕುಮಾರ್‌ಗೆ ಶುಭ ಕೋರುವ ಹಿನ್ನಲೆಯಲ್ಲಿ ತಾಲೂಕಿನ ಹಲವೆಡೆ ಬೃಹತ್ ಫ್ಲೆಕ್ಸ್‌ಗಳನ್ನು ಅಳವಡಿಸಲಾಗಿತ್ತು. ಸಾತನೂರು ಗ್ರಾಮದಲ್ಲಿ ಅಳವಡಿಸಿದ್ದ ಬೃಹತ್ ಫ್ಲೆಕ್ಸ್‌ಗಳನ್ನು ಹರಿದು ಆಕ್ರೋಶ ವ್ಯಕ್ತಪಡಿಸಿದ ಹಿಂದೂಪರ ಕಾರ್ಯಕರ್ತರು, ಕೆಲವು ಫ್ಲೆಕ್ಸ್‌ಗೆ ಬೆಂಕಿ ಹಚ್ಚಿದರು. ಬಳಿಕ ಪೊಲೀಸರು ಪ್ರತಿಭಟನಾಕಾರರನ್ನು ಚದುರಿಸಿ ಬೆಂಕಿ ನಂದಿಸಿದರು.

ಮಂಡ್ಯ ನಗರದ ಪ್ರವೇಶಿಸುತ್ತಿದ್ದಂತೆ ಹಿಂಸಾಚಾರಕ್ಕೆ ತಿರುಗಿದ ಪಾದಯಾತ್ರೆ: ಕೆರಗೋಡಿನಿಂದ ನಗರದ ಕಾಳಿಕಾಂಭ ದೇಗುಲದವರೆಗೆ ಯಶಸ್ವಿಯಾಗಿ ನಡೆದ ಪಾದಯಾತ್ರೆಯು ನಗರದ ನಂದಾ ವೃತ್ತದಲ್ಲಿ ಹಿಂಸಾಚಾರಕ್ಕೆ ತಿರುಗಿತು. ನಂದಾ ವೃತ್ತದ ಬಳಿ ಅಳವಡಿಸಲಾಗಿದ್ದ ಗಣಿಗ ರವಿಕುಮಾರ್ ಅವರ ಬೃಹತ್ ಫ್ಲೆಕ್ಸ್‌ಗೆ ವ್ಯಕ್ತಿಯೊಬ್ಬ ಕಲ್ಲು ಎಸೆದ ಪರಿಣಾಮ ಆ ಕಲ್ಲು ಮತ್ತೋರ್ವ ಕಾರ್ಯಕರ್ತನ ಮೇಲೆ ಬಿತ್ತು. ಆಗ ರಕ್ತಸ್ರಾವದಿಂದ ಕುಸಿದುಬಿದ್ದ ವ್ಯಕ್ತಿಯನ್ನು ಪಕ್ಕದಲ್ಲೇ ಇದ್ದ ಮಿಮ್ಸ್ ಆಸ್ಪತ್ರೆಗೆ ದಾಖಲು ಮಾಡಲಾಯಿತು. ನಂತರ ಮಹಾವೀರ ವೃತ್ತದ ಬಳಿ ಆಗಮಿಸಿದಾಗ ನಗರಸಭೆ ಆವರಣ ಹಾಗೂ ಪೇಟೆಬೀದಿ ಕಡೆಗೆ ತೆರಳುವ ಮಾರ್ಗದಲ್ಲಿ ಅಳವಡಿಸಲಾಗಿದ್ದ ಗಣಿಗ ರವಿ ಅವರ ಬೃಹತ್ ಫ್ಲೆಕ್ಸ್‌ಗಳನ್ನು ಹರಿದು ಹಾಕಿದರು. ಅಲ್ಲಿಯವರೆಗೂ ಸುಮ್ಮನಿದ್ದ ಪೊಲೀಸರು ನಗರಸಭೆ ಆವರಣದಲ್ಲಿ ಅಳವಡಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಸಚಿವ ಎನ್.ಚಲುವರಾಯಸ್ವಾಮಿ ಅವರಿದ್ದ ಯುವನಿಧಿ ಜಾಹೀರಾತಿನ ಫ್ಲೆಕ್ಸ್ ಹರಿಯುವಾಗ ಕಾರ್ಯಕರ್ತರ ಮೇಲೆ ಲಾಠಿ ಬೀಸಿದರು. ಲಾಠಿಚಾರ್ಜ್‌ಗೆ ಹೆದರಿ ನೂರಾರು ಮಂದಿ ಕಾರ್ಯಕರ್ತರು ಚೆಲ್ಲಾಪಿಲ್ಲಿಯಾಗಿ ಓಡಿ ಹೋದರೆ ಬೈಕ್‌ನಲ್ಲಿ ಬರುತ್ತಿದ್ದ ಕಾರ್ಯಕರ್ತರ ಪೈಕಿ ಕೆಲವರು ಬೈಕ್‌ನಿಂದ ಬಿದ್ದರು. ಕೆಲವರು ಸ್ಥಳದಲ್ಲೇ ಬೈಕ್ ಬಿಟ್ಟು ಓಡಿ ಹೋದರು. ಲಾಠಿಚಾರ್ಜ್ ವೇಳೆ ಧನಂಜಯ ಎಂಬ ಕಾರ್ಯಕರ್ತನ ತಲೆಗೆ ಪೆಟ್ಟಾದರೆ, ಮಹಿಳೆಯರೂ ಸೇರಿದಂತೆ ಕೆಲ ಕಾರ್ಯಕರ್ತರಿಗೆ ಸಣ್ಣಪುಟ್ಟ ಗಾಯಗಳಾಯಿತು.

ಆದರೂ ಸುಮ್ಮನಾಗದ ಕಾರ್ಯಕರ್ತರು ಸಂಜಯ ವೃತ್ತದಲ್ಲೂ ಗಣಿಗ ರವಿಕುಮಾರ್ ಫ್ಲೆಕ್ಸ್‌ಗಳನ್ನು ಮನಬಂದಂತೆ ಹರಿದರು. ಅಲ್ಲೂ ಸಹ ಪೊಲೀಸರು ಲಾಠಿ ಪ್ರಹಾರ ಮಾಡಿದರು. ನಂತರ ಬೆಂಗಳೂರು– ಮೈಸೂರು ಹೆದ್ದಾರಿಯಲ್ಲಿ ಅಳವಡಿಸಿದ್ದ ಶಾಸಕರ ಒಂದೊಂದು ಫ್ಲೆಕ್ಸ್‌ಗಳನ್ನು ಹುಡುಕಿ ಹುಡುಕಿ ಹರಿದು ಹಾಕಿದ ಕಾರ್ಯಕರ್ತರು, ಕುರುಬರ ಹಾಸ್ಟೆಲ್ ಬಳಿ ಅಳವಡಿಸಿದ್ದ ಸಿಎಂ ಸಿದ್ದರಾಮಯ್ಯ, ಶಾಸಕ ರವಿಕುಮಾರ್ ಸೇರಿದಂತೆ ಇನ್ನಿತರೆ ಫ್ಲೆಕ್ಸ್‌ಗಳನ್ನು ಹರಿದು, ಕಲ್ಲು ತೂರಿದರು. ಅಲ್ಲೂ ಪೊಲೀಸರು ಲಾಠಿ ಚಾರ್ಜ್ ನಡೆಸಿದರು. ಇನ್ನು ಕೆಲವೆಡೆ ಬೃಹತ್ ಫ್ಲೆಕ್ಸ್‌ಗಳಿಗೆ ಅಡ್ಡಲಾಗಿ ರಿಸರ್ವ್ ವ್ಯಾನ್‌ಗಳನ್ನು ಪೊಲೀಸರು ನಿಲ್ಲಿಸಿದ್ದರೂ ಕಾರ್ಯಕರ್ತರು ಬಿಡದೇ ಫ್ಲೆಕ್ಸ್‌ಗಳನ್ನು ಹರಿದು ಹಾಕಿದರು. ಅಂತಿಮವಾಗಿ ಪಾದಯಾತ್ರೆ ಮಂಡ್ಯ ನಗರದ ಡಿಸಿ ಕಚೇರಿ ತಲುಪಿ, ಅಲ್ಲಿ ಸಾವಿರಾರು ಕಾರ್ಯಕರ್ತರನ್ನುದ್ದೇಶಿಸಿ ಹಲವು ನಾಯಕರು ಬಹಿರಂಗ ಭಾಷಣ ಮಾಡಿದರು. ಬಳಿಕ ಜಿಲ್ಲಾಧಿಕಾರಿ ಡಾ.ಕುಮಾರ್ ಅವರಿಗೆ ಮನವಿ ಸಲ್ಲಿಸಿ, ಹೋರಾಟವನ್ನು ಮುಕ್ತಾಯಗೊಳಿಸಿದರು.

ಪಾದಯಾತ್ರೆಯಲ್ಲಿ ಹಲವು ನಾಯಕರು ಭಾಗಿ: ಕೆರಗೋಡಿನಿಂದ ಆರಂಭವಾದ ಪಾದಯಾತ್ರೆಯಲ್ಲಿ ಮಾಜಿ ಸಚಿವರಾದ ಸಿ.ಟಿ.ರವಿ, ಸಿ.ಎಸ್.ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಶಾಸಕರಾದ ಜನಾರ್ದನರೆಡ್ಡಿ, ಹೆಚ್.ಟಿ.ಮಂಜು, ಮಾಜಿ ಶಾಸಕರಾದ ಕೆ.ಸುರೇಶ್‌ಗೌಡ, ಡಾ.ಕೆ.ಅನ್ನದಾನಿ, ಕೆ.ಸಿ.ನಾರಾಯಣಗೌಡ, ಪ್ರೀತಮ್‌ಗೌಡ, ಮುಖಂಡರಾದ ಬಿ.ಆರ್.ರಾಮಚಂದ್ರ, ಎಂ.ಎಸ್.ರಘುನಂದನ್, ಡಿ.ರಮೇಶ್, ಸಿ.ಪಿ.ಉಮೇಶ್, ಡಾ.ಇಂದ್ರೇಶ್, ಮುನಿರಾಜು, ಚಂದಗಾಲು ಶಿವಣ್ಣ, ಸಚ್ಚಿದಾನಂದ, ಎಸ್.ಪಿ.ಸ್ವಾಮಿ, ಡಾ.ಸಿದ್ದರಾಮಯ್ಯ, ಕೆ.ಎಸ್.ನಂಜುಂಡೇಗೌಡ, ಅಶೋಕ್ ಜಯರಾಂ, ಲಕ್ಷ್ಮಿ ಅಶ್ವಿನ್ ಗೌಡ ಕೆಲ ಹೊತ್ತು ಹೆಜ್ಜೆ ಹಾಕಿ ಪಾದಯಾತ್ರಿಗಳನ್ನು ಹುರಿದುಂಬಿಸಿದರು.

ಕೆರಗೋಡಿನಲ್ಲಿ ಮುಂದುವರೆದ 144 ಸೆಕ್ಷನ್: ಭಾನುವಾರ ಬೆಳಿಗ್ಗೆಯಿಂದ ಕೆರಗೋಡು ಗ್ರಾಮದಲ್ಲಿ ಜಾರಿಯಲ್ಲಿರುವ 144 ಸೆಕ್ಷನ್ ಸೋಮವಾರವು ಮುಂದುವರೆಯಿತು. ಈ ಹಿನ್ನಲೆಯಲ್ಲಿ ಕೆರಗೋಡು ಗ್ರಾಮಸ್ಥರು ಸ್ವಯಂಪ್ರೇರಿತರಾಗಿ ಅಂಗಡಿ, ಮುಗ್ಗಟ್ಟುಗಳನ್ನು ಬಂದ್ ಮಾಡಿದ್ದರು. ಇಂದು ನಡೆಯಬೇಕಿದ್ದ ಸಂತೆ ಸಹ ರದ್ದಾಯಿತು. ಪಾದಯಾತ್ರೆ ವೇಳೆ ಅಹಿತಕರ ಘಟನೆ ನಡೆಯಬಾರದೆಂದು ಎಸ್ಪಿ ಎನ್.ಯತೀಶ್ ನೇತೃತ್ವದಲ್ಲಿ ಅಧಿಕ ಪೊಲೀಸರನ್ನು ರಕ್ಷಣೆಗೆಂದು ನಿಯೋಜಿಸಲಾಗಿತ್ತು.

ಕೆರಗೋಡು ಪಿಡಿಓ ಅಮಾನತು

ಮಂಡ್ಯ, ಜ.29– ಜಿ.ಪಂ. ಹಾಗೂ ತಾ.ಪಂ. ಪೂರ್ವಾನುಮತಿ ಇಲ್ಲದೇ ಸರ್ಕಾರಿ ಸ್ವತ್ತಿನಲ್ಲಿ ಖಾಸಗಿಯವರಿಗೆ ಧ್ವಜಸ್ತಂಭ ನಿರ್ಮಿಸಲು ನಿಯಮಬಾಹಿರವಾಗಿ ಅನುಮತಿ ನೀಡಿ ಸಂಘರ್ಷಕ್ಕೆ ಕಾರಣರಾಗಿರುವ ಆರೋಪದ ಮೇರೆಗೆ ಕೆರಗೋಡು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬಿ.ಎಂ.ಜೀವನ್ ಅವರನ್ನು ಅಮಾನತು ಮಾಡಲಾಗಿದೆ.

ಈ ಸಂಬಂಧ ಮಂಡ್ಯ ಜಿಲ್ಲಾ ಪಂಚಾಯತ್ ಸಿಇಓ ಶೇಕ್ ತನ್ವೀರ್ ಆಸೀಫ್, ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ಶ್ರೀ ಗೌರಿಶಂಕರ ಸೇವಾ ಟ್ರಸ್ಟ್ ಎಂಬ ಖಾಸಗಿ ಟ್ರಸ್ಟ್‌ಗೆ ಸರ್ಕಾರಿ ಸ್ವಾಮ್ಯದಲ್ಲಿರುವ ಜಾಗದಲ್ಲಿ ಧ್ವಜಸ್ತಂಭ ನಿರ್ಮಿಸಲು ನಿಯಮಬಾಹಿರವಾಗಿ ಅನುಮತಿ ನೀಡಿರುವುದು ಪಂಚಾಯತ್ ಕಾಯ್ದೆ ಪ್ರಕಾರ ಕಾನೂನು ಉಲ್ಲಂಘನೆಯಾಗಿದ್ದು, ಗ್ರಾಮ ಪಂಚಾಯ್ತಿಯ ಆಸ್ತಿಯನ್ನು ಗುತ್ತಿಗೆ, ಮಾರಾಟ ಅಥವಾ ವರ್ಗಾವಣೆ ಮಾಡುವಾಗ ಕಡ್ಡಾಯವಾಗಿ ಅನುಮತಿ ಪಡೆಯಲೇಬೇಕು. ಆದರೆ ಪಿಡಿಓ ಜೀವನ್ ಈ ಯಾವುದೇ ನಿಯಮಾವಳಿ ಪಾಲಿಸಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಜ.29ರಂದು ನಡೆದ ಕೆರಗೋಡು ಗ್ರಾ.ಪಂ. ಸಾಮಾನ್ಯ ಸಭೆಯಲ್ಲೂ ಈ ಅಂಶವನ್ನು ಗಮನಕ್ಕೆ ತರದೇ ಏಕಾಏಕಿ ಧಾರ್ಮಿಕ ಬಾವುಟ ಹಾರಿಸಲು ಅನುಮತಿ ಕೊಟ್ಟಿದ್ದು ನಿಯಮಬಾಹಿರ. ಸರ್ಕಾರಿ ಜಾಗದಲ್ಲಿ ಧ್ವಜಸ್ತಂಭ ನಿರ್ಮಿಸಲು ಅಧಿಕಾರ ವ್ಯಾಪ್ತಿ ಮೀರಿ ಅನುಮತಿ ನೀಡಿರುವುದಲ್ಲದೇ ರಾಷ್ಟ್ರಧ್ವಜ ಮಾತ್ರ ಹಾರಿಸಲು ಅನುಮತಿ ನೀಡಲಾಗಿದ್ದರೂ ಷರತ್ತನ್ನು ಟ್ರಸ್ಟ್ ಉಲ್ಲಂಘಿಸಿದಾಗ ಯಾವುದೇ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯ ತೋರಿರುವುದು ಅಕ್ಷಮ್ಯ ಅಪರಾಧ ಎಂದು ಹೇಳಿದ್ದಾರೆ.

ರಾಷ್ಟ್ರಧ್ವಜಕ್ಕೆ ಬದಲಾಗಿ ಹನುಮ ಧ್ವಜ ಹಾರಿಸಲು ಅವಕಾಶ ನೀಡಿ, ಹನುಮ ಧ್ವಜ ಹಾರಿದ ಮೇಲೆಯೂ ತಕ್ಷಣ ಕ್ರಮ ಕೈಗೊಳ್ಳದೇ ಜ.28ರಂದು ಧ್ವಜಸ್ತಂಭದ ಸ್ಥಳಕ್ಕೆ ಎಸ್ಪಿ, ಎಸಿ, ತಹಸೀಲ್ದಾರ್ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಭೇಟಿ ನೀಡಿದಾಗ ಸಂಭವಿಸಿದ ಪ್ರತಿಭಟನೆ, ಗೊಂದಲ, ಕಾನೂನು ಸುವ್ಯವಸ್ಥೆ ಹದಗೆಡಲು ಪಿಡಿಓ ನೇರ ಹೊಣೆ ಎಂದು ತಿಳಿಸಿದ್ದಾರೆ. ಈ ನಿಟ್ಟಿನಲ್ಲಿ ಈ ಎಲ್ಲಾ ಅವಾಂತರಕ್ಕೆ ಪಿಡಿಓ ಜೀವನ್ ಕರ್ತವ್ಯ ಲೋಪವೇ ಕಾರಣವಾಗಿದ್ದು, ತಕ್ಷಣವೇ ಜಾರಿಗೆ ಬರುವಂತೆ ಅವರನ್ನು ಸೇವೆಯಿಂದ ಅಮಾನತು ಮಾಡಿ ಇಲಾಖಾ ವಿಚಾರಣೆ ಕಾಯ್ದಿರಿಸಲಾಗಿದೆ ಎಂದು ಸಿಇಓ ಆಸೀಫ್ ತಿಳಿಸಿದ್ದಾರೆ.

ಕೆರಗೋಡಿನಲ್ಲಿ ನಿಷೇಧಾಜ್ಞೆ ತೆಗೆಯಿರಿ, ಅಶಾಂತಿಯುಂಟಾದರೆ ನಾನೇ ಜವಾಬ್ದಾರಿ

ಮಂಡ್ಯ,ಜ.29– ಕೆರಗೋಡು ಗ್ರಾಮದಲ್ಲಿ ಜಾರಿಯಾಗಿರುವ 144 ಸೆಕ್ಷನ್ ಕೂಡಲೇ ವಾಪಸ್ ಪಡೆಯಬೇಕು. ಒಂದು ವೇಳೆ ಮತ್ತೆ ಅಶಾಂತಿಯುಂಟಾದರೆ ಅದಕ್ಕೆ ನಾನು ಜವಾಬ್ದಾರಿ. ಶಾಂತಿ ನೆಲೆಸುವ ಬಗ್ಗೆ ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕು. ಜನರು ರೊಚ್ಚಿಗೆದ್ದರೆ ಯಾವ 144 ಸೆಕ್ಷನ್ ಉಳಿಯಲ್ಲ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದರು.

ಸೋಮವಾರ ನಗರದ ಡಿಸಿ ಕಚೇರಿ ಎದುರು ಕೇಸರಿ ಶಾಲು ಧರಿಸಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಅವರು, ಅಧಿಕಾರಿಗಳು ಹೆಚ್ಚಿನ ಪೊಲೀಸ್ ಸಿಬ್ಬಂದಿಗಳನ್ನು ತೆಗೆದುಕೊಂಡು ಹೋಗಿ ದೌರ್ಜನ್ಯ ನಡೆಸಿದ್ದಾರೆ. ಪ್ರತಿಯೊಂದು ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ಭಾವನೆಗಳನ್ನು ವ್ಯಕ್ತಪಡಿಸುವ ಕಾನೂನಿದೆ. ಈ ಎಲ್ಲಾ ಘಟನೆಗೆ ನೇರ ಹೊಣೆ ಜಿಲ್ಲಾಧಿಕಾರಿ. ಜಿಲ್ಲಾಧಿಕಾರಿಯನ್ನು ಮೊದಲು ವರ್ಗಾವಣೆ ಮಾಡಬೇಕು ಎಂದು ಒತ್ತಾಯಿಸಿದರು.

ಕೆರಗೋಡಿನ ಜನರ ಪರವಾಗಿ ರಾಜ್ಯದಲ್ಲಿ ಪ್ರತಿಭಟನೆ ನಡೆಯುತ್ತಿದೆ. ಹನುಮಂತನ ಕೆಣಕಿ ಉಳಿಯುವವರು ಯಾರೂ ಇಲ್ಲ. ರಾಜ್ಯದಲ್ಲಿ ಬರ



ಪರಿಸ್ಥಿತಿ ಇದೆ. ಅದನ್ನು ಸರಿಪಡಿಸಿ. ಕೆರಗೋಡು ಗ್ರಾಮದಲ್ಲಿ ನಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ನಡೆದಿರುವ ಘಟನೆಗೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಲಾಠಿಚಾರ್ಜ್ ಮಾಡುವ ಮೂಲಕ ಸರ್ಕಾರ ದೌರ್ಜನ್ಯ ಎಸಗಿದೆ. ನಿಮ್ಮ ನಡವಳಿಕೆಯಲ್ಲಿ ರಾವಣನ ಸಂಸ್ಕೃತಿ ಕಾಣುತ್ತಿದ್ದೇವೆ. ಜನ ವಿರೋಧಿ ಆಡಳಿತ ಮಾಡಲು ನಿಮಗೆ ಜನರು ಅಧಿಕಾರ ಕೊಟ್ಟಿದ್ದಾರಾ? ಎಂದು ಪ್ರಶ್ನಿಸಿದರು.

ಇದು ರಾಜಕಾರಣದ ಹೋರಾಟ ಅಲ್ಲ, ನಮ್ಮ ವೈಯಕ್ತಿಕ ಹೋರಾಟವೂ ಅಲ್ಲ, ಕೆರಗೋಡು ಗ್ರಾಮದ ಹನುಮನಿಗಾಗಿ ಹೋರಾಟ. ಸುಳ್ಳು ದಾಖಲೆ ಸೃಷ್ಟಿಸಿ ರಾಜ್ಯ ಸರ್ಕಾರ ರಾಜಕೀಯ ಮಾಡಿದ್ದು, ಅಧಿಕಾರಿಗಳನ್ನು ದುರುಪಯೋಗ ಮಾಡಿಕೊಂಡು ಈ ರೀತಿಯ ಕೆಲಸ ಮಾಡುತ್ತಿದ್ದಾರೆ. ನಿಮ್ಮ ಜೊತೆ ನಾವು ಇದ್ದೇವೆ, ಈ ಹೋರಾಟ ಇಲ್ಲಿಗೆ ನಿಲ್ಲಲ್ಲ. ನ್ಯಾಯ ಸಿಗುವವರೆಗೆ ನಾವು ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿದರು.

ಕೆರಗೋಡು ಗ್ರಾಮದಲ್ಲಿ ನಡೆದ ಘಟನೆಗೆ ಸಾಕಷ್ಟು ಬೆಂಬಲ ಸಿಕ್ಕಿದೆ. ಸರ್ಕಾರದ ವಿರುದ್ಧ ಇಂದು ಪ್ರತಿಭಟನೆ ನಡೆಯುತ್ತಿದ್ದು, ಹನುಮಂತನ ಸಂಸ್ಕೃತಿ ಬಗ್ಗೆ ಟೀಕೆ ಮಡುತ್ತಿರುವ ರಾಜ್ಯ ಸರ್ಕಾರಕ್ಕೆ ಬಿಜೆಪಿ–ಜೆಡಿಎಸ್ ಎಚ್ಚರಿಕೆ ಕೊಟ್ಟಿದೆ. ಕೆರಗೋಡು ಗ್ರಾಮದಲ್ಲಿ ಹನುಮ ಧ್ವಜ ಹಾರಿಸಿದ್ದಾರೆ. ಜ.22ರಂದು ದೇವಸ್ಥಾನದ ಉದ್ಘಾಟನೆಗೆ ಆಹ್ವಾನ ಇತ್ತು. ಅಯೋಧ್ಯೆಯಲ್ಲಿ ರಾಮನ ಪ್ರತಿಷ್ಠಾಪನೆ ಮಾಡಲಾದ ಕಾರಣ ಆ ಕಾರ್ಯಕ್ಕೆ ನಾನು ಹೋಗಿದ್ದೆ. ಧ್ವಜಸ್ತಂಭ ನಿರ್ಮಿಸಿ, ಹನುಮ ಧ್ವಜ ಹಾಕಿದ್ದಾರೆ. ಜಿಲ್ಲಾಡಳಿತದ ವೈಫಲ್ಯದಿಂದ ಇದು ನಡೆದಿದೆ. ಶಾಂತಿ ಸಭೆ ಮಾಡಿ ತೆರೆ ಎಳೆಯುವಂತೆ ಮಂಡ್ಯ ಡಿಸಿಗೆ ಹೇಳಿದ್ದೆ. ಆದರೆ ಜನರ ವಿರೋಧದ ನಡುವೆ ಹನುಮ ಧ್ವಜ ತೆಗೆದಿದ್ದಾರೆ. ಗೌರಿಶಂಕರ ಟ್ರಸ್ಟ್ ಅವರು ಹನುಮನ ಧ್ವಜ ಹಾರಿಸಲು ಗ್ರಾಪಂಗೆ ಮನವಿ ಕೊಟ್ಟಿದ್ದು, ಕೆರಗೋಡು ಗ್ರಾಪಂನವರು ಧ್ವಜ ಸ್ತಂಭ ಹಾಕಲು ಅನುಮತಿ ಕೊಟ್ಟಿದ್ದಾರೆ. ಇದರಲ್ಲಿ ಹನುಮ ಭಕ್ತರದ್ದು ತಪ್ಪೇನಿದೆ ಎಂದು ಪ್ರಶ್ನಿಸಿದರು.

ನಿಮಗಿಂತ ಹೆಚ್ಚು ಜವಾಬ್ದಾರಿ ರಾಷ್ಟ್ರಧ್ವಜದ ಬಗ್ಗೆ ನಮಗೆ ಇದೆ. ಸರ್ಕಾರ ಇದನ್ನ ಅರ್ಥ ಮಾಡಿಕೊಳ್ಳುತ್ತಿಲ್ಲ. ಶಾಂತಿಯಿಂದ ಇದ್ದ ಕೆರಗೋಡು ಗ್ರಾಮದಲ್ಲಿ ಅಶಾಂತಿ ಉಂಟಾಗಿದೆ. ಇದರಲ್ಲಿ ಸರ್ಕಾರದ ಉದ್ಧಟತನ ಎದ್ದು ಕಾಣುತ್ತಿದೆ. ಇಷ್ಟ ಬಂದ ಸಮಯದಲ್ಲಿ ರಾಷ್ಟ್ರಧ್ವಜ ಹಾರಿಸಿ ಜಿಲ್ಲಾಡಳಿತ ರಾಷ್ಟ್ರಧ್ವಜಕ್ಕೂ ಅಪಮಾನ ಮಾಡಿದೆ. ಇತ್ತ ಹನುಮ ಧ್ವಜ ತೆಗೆದು ಅದಕ್ಕೂ ಅಪಮಾನ ಮಾಡಿದ್ದು, ಇದಕ್ಕೆಲ್ಲಾ ಜಿಲ್ಲಾಧಿಕಾರಿ ಹೊಣೆ. ನೆನ್ನೆಯ ದಿನದ ಸರ್ಕಾರದ ನಡವಳಿಕೆ ಸರಿ ಇಲ್ಲ. ಅನುಮತಿ ಹಾಗೂ ಮುಚ್ಚಳಿಕೆ ಪತ್ರಗಳನ್ನು ಸರ್ಕಾರವೇ ಸೃಷ್ಟಿ ಮಾಡಿದೆ ಎಂದು ಕಿಡಿಕಾರಿದರು. ಸಿದ್ದರಾಮಯ್ಯನವರ ಹೆಸರಿನಲ್ಲಿ ಬರೀ ರಾಮ ಇದ್ದರೆ ಸಾಲದು, ರಾಮನ ಗುಣಗಳು, ಆದರ್ಶಗಳು ಇರಬೇಕು ಎಂದು ಕುಮಾರಸ್ವಾಮಿ ಇದೇ ವೇಳೆ ಮುಖ್ಯಮಂತ್ರಿಗಳಿಗೆ ಮಾತಿನಲ್ಲಿ ತಿವಿದರು.

ಮೂವರು ಪೊಲೀಸರು ಸೇರಿ 30ಕ್ಕೂ ಅಧಿಕ ಮಂದಿಗೆ ಗಾಯ

ಈವರೆಗೆ ಎರಡೂ ಗುಂಪಿನ 25 ಮಂದಿಯನ್ನು ವಶಕ್ಕೆ ಪಡೆದಿದ್ದಾರೆ.

ವಿವರ: ಹಲ್ಲರೆ ಗ್ರಾಮದ ಹುರಾ ರಸ್ತೆಗೆ ಡಾ.ಬಿ.ಆರ್.ಅಂಬೇಡ್ಕರ್ ಹೆಸರು ನಾಮಕರಣ ಮಾಡಿ ಅವರ ನಾಮಫಲಕ ಅಳವಡಿಸಬೇಕೆಂದು ಒಂದು ಗುಂಪು ಕೆಲ ದಿನಗಳ ಹಿಂದೆ ಹಲ್ಲರೆ ಗ್ರಾಮ ಪಂಚಾಯ್ತಿಗೆ ಮನವಿ ಸಲ್ಲಿಸಿದ್ದು, ಅಂಬೇಡ್ಕರ್ ನಾಮಫಲಕ ಅಳವಡಿಸಲು ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಮಹೇಶ್ ಅವರು ಅನುಮತಿ ನೀಡಿದ್ದರು ಎಂದು ಹೇಳಲಾಗಿದೆ.

ವಾರದ ಹಿಂದೆ ಅಂಬೇಡ್ಕರ್ ನಾಮಫಲಕ ಅಳವಡಿಸಲು ಒಂದು ಗುಂಪು ಪ್ರಯತ್ನಿಸಿದಾಗ ಮತ್ತೊಂದು ಗುಂಪು ವಿರೋಧಿಸಿದ ಹಿನ್ನೆಲೆಯಲ್ಲಿ ಪ್ರಕರಣ ಪೊಲೀಸ್ ಠಾಣೆ ಮೆಟ್ಟಿಲೇರಿತ್ತು ಎನ್ನಲಾಗಿದ್ದು, ಪೊಲೀಸರು ಗ್ರಾಮದಲ್ಲಿ ಎಲ್ಲರೂ ಸೇರಿ ಮಾತನಾಡಿಕೊಂಡು ಒಂದು ನಿರ್ಧಾರಕ್ಕೆ ಬನ್ನಿ ಎಂದು ಹೇಳಿ ಕಳುಹಿಸಿದರಂತೆ. ಇದೇ ವಿಚಾರವಾಗಿ ನಿನ್ನೆಯೂ ಮಾತಿನ ಚಕಮಕಿ ನಡೆದಿದ್ದು, ಈ ಹಿನ್ನೆಲೆಯಲ್ಲಿ ನಂಜನಗೂಡು ಗ್ರಾಮಾಂತರ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಗೋಪಾಲಕೃಷ್ಣ ಅವರು ಇಬ್ಬರು ಸಿಬ್ಬಂದಿಯೊಂದಿಗೆ ಗ್ರಾಮದಲ್ಲೇ ಮೊಕ್ಕಾಂ ಹೂಡಿದ್ದರು. ಈ ವಿಚಾರವಾಗಿ ತೀರ್ಮಾನ ಕೈಗೊಳ್ಳಲು ಇಂದು ಬೆಳಗ್ಗೆ ಗ್ರಾಮದ ಎಲ್ಲಾ ಮುಖಂಡರು ಸಭೆ ಸೇರಿದ್ದರು. ಆದರೆ, 2 ಗುಂಪುಗಳ ಬಿಗಿ ಪಟ್ಟಿನಿಂದಾಗಿ ಯಾವುದೇ ನಿರ್ಧಾರ ಕೈಗೊಳ್ಳಲು ಸಾಧ್ಯವಾಗಿಲ್ಲ ಎಂದು ಹೇಳಲಾಗಿದೆ.

ಇಂದು ಸಂಜೆ 7ಗಂಟೆ ಸುಮಾರಿನಲ್ಲಿ ಹಠಾತ್ತನೇ ಎರಡೂ ಗುಂಪುಗಳು ಪರಸ್ಪರ ಕಲ್ಲು ಮತ್ತು ಬಾಟಲಿ ತೂರಾಟ ನಡೆಸಿವೆ. ಈ ವೇಳೆ ಸ್ಥಳಕ್ಕೆ ಆಗಮಿಸಿದ್ದ ಸರ್ಕಲ್ ಇನ್ಸ್‌ಪೆಕ್ಟರ್ ಸುನಿಲ್, ಸಬ್ ಇನ್ಸ್‌ಪೆಕ್ಟರ್ ಗೋಪಾಲಕೃಷ್ಣ ಹಾಗೂ ಓರ್ವ ಸಿಬ್ಬಂದಿ ಕಲ್ಲು ತೂರಾಟದಲ್ಲಿ ಗಾಯಗೊಂಡಿದ್ದಾರೆ. ಎರಡೂ ಗುಂಪಿನ 30ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದು, 20ಕ್ಕೂ ಹೆಚ್ಚು ದ್ವಿಚಕ್ರ ವಾಹನಗಳು ಜಖಂಗೊಂಡಿವೆ. ಹಲವಾರು ಬೀದಿ ನಲ್ಲಿಗಳನ್ನು ಕಿತ್ತು ಹಾಕಲಾಗಿದೆ. ಕೆಲವು ಮನೆಗಳಿಗೂ ಕಲ್ಲು ತೂರಾಟದಿಂದ ಹಾನಿಯಾಗಿವೆ. ವಿಷಯ ತಿಳಿಯುತ್ತಿದ್ದಂತೆಯೇ ಶಸಸ್ತ್ರ ಮೀಸಲು ಪಡೆಯೊಂದಿಗೆ ಸುಮಾರು 300ಕ್ಕೂ ಹೆಚ್ಚು ಪೊಲೀಸರೊಂದಿಗೆ ಜಿಲ್ಲಾ ಎಸ್ಪಿ ಸೀಮಾ ಲಾಟ್ಕರ್ ಹಾಗೂ ಇನ್ನಿತರ ಅಧಿಕಾರಿಗಳು ಗ್ರಾಮಕ್ಕೆ ದೌಡಾಯಿಸಿದರು. ಆಂಬುಲೆನ್ಸ್‌ಗಳನ್ನು ಕರೆಸಿಕೊಂಡು ಗಾಯಾಳುಗಳನ್ನು ನಂಜನಗೂಡು ಸರ್ಕಾರಿ ಆಸ್ಪತ್ರೆಗೆ ರವಾನಿಸಿದರು. ಸಬ್‌ಇನ್ಸ್‌ಪೆಕ್ಟರ್ ಗೋಪಾಲಕೃಷ್ಣ ಅವರ ತಲೆಗೆ ತೀವ್ರ ಪೆಟ್ಟಾಗಿದ್ದು, ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ.

ಗಾಯಗೊಂಡಿರುವ ಗ್ರಾಮಸ್ಥರಲ್ಲಿ ಸುಮಾರು 8 ಮಂದಿಯನ್ನು ಮೈಸೂರಿನ ಕೆಆರ್ ಆಸ್ಪತ್ರೆಗೆ ರವಾನಿಸಲಾಗಿದೆ. ಗ್ರಾಮದಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದ್ದು, ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ. ಘಟನೆಯಲ್ಲಿ ಮೂವರು ಪೊಲೀಸರು ಗಾಯಗೊಂಡಿದ್ದು, ಈವರೆಗೆ 25 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಜಿಲ್ಲಾ ಎಸ್ಪಿ ಸೀಮಾ ಲಾಟ್ಕರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಬಾವುಟ ಹಾರಿಸೋಕೆ ನನ್ನ ವಿರೋಧ ಇಲ್ಲ, ಚುನಾವಣೆ ಹತ್ತಿರ ಬಂದಾಗ ಜನರಿಗೆ ಕುಮ್ಮಕ್ಕು ನೀಡಲು ಬಿಜೆಪಿ ಯತ್ನ

ಮಂಡ್ಯ: ಜಿಲ್ಲೆಯ ಕೆರಗೋಡು



ಗ್ರಾಮದ ಸರ್ಕಾರಿ ಜಾಗದಲ್ಲಿ ಅಳವಡಿಸಲಾಗಿದ್ದ ಹನುಮ ಧ್ವಜ ಕೆಳಗಿಳಿಸಿ, ರಾಷ್ಟ್ರಧ್ವಜ ಹಾರಿಸಿದ ತಾಲೂಕು ಅಧಿಕಾರಿಗಳ ಕ್ರಮ ಭಾರಿ ವಿವಾದಕ್ಕೆ ಕಾರಣವಾಗಿದ್ದು, ಮಂಡ್ಯದಲ್ಲಿ ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿದೆ.

ಪರಿಸ್ಥಿತಿ ಉದ್ವಿಗ್ನಗೊಂಡಿರುವ ಹಿನ್ನೆಲೆಯಲ್ಲಿ ಕೆರಗೋಡು ಗ್ರಾಮದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಈ ಮಧ್ಯೆ ಘಟನೆ ಖಂಡಿಸಿ ಇಂದು ಕೆರಗೋಡು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಬಿಜೆಪಿ ಪ್ರತಿಭಟನೆ ನಡೆಸುತ್ತಿದ್ದು, ಪೊಲೀಸರು ಹಲವರನ್ನು ಬಂಧಿಸಿದ್ದಾರೆ. ಮಂಡ್ಯ ಪ್ರತಿಭಟನೆ ಬಗ್ಗೆ ಇಂದು ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ, ಬಿಜೆಪಿ–ಜೆಡಿಎಸ್‌ನವರು ಜನರನ್ನು ಪ್ರಚೋದಿಸುತ್ತಿದ್ದಾರೆ. ಯಾವ ಉದ್ದೇಶಕ್ಕೆ ಜನರನ್ನು ಪ್ರಚೋದಿಸುತ್ತಿದ್ದಾರೆ ಎಂದು ಕೇಳಿದರು.

ರಾಷ್ಟ್ರಧ್ವಜ, ತ್ರಿವರ್ಣ ಧ್ವಜ ಹಾರಿಸಲು ಅನುಮತಿ: ಚುನಾವಣೆ ಹತ್ತಿರ ಬರುತ್ತಿರುವಾಗ ಅನಗತ್ಯವಾಗಿ ಬಿಜೆಪಿಯವರು ಪ್ರತಿಭಟನೆ ಮಾಡುತ್ತಿದ್ದಾರೆ. ನಮಗೆ ಯಾವ ಅಜೆಂಡಾಕ್ಕೂ ವಿರೋಧ ಇಲ್ಲ. ಬಿಜೆಪಿಯವರೇ ಇದನ್ನೆಲ್ಲಾ ಅನಗತ್ಯವಾಗಿ ಸೃಷ್ಟಿ ಮಾಡುತ್ತಿರುವುದು. ರಾಷ್ಟ್ರಧ್ವಜ ಮತ್ತು ಕನ್ನಡ ಬಾವುಟ ಹಾರಿಸುವುದಾಗಿ ಅನುಮತಿ ಪಡೆದುಕೊಂಡಿದ್ದರು. ಯಾವುದಕ್ಕೆ ಅನುಮತಿ ಪಡೆದುಕೊಂಡಿದ್ದಾರೋ ಆ ಬಾವುಟ ಹಾರಿಸಬೇಕು ಅಲ್ಲವೇ? ಎಂದು ಸಿಎಂ ಪ್ರಶ್ನೆ ಮಾಡಿದರು. ಸಿದ್ದರಾಮಯ್ಯ ಹಿಂದೂ ವಿರೋಧಿ ಎಂಬ ಬಿಜೆಪಿ ಆರೋಪಕ್ಕೆ ತಿರುಗೇಟು ನೀಡಿದ ಸಿಎಂ, ಅವರಿಗೆ ನನ್ನ ಮೇಲೆ ಬೇರೆ ಏನು ಹೇಳಲು ಇಲ್ಲವಲ್ಲ ಅದಕ್ಕೆ ಹಿಂದೂ ವಿರೋಧಿ ಎಂದು ಹೇಳುತ್ತಿದ್ದಾರೆ, ನಾನು ಎಲ್ಲಾ ಜನರನ್ನು ಪ್ರೀತಿಸುವವನು ಎಂದರು.

ಸಹಬಾಳ್ವೆ ಮತ್ತು ಸಹಿಷ್ಣುತೆ: I am a Hindu but I love all people, From all religions. ಜಾತ್ಯತೀತತೆ ಎಂದರೆ ಸಹಬಾಳ್ವೆ ಮತ್ತು ಸಹಿಷ್ಣುತೆ ಎಂದರ್ಥ. ನಾನು ಅದರಲ್ಲಿ ನಂಬಿಕೆ ಇಟ್ಟುಕೊಂಡಿದ್ದೇನೆ ಎಂದು ಹೇಳಿದರು.

ರಸ್ತೆಯಲ್ಲಿ ಕಾರು ಡಿಕ್ಕಿ ಹೊಡೆದು ಹುಲಿ ಸಾವು

ಕಾರೊಳಗೆ ಏರ್ ಬ್ಯಾಗ್ ತೆರೆದುಕೊಂಡಿದ್ದರಿಂದ ಪ್ರಯಾಣಿಕರಿಗೆ ಯಾವುದೇ ತೊಂದರೆಯಾಗಿಲ್ಲ. ಘಟನೆ ನಂತರ ಕಾರು ಚಾಲಕ ಸೇರಿದಂತೆ ಕಾರಿನಲ್ಲಿದ್ದವರು ಪರಾರಿಯಾಗಿದ್ದಾರೆ.

ಟಿ–6 ಸಂಖ್ಯೆ ಹೊಂದಿದ್ದ ಹುಲಿ: ಮೈಸೂರು ಅರಣ್ಯ ಇಲಾಖೆ ವ್ಯಾಪ್ತಿಗೆ ಬರುವ ಚಿಕ್ಕನಹಳ್ಳಿ ಮೀಸಲು ಅರಣ್ಯ ಪ್ರದೇಶದಲ್ಲಿದ್ದ ಹೆಣ್ಣು ಹುಲಿ ಮೂರು ಹೆಣ್ಣು, ಒಂದು ಗಂಡು ಸೇರಿ ನಾಲ್ಕು ಮರಿಗಳಿಗೆ ಜನ್ಮ ನೀಡಿತ್ತು. ಗಂಡು ಮರಿಗೆ ಟಿ–6, ಉಳಿದ ಮೂರು ಹೆಣ್ಣು ಮರಿಗಳಿಗೆ ಕ್ರಮವಾಗಿ ಟಿ–7, ಟಿ–8 ಹಾಗೂ ಟಿ–9 ಸಂಖ್ಯೆಯನ್ನು ಅರಣ್ಯ ಇಲಾಖೆ ನೀಡಿತ್ತು. ಕಳೆದ ರಾತ್ರಿ ಮೃತಪಟ್ಟ ಗಂಡು ಹುಲಿಯೇ ಟಿ–6 ಸಂಖ್ಯೆ ಹುಲಿಯಾಗಿದ್ದು, ಇದು ಚಿಕ್ಕನಹಳ್ಳಿ ಸೇರಿದಂತೆ ಕೆಲವೆಡೆ ಅರಣ್ಯ ಇಲಾಖೆ ಅಳವಡಿಸಿದ್ದ ಕ್ಯಾಮರಾ ಟ್ರಾಪ್‌ಗೆ ಸೆರೆ ಸಿಕ್ಕಿತ್ತು.

ಒಳ ಗಾಯ: ಕಾರು ಡಿಕ್ಕಿ ಹೊಡೆದಾಗ ಹುಲಿಗೆ ಸಣ್ಣ ಗಾಯವೂ ಆಗಿರಲಿಲ್ಲ. ದೇಹದ ಮೇಲೆ ರಕ್ತದ ಕಲೆಗಳು ಕಂಡು ಬರಲಿಲ್ಲ. ಮರಣೋತ್ತರ ಪರೀಕ್ಷೆ ವೇಳೆ ಹುಲಿ ದೇಹದೊಳಗೆ ಗಂಭೀರವಾದ ಪೆಟ್ಟು ಬಿದ್ದಿದ್ದು, ಕೆಲವು ಅಂಗಾಂಗಗಳು ಛಿದ್ರಗೊಂಡಿರುವುದು ಕಂಡು ಬಂದಿದ್ದು, ಇದರಿಂದ ಹುಲಿ ಕೆಲವೇ ಕ್ಷಣದಲ್ಲಿ ಮೃತಪಟ್ಟಿರುವುದು ಖಚಿತವಾಗಿದೆ.

ಆಕರ್ಷಕ ಪಟ್ಟೆ: ಮೃತಪಟ್ಟ ಹುಲಿ ಮೈಮೇಲಿನ ಪಟ್ಟೆ ವಿಭಿನ್ನವಾಗಿತ್ತು. ಸಾಮಾನ್ಯವಾಗಿ ಹುಲಿಗಳ ಮೈಮೇಲಿನ ಪಟ್ಟೆ ಹೊಂದಿಕೊಂಡಂತೆ ಇರುತ್ತವೆ. ಆದರೆ, ಟಿ–6 ಹುಲಿಗೆ ಪಟ್ಟೆಯಿಂದ ಪಟ್ಟೆಗೆ ಹೆಚ್ಚಿನ ಅಂತರ ಇದ್ದು, ನೋಡಲು ಆಕರ್ಷಕವಾಗಿತ್ತು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಮರಣೋತ್ತರ ಪರೀಕ್ಷೆ: ಅಪಘಾತದಲ್ಲಿ ಬಲಿಯಾದ ಹುಲಿ ಕಳೇಬರವನ್ನು ಕೂರ್ಗಳ್ಳಿಯಲ್ಲಿರುವ ಮೃಗಾಲಯ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿತ್ತು. ಇಂದು ಮಧ್ಯಾಹ್ನ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ನಿಯಮಾನುಸಾರ ಬಂಡೀಪುರದ ಪಶುವೈದ್ಯ ಡಾ.ಮಿರ್ಜಾ ವಾಸಿಂ, ಮೈಸೂರು ಪಶುವೈದ್ಯ ಡಾ.ಮುಜೀಬ್ ರೆಹಮಾನ್ ಅವರಿಂದ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಬಳಿಕ ಎಸ್‌ಓಪಿಯಂತೆ ಮೃತದೇಹವನ್ನು ಅಂತ್ಯಕ್ರಿಯೆ ನಡೆಸಲಾಯಿತು. ಈ ವೇಳೆ ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ, ಎಸಿಎಫ್ ಲಕ್ಷ್ಮೀಕಾಂತ್, ಆರ್‌ಎಫ್‌ಓ ಕೆ.ಸುರೇಂದ್ರ ಹಾಗೂ ಎನ್‌ಟಿಸಿಎ ಪ್ರತಿನಿಧಿ ಕೃತಿಕಾ ಆಲನಹಳ್ಳಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕಾರು ವಶ, ಪ್ರಕರಣ ದಾಖಲು: ಪ್ರಕರಣಕ್ಕೆ ಸಂಬಂಧಿಸಿದಂತೆ ಅಪಘಾತಕ್ಕೆ ಒಳಗಾದ ಕಾರನ್ನು ಅರಣ್ಯ ಇಲಾಖೆ ವಶಕ್ಕೆ ಪಡೆದಿದೆ. ಕಾರು ಚಾಮರಾಜನಗರದ ಮೂಲದ ಮಹಿಳೆಯೊಬ್ಬರ ಹೆಸರಿನಲ್ಲಿ ನೋಂದಣಿಯಾಗಿದೆ. ಅಲ್ಲದೆ, ಅದು ಟ್ಯಾಕ್ಸಿ ಆಗಿದ್ದರಿಂದ ಆ ಕಾರನ್ನು ಯಾರು ಚಾಲನೆ ಮಾಡುತ್ತಿದ್ದರು ಎಂಬ ಬಗ್ಗೆ ತನಿಖೆ ಆರಂಭಿಸಲಾಗಿದೆ.

ಹುಲಿ ಬಗ್ಗೆ ಜಾಗೃತಿ: ಹುಲಿ ಸಂಚಾರದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಮುಂಜಾಗ್ರತಾ ಕ್ರಮವಾಗಿ ಗಸ್ತು ವ್ಯವಸ್ಥೆ ಕಲ್ಪಿಸಿತ್ತು. ಜನರಲ್ಲಿ ಜಾಗೃತಿ ಮೂಡಿಸಲು ಪ್ರಚಾರ, ಕರಪತ್ರಗಳನ್ನು ವಿತರಿಸಲಾಗಿತ್ತು. ವೈಲ್ಡ್‌ಲೈಫ್ ಅಡ್ವಾನ್ಸ್ ಅಲರ್ಟ್ ಸಿಸ್ಟಂ ಮೂಲಕ ತುರ್ತು ಸಂದೇಶ ಕಳುಹಿಸುವ ಮೂಲಕ ಸಾರ್ವಜನಿಕರನ್ನು ಎಚ್ಚರಿಸಿ ಜಾಗೃತಿ ಮೂಡಿಸಲಾಗುತ್ತಿತ್ತು ಎಂದು ಸಿಎಫ್ ಡಾ.ಮಾಲತಿ ಪ್ರಿಯಾ ತಿಳಿಸಿದ್ದಾರೆ.

ಚಿರತೆ ಮರಿ ಬಲಿ

ವಾಹನ ಡಿಕ್ಕಿ ಹೊಡೆದ ರಭಸಕ್ಕೆ ಚಿರತೆ ಮರಿ ಹೊಟ್ಟೆ ಭಾಗದಲ್ಲಿ ತೀವ್ರತರನಾದ ಗಾಯವಾಗಿ ಸ್ಥಳದಲ್ಲೇ ಮೃತಪಟ್ಟಿದೆ. ಮೈಸೂರು– ಹುಣಸೂರು ಮುಖ್ಯ ರಸ್ತೆಯ ಬಿಳಿಕೆರೆ ಸಮೀಪದ ಅರಬ್ಬೀತಿಟ್ಟು ಬಳಿ ಡಿ.30ರಂದು ಚಿರತೆಯೊಂದು ಅಪರಿಚಿತ ವಾಹನ ಡಿಕ್ಕಿ ಹೊಡೆದು ಮೃತಪಟ್ಟಿತ್ತು. ಇದೀಗ ಒಂದು ತಿಂಗಳ ಅವಧಿಯಲ್ಲೇ ಮತ್ತೊಂದು ಚಿರತೆ ಅಪರಿಚಿತ ವಾಹನಕ್ಕೆ ಬಲಿಯಾಗಿರುವುದು ವಿಪರ್ಯಾಸ. ಸ್ಥಳಕ್ಕೆ ಡಿಸಿಎಫ್ ಸೀಮಾ, ಎಸಿಎಫ್ ಮಹಾದೇವ ಹಾಗೂ ಆರ್‌ಎಫ್‌ಓ ನಂದಕುಮಾರ್ ಭೇಟಿ ನೀಡಿ ಪರಿಶೀಲಿಸಿದರು. ನಿಯಮಾನುಸಾರ ಚಿರತೆ ಮರಿಯ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ ಅಂತ್ಯಕ್ರಿಯೆ ಮಾಡಲಾಯಿತು. ಈ ಸಂಬಂಧ ಹುಣಸೂರು ಅರಣ್ಯ ಇಲಾಖೆ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಸಂವಿಧಾನದ ಮೇಲೆ ನಂಬಿಕೆ ಇಲ್ಲದಿದ್ದರೆ ಪಾಕ್‌ಗೆ ಹೋಗಿ

ಬೆಂಗಳೂರು: ಬಿಜೆಪಿ ನಾಯಕರಿಗೆ



ರಾಷ್ಟ್ರಧ್ವಜ, ಭಾರತೀಯ ಸಂವಿಧಾನ ಮತ್ತು ರಾಷ್ಟ್ರದ ಸಮಗ್ರತೆ ಇಷ್ಟವಿಲ್ಲದಿದ್ದರೆ, ಅವರು ತಮ್ಮ ಇಷ್ಟಕ್ಕೆ ಸರಿಹೊಂದಬಹುದಾದ ಪಾಕಿಸ್ತಾನಕ್ಕೆ ಹೋಗಲಿ ಎಂದು ಸಚಿವ ಪ್ರಿಯಾಂಕ್ ಖರ್ಗೆ ಅವರು ಸೋಮವಾರ ತಿರುಗೇಟು ನೀಡಿದ್ದಾರೆ.

ಮಂಡ್ಯ ಜಿಲ್ಲೆಯ ಕೆರಗೋಡು ಗ್ರಾಮದ ಸರ್ಕಾರಿ ಜಮೀನಿನಲ್ಲಿ 108 ಅಡಿ ಎತ್ತರದ ಧ್ವಜಸ್ತಂಭದ ಮೇಲೆ ಹಾರಿಸಲಾಗಿದ್ದ ಹನುಮಂತನ ಚಿತ್ರವಿರುವ ಕೇಸರಿ ಧ್ವಜವನ್ನು ಇಳಿಸಿದ ಬಗ್ಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್ ಖರ್ಗೆ, ಬಿಜೆಪಿಯ ಪಿತೂರಿಗಳು ಮತ್ತು ತಂತ್ರಗಳಿಗೆ ನಾವು ತಲೆ ಕೆಡಿಸಿಕೊಳ್ಳುವುದಿಲ್ಲ. ನಾವು ಅದನ್ನು ಸಮರ್ಥವಾಗಿ ನಿಭಾಯಿಸುತ್ತೇವೆ ಎಂದು ಹೇಳಿದರು. ತಿರಂಗ(ರಾಷ್ಟ್ರಧ್ವಜ)ವನ್ನು ದ್ವೇಷಿಸುವ ಆರ್‌ಎಸ್‌ಎಸ್‌ನಿಂದ ತರಬೇತಿ ಪಡೆದ ಬಿಜೆಪಿ ಕೂಡ ರಾಷ್ಟ್ರಧ್ವಜವನ್ನು ದ್ವೇಷಿಸುತ್ತಿದೆಯಾ. ಬಿಜೆಪಿಯವರು ತ್ರಿವರ್ಣ ಧ್ವಜವನ್ನು ಗೌರವಿಸುವ ಬದಲು ದ್ವೇಷಿಸುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ವಿಜಯೇಂದ್ರ ಅವರೇ ರಾಜ್ಯ ಸರ್ಕಾರ ರಾಷ್ಟ್ರಧ್ವಜವನ್ನು ಹಾರಿಸುವ ಮೂಲಕ ಧ್ವಜಸ್ತಂಭದ ಉದ್ದೇಶವನ್ನು ಪೂರೈಸಿದೆ. ಆದರೂ ನಿಮಗೆ ಯಾಕೆ ಇಷ್ಟೊಂದು ಕೋಪ ರಾಷ್ಟ್ರಧ್ವಜದ ಮೇಲೆ ದ್ವೇಷ ಸಾಧಿಸುವ ಮೂಲಕ ಬಿಜೆಪಿ ದೇಶವಿರೋಧಿಗಳೆಂದು ಸಾಬೀತು ಮಾಡಿದ್ದಾರೆ ಎಂದು ಖರ್ಗೆ ಹೇಳಿದ್ದಾರೆ.

ಕರಾವಳಿ ಪ್ರದೇಶವನ್ನೇ ಹಿಂದುತ್ವ ಪ್ರಯೋಗಶಾಲೆಯನ್ನಾಗಿ ಮಾಡಿಕೊಂಡಿದ್ದ ಬಿಜೆಪಿ ಹಾಗೂ ಸಂಘ ಪರಿವಾರ ಇದೀಗ ಮಂಡ್ಯ ಜಿಲ್ಲೆಯಲ್ಲಿ ಸಕ್ರಿಯಗೊಂಡಿದ್ದು, ಹಿಂದುತ್ವ ಪ್ರಯೋಗಕ್ಕೆ ಮುಂದಾಗಿದೆ ಎಂದರು.

ಸಮಾಜ ಶಾಂತಿಯುತವಾಗಿದ್ದರೆ ಬಿಜೆಪಿಗೆ ಶಾಂತಿ ಇರುವುದಿಲ್ಲ. ಬಿಜೆಪಿ ನಾಯಕರು ರಾಜಕೀಯ ಲಾಭಕ್ಕಾಗಿ ಮಂಡ್ಯ ಜಿಲ್ಲೆಯಲ್ಲಿ ಬೆಂಕಿ ಹಚ್ಚುವ ಕೀಳು ಮಟ್ಟಕ್ಕೆ ಇಳಿದಿದ್ದಾರೆ. ಪ್ರತಿಪಕ್ಷದ ನಾಯಕನ ಸ್ಥಾನವು ಗೌರವಾನ್ವಿತ ಹುದ್ದೆಯಾಗಿದೆ, ಅವರ ಕಾರ್ಯಗಳು ಅವರ ಸ್ಥಾನಕ್ಕೆ ಗೌರವ ತರುವುದಿಲ್ಲ ಎಂದು ಪ್ರತಿಪಕ್ಷ ನಾಯಕ ಆರ್ ಅಶೋಕ್ ಅವರಿಗೆ ಟಾಂಗ್ ನೀಡಿದರು.

ಆರ್. ಅಶೋಕ್ ಮತ್ತು ರಾಜ್ಯಾಧ್ಯಕ್ಷ ವಿಜಯೇಂದ್ರ ಅವರೇ ಕೆಲವು ಸಂಗತಿಗಳು ಮೊದಲು ತಿಳಿದುಕೊಳ್ಳಿ. ಗೌರಿಶಂಕರ ಸೇವಾ ಟ್ರಸ್ಟ್ 2023ರ ಡಿಸೆಂಬರ್ 29ರಂದು ರಾಷ್ಟ್ರ ಮತ್ತು ರಾಜ್ಯ ಧ್ವಜಗಳನ್ನು ಮಾತ್ರ ಹಾರಿಸುವುದಾಗಿ ಸರ್ಕಾರಿ ಜಾಗದಲ್ಲಿ ಧ್ವಜಸ್ತಂಭವನ್ನು ಸ್ಥಾಪಿಸಲು ಅನುಮತಿ ಪಡೆದಿದೆ ಎಂದರು.

ಲೋಕಸಭೆಗೆ ಯಾರೇ ಅಭ್ಯರ್ಥಿಯಾದರೂ ಗೆಲುವಿಗೆ ಶ್ರಮಿಸಿ

ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಕರೆ



ಕಾರ್ಯಕರ್ತರ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಮಾತನಾಡುತ್ತಿರುವುದು.

ಕ್ಷೇತ್ರದ ಅಭಿವೃದ್ಧಿಗೆ ಸಹಕಾರ

ಉಪ ಚುನಾವಣೆಗಿಂತ ಮೊದಲು ಕ್ಷೇತ್ರದಲ್ಲಿ 600 ಕೋಟಿ ರೂ. ಅಭಿವೃದ್ಧಿ ಕಾರ್ಯ ನಡೆದಿವೆ. ಕೆರೆ ತುಂಬಿಸುವ ಯೋಜನೆಯಂತಹ ಶಾಶ್ವತ ಕೆಲಸಗಳು ನಡೆದಿವೆ. ಜನರು ಕ್ಷೇತ್ರದ ಅಭಿವೃದ್ಧಿ ಬಗ್ಗೆ ಸಾಕಷ್ಟು ನಿರೀಕ್ಷೆ ಹೊಂದಿದ್ದಾರೆ. ಹೀಗಾಗಿ ಹಂತ ಹಂತವಾಗಿ ಕ್ಷೇತ್ರದ ಅಭಿವೃದ್ಧಿಗೆ ಸಹಕಾರ ನೀಡಲಾಗುವುದು. ಬಸವ ಭವನ ಸೇರಿದಂತೆ ಇನ್ನಿತರ ಸಮುದಾಯ ಭವನಗಳ ಕಾಮಗಾರಿ ಅನುದಾನ ಕೊರತೆಯಿಂದ ಸ್ಥಗಿತಗೊಂಡಿವೆ. ಅವುಗಳನ್ನು ಪೂರ್ಣಗೊಳಿಸಿ ಮತ್ತು ಮುಂದಿನ 3 ವರ್ಷಗಳಲ್ಲಿ ತಾಲೂಕಿನಲ್ಲಿ ಗುಂಡಿ ಬಿದ್ದಿರುವ ರಸ್ತೆಗಳ ಅಭಿವೃದ್ಧಿ, ಗ್ರಾಮಗಳ ಮೂಲಸೌಕರ್ಯ ಅಭಿವೃದ್ಧಿ ಸೇರಿದಂತೆ ಕ್ಷೇತ್ರದ ಸಂಪೂರ್ಣ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಮಹದೇವಪ್ಪ ತಿಳಿಸಿದರು. ನುಗು ಏತ ನೀರಾವರಿ ಯೋಜನೆ ಕಾರ್ಯಗತಗೊಳಿಸಿ ನರಸಾಂಬುದಿ ಕೆರೆಗೆ ನೀರು ತುಂಬಿಸಿದಲ್ಲಿ ಕೌಲಂದೆ ಭಾಗದ ಜನರಿಗೆ ಅನುಕೂಲವಾಗಲಿದೆ. ಹೀಗಾಗಿ ಶಾಸಕರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಎಷ್ಟು ಅನುದಾನ ಬೇಕು ಎಂದು ಮನವಿ ಮಾಡಿದಲ್ಲಿ ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಅನುದಾನ ಬಿಡುಗಡೆಗೆ ಸಹಕಾರ ನೀಡಲಾಗುವುದು ಎಂದರು.

ನಂಜನಗೂಡು, ಜ.29– ಕೆಲವೇ ದಿನಗಳಲ್ಲಿ ಲೋಕಸಭೆ ಚುನಾವಣೆ ಎದುರಾಗಲಿದ್ದು, ಕಾರ್ಯಕರ್ತರು ಭಿನ್ನಾಭಿಪ್ರಾಯ ಮರೆತು ಒಟ್ಟಾಗಿ ಕೆಲಸ ಮಾಡುವ ಮೂಲಕ ಪಕ್ಷ ಸಂಘಟನೆಗೆ ಮುಂದಾಗಿ. ಯಾರೇ ಅಭ್ಯರ್ಥಿಯಾದರೂ ಪಕ್ಷದ ಅಭ್ಯರ್ಥಿ ಗೆಲುವಿಗೆ ಶ್ರಮಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ನಗರದ ಕೆಹೆಚ್‌ಬಿ ಬಡಾವಣೆಯಲ್ಲಿ ಸಾರ್ವಜನಿಕರ ಕುಂದುಕೊರತೆ ಆಲಿಸಿ, ಕಾರ್ಯಕರ್ತರ ಸಭೆ ನಡೆಸಿ ಮಾತನಾಡಿದ ಅವರು, ಶಾಸಕ ದರ್ಶನ್ ಧ್ರುವನಾರಾಯಣ್ ನಮ್ಮ ಪಕ್ಷದ ಶಾಸಕರು. ಚುನಾವಣೆಯಲ್ಲಿ ನಮ್ಮ ಬೆಂಬಲಿಗರೂ ಸಹ ಅವರ ಗೆಲುವಿಗೆ ಶ್ರಮಿಸಿದ್ದಾರೆ. ಕೆಲವರು ಮುನಿಸಿನಿಂದ ಚುನಾವಣೆಯಲ್ಲಿ ಕೆಲಸ ಮಾಡದಿರಬಹುದು. ಆದರೆ ನಿಮ್ಮೆಲ್ಲರ ಪರಿಶ್ರಮದಿಂದ ಅತ್ಯಧಿಕ ಮತಗಳಿಂದ ಗೆದ್ದು ಬಂದಿದ್ದಾರೆ. ಎಲ್ಲರೂ ಅವರಿಗೆ ಸಹಕಾರ ನೀಡಬೇಕು. ಆ ಬಣ, ಈ ಬಣ ಎಂದು ಭೇದಭಾವ ಮಾಡದೇ ಎಲ್ಲರನ್ನೂ ಒಟ್ಟಾಗಿ ಕರೆದೊಯ್ಯುವಂತೆ ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ಸೂಕ್ತ ಅಭ್ಯರ್ಥಿ ಕಣಕ್ಕೆ: ಚಾಮರಾಜನಗರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಆಯ್ಕೆ ಸಂಬಂಧ ಚುನಾವಣಾ ವೀಕ್ಷಕ ದಿನೇಶ್ ಗುಂಡೂರಾವ್ ಅವರು ಸಭೆ ನಡೆಸಿ ಆಕಾಂಕ್ಷಿಗಳು, ಶಾಸಕರು, ಕಾರ್ಯಕರ್ತರ ಅಭಿಪ್ರಾಯ ಸಂಗ್ರಹಿಸಿ ಹೈಕಮಾಂಡ್‌ಗೆ ವರದಿ ನೀಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಶಾಸಕರ, ಮಾಜಿ ಶಾಸಕರ ಗೌಪ್ಯ ಮಾಹಿತಿ ಸಂಗ್ರಹಿಸಿದ್ದಾರೆ. ಪಕ್ಷದ ಹೈಕಮಾಂಡ್ ಎಲ್ಲರ ಅಭಿಪ್ರಾಯ ಕ್ರೋಢೀಕರಿಸಿ ಗೆಲ್ಲುವ ಅಭ್ಯರ್ಥಿ ಸಮೀಕ್ಷೆ ನಡೆಸಿ ಸೂಕ್ತ ಅಭ್ಯರ್ಥಿ ಕಣಕ್ಕಿಳಿಸಲಿದೆ ಎಂದರು.

ಕಡತ ನಾಪತ್ತೆ ಪ್ರಕರಣ ಪರಿಶೀಲನೆಗೆ ಸೂಚನೆ: ನಗರಸಭೆಯಲ್ಲಿ ಕಡತ ನಾಪತ್ತೆ ಪ್ರಕರಣ ಸಂಬಂಧ ನಗರಸಭಾ ಆಯುಕ್ತ ನಂಜುಂಡಸ್ವಾಮಿ ಅವರನ್ನು ತರಾಟೆಗೆ ತೆಗೆದುಕೊಂಡ ಸಚಿವರು ಕೂಡಲೇ ಪ್ರಕರಣದ ಸಂಪೂರ್ಣ ತನಿಖೆ ನಡೆಸಿ ವರದಿ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗುವುದು. ಅಲ್ಲದೇ ಊಟಿ ರಸ್ತೆಯ ಕಾರ್ಮಲ್ ಕಾನ್ವೆಂಟ್ ಎದುರಿಗೆ ನಿರ್ಮಾಣವಾಗುತ್ತಿರುವ ಕಟ್ಟಡ ಕಾಮಗಾರಿ ನಿಲ್ಲಿಸಲು ಸೂಚಿಸುವುದಾಗಿ ತಿಳಿಸಿದರು.

ಇದಕ್ಕೂ ಮುನ್ನಾ ತಾಲೂಕಿನ ಮುದ್ದಹಳ್ಳಿ ಬಳಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಭೇಟಿ ನೀಡಿ ಆಹಾರ ಪದಾರ್ಥಗಳನ್ನು ಪರಿಶೀಲನೆ ನಡೆಸಿದರು. ಇದೇ ವೇಳೆ ವಿದ್ಯಾರ್ಥಿಗಳು ಕಳಪೆ ಗುಣಮಟ್ಟದ ಆಹಾರ ವಿತರಿಸುತ್ತಿರುವ ಬಗ್ಗೆ ಸಚಿವರಿಗೆ ದೂರು ನೀಡಿದರು. ಕಳಪೆ ಗುಣಮಟ್ಟದ ಆಹಾರ ವಿತರಣೆ ಕಂಡು ಗರಂ ಆದ ಸಚಿವರು ಮೆನು ಪ್ರಕಾರ ಪೌಷ್ಟಿಕ ಆಹಾರ ನೀಡದ ಹಾಸ್ಟೆಲ್ ವಾರ್ಡನ್, ಪ್ರಾಂಶುಪಾಲರ ವಿರುದ್ಧ ತರಾಟೆಗೆ ತೆಗೆದುಕೊಂಡು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಕರೆ ಮಾಡಿ, ಸ್ಥಳ ಪರಿಶೀಲಿಸಿ ಇಬ್ಬರನ್ನು ಅಮಾನತುಗೊಳಿಸಲು ಸೂಚಿಸಿದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಮುಖಂಡರಾದ ಬುಲೆಟ್ ಮಹದೇವಪ್ಪ, ಇಂಧನ ಬಾಬು, ಜಿಪಂ ಮಾಜಿ ಸದಸ್ಯರಾದ ಕೆ.ಮಾರುತಿ, ಕೆ.ಬಿ.ಸ್ವಾಮಿ, ಚೋಳರಾಜು, ಶಶಿರೇಖಾ, ತಾಪಂ ಮಾಜಿ ಸದಸ್ಯ ಹೆಚ್.ಎಸ್.ಮೂಗಶೆಟ್ಟಿ, ವಕೀಲರಾದ ಶಿವಬಸವಣ್ಣ, ನಂಜುಂಡಸ್ವಾಮಿ, ಶಿವನಾಗಪ್ಪ, ನಾಶಿರ್ ಖಾನ್, ಅಜ್ಗರ್, ದಿನೇಶ್, ಶಿವಮಲ್ಲಪ್ಪ, ಗಿರೀಶ್, ಕೃಷ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ನಾಗೇಶ್ ರಾಜ್ ಸೇರಿದಂತೆ ಹಲವರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
ಬ್ಲ್ಯೂ ಸ್ಟಾರ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಫೈಟರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಂಗಸಮುದ್ರ (ಕ)	4 ಪ್ರದರ್ಶನಗಳು
ರಾಜಕಮಲ್	
ಫೈಟರ್ (ಹಿಂ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
ಅಲೆಕ್ಸ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕಾಟೇರ (ಕ)	4 ಪ್ರದರ್ಶನಗಳು
ಪ್ರಭಾ	
ಗುಂಟೂರು ಖಾರಂ(ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಬ್ಯಾಚುಲರ್ ಪಾರ್ಟಿ (ಕ): ಬೆ.10.10ಕ್ಕೆ, ಮ.1ಕ್ಕೆ, ರಾ.7.10ಕ್ಕೆ, ಕಾಟೇರ (ಕ): ಮ.3.50ಕ್ಕೆ, ಮಲೈಕೊಟ್ಟೈ ವಾಲಿಬನ್ (ಮ): ರಾ.10.05ಕ್ಕೆ.
ಸ್ಕ್ರೀನ್ 2	ಅಲೆಕ್ಸಾ (ಕ): ಬೆ.10.15ಕ್ಕೆ, ಕೇಸ್ ಆಫ್ ಕೊಂಡಾಣ (ಕ): ಮ.1ಕ್ಕೆ, ಹನುಮಾನ್ (ಕ): ಮ.3.50ಕ್ಕೆ, ಫೈಟರ್ (3ಡಿ)(ಹಿಂ): ಸಂ.6.55ಕ್ಕೆ, ಫೈಟರ್ (ಹಿಂ): ರಾ.10.05ಕ್ಕೆ.
ಸ್ಕ್ರೀನ್ 3	ಉಪಾಧ್ಯಕ್ಷ (ಕ): ಬೆ.10.10ಕ್ಕೆ, ಮ.1.05ಕ್ಕೆ, ಸಂ.4ಕ್ಕೆ, ರಾ.7.05ಕ್ಕೆ, ಕಾಟೇರ (ಕ): ರಾ.10ಕ್ಕೆ.
ಸ್ಕ್ರೀನ್ 4	ಫೈಟರ್ (3ಡಿ)(ಹಿಂ): ಬೆ.9.40ಕ್ಕೆ, ಮ.12.50ಕ್ಕೆ, ಸಂ.4ಕ್ಕೆ, ರಾ.10.25ಕ್ಕೆ, ಫೈಟರ್ (ಹಿಂ): ರಾ.7.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಫೈಟರ್ (3ಡಿ)(ಹಿಂ): ಬೆ.7.40ಕ್ಕೆ, ಬೆ.11.15ಕ್ಕೆ, ಮ.2.50ಕ್ಕೆ, ಸಂ.6.25ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಬ್ಯಾಚುಲರ್ ಪಾರ್ಟಿ (ಕ): ಬೆ.9.20ಕ್ಕೆ, ಸಂ.4ಕ್ಕೆ, 10.20ಕ್ಕೆ, ಫೈಟರ್ (ಹಿಂ): ಮ.12.25ಕ್ಕೆ, ಉಪಾಧ್ಯಕ್ಷ (ಕ): ರಾ.7.05ಕ್ಕೆ.
ಸ್ಕ್ರೀನ್ 3	ಉಪಾಧ್ಯಕ್ಷ (ಕ): ಬೆ.9ಕ್ಕೆ, ಹನುಮಾನ್ (ಕ): ಮ.12.05ಕ್ಕೆ, ಕಾಟೇರ (ಕ): ಮ.3.25ಕ್ಕೆ, ಕೇಸ್ ಆಫ್ ಕೊಂಡಾಣ (ಕ): ರಾ.10.30ಕ್ಕೆ ಮಲೈಕೊಟ್ಟೈ ವಾಲಿಬನ್ (ಮ): ರಾ.7.05ಕ್ಕೆ.
ಸ್ಕ್ರೀನ್ 4	ಫೈಟರ್ (3ಡಿ)(ಹಿಂ): ಬೆ.10.30ಕ್ಕೆ, ಮ.2.05ಕ್ಕೆ, ಸಂ.5.40ಕ್ಕೆ, ರಾ.9.15ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅನಿಮಲ್ (ಹಿಂ): ಬೆ.8.10ಕ್ಕೆ, ಬೆ.9.15ಕ್ಕೆ, ಬೆ.9.45ಕ್ಕೆ, ಬೆ.10.15ಕ್ಕೆ, ಮ.1.20ಕ್ಕೆ, ಮ.2.20ಕ್ಕೆ, ಸಂ.5.25ಕ್ಕೆ, ಸಂ.5.55ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ರಾ.10ಕ್ಕೆ, ರಾ.10.30ಕ್ಕೆ, ಅನಿಮಲ್ (ಕ): ಮ.1.50ಕ್ಕೆ, ಅನ್ನಪೂರ್ಣಿ (ತ): ಸಂ.4.15ಕ್ಕೆ, ಕಾಥಲ್ ದಿ ಕೋರ್ (ಮ): ರಾ.10.15ಕ್ಕೆ, ಪಾರ್ಕಿಂಗ್ (ತ): ಮ.1.25ಕ್ಕೆ, ರಾ.7.20ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಬೆ.9.20ಕ್ಕೆ, ಮ.12.15ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.12.35ಕ್ಕೆ, ರಾ.7.05ಕ್ಕೆ, ಶೋಶಿತೆ (ಕ): ಬೆ.11ಕ್ಕೆ, ಟೈಗರ್ 3 (ಹಿಂ): ಮ.3.45ಕ್ಕೆ, ರಾ.10.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕೋಟೆಯಲ್ಲಿ ಸಿದ್ಧಗಂಗಾಶ್ರೀ, ಸಿದ್ದೇಶ್ವರ ಶ್ರೀಗಳ ಪುಣ್ಯಸ್ಮರಣೆ



ಹೆಚ್.ಡಿ.ಕೋಟೆಯಲ್ಲಿ ಶ್ರೀಶಿವಕುಮಾರಸ್ವಾಮಿ ಮತ್ತು ಸಿದ್ದೇಶ್ವರ ಸ್ವಾಮೀಜಿಗಳ ಪುಣ್ಯಸ್ಮರಣೆ ಮಾಡಲಾಯಿತು.

ಹೆಚ್.ಡಿ.ಕೋಟೆ, ಜ.29– ಅಜ್ಞಾನದ ಜಗವನ್ನು ಸುಜ್ಞಾನದತ್ತ ಕೊಂಡೊಯ್ಯಲು ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮಿಗಳು ಶ್ರಮಿಸಿದರು ಎಂದು ಪಡುವಲು ವಿರಕ್ತ ಮಠದ ಮಹದೇವಸ್ವಾಮೀಜಿ ತಿಳಿಸಿದರು.

ಪಟ್ಟಣದ ಹಳೇ ಆಸ್ಪತ್ರೆ ಆವರಣದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ಯುವ ಸಮಿತಿ ವತಿಯಿಂದ ಸಿದ್ಧಗಂಗಾ ಶಿವಕುಮಾರ ಸ್ವಾಮೀಜಿ ಮತ್ತು ಸಿದ್ದೇಶ್ವರ ಸ್ವಾಮೀಜಿಗಳ ಪುಣ್ಯಸ್ಮರಣೆ ಅಂಗವಾಗಿ ಆಯೋಜಿಸಿದ್ದ ದಾಸೋಹ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶ್ರೀಶಿವಕುಮಾರಸ್ವಾಮಿಗಳ ಪರಿಶ್ರಮದಿಂದಾಗಿ ಅದೆಷ್ಟೋ ವಿದ್ಯಾರ್ಥಿಗಳು ಇಂದು ಉನ್ನತ ಸ್ಥಾನ ಅಲಂಕರಿಸಿದ್ದಾರೆ. ಜಾತಿ ಭೇದ ಮಾಡದೇ ಅವರು ನೀಡಿದ ದಾಸೋಹ ಮತ್ತು ಶಿಕ್ಷಣವನ್ನು ಯಾರೂ ಮರೆಯಬಾರದು. ಅವರ ಆಶಯದಂತೆ ಮಠ ಸಾಗುತ್ತಿದೆ. ಅದೇ ರೀತಿ ಸಿದ್ದೇಶ್ವರ ಸ್ವಾಮೀಜಿಗಳು ಸಹ ತಮ್ಮ ವಿಚಾರಧಾರೆಗಳಿಂದ ಅಪಾರ ಭಕ್ತರನ್ನು ಹೊಂದಿದ್ದರು. ಅವರ ಸರಳತೆ ಇತರರಿಗೆ ಪಾಠವಾಗಿದೆ. ಅವರ ಜೀವನವು ಒಂದು ವಿಶ್ವ ವಿದ್ಯಾನಿಲಯಕ್ಕೆ ಸಮ ಎಂದರು.

ಹಂಚೀಪುರ ಸಿದ್ದಮಲ್ಲೇಶ್ವರ ಮಠದ ಚನ್ನಬಸವ ಸ್ವಾಮೀಜಿ, ದಡದಹಳ್ಳಿ ದಾಸೋಹ ಮಠದ ಷಡಕ್ಷರಿ ಸ್ವಾಮೀಜಿ ಮಾತನಾಡಿದರು. ಈ ವೇಳೆ ಮಾದಾಪುರ ಚಂದ್ರಮೌಳೇಶ್ವರ ಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಜಕ್ಕಹಳ್ಳಿ ಮಠದ ಶಿವಕುಮಾರ ಸ್ವಾಮೀಜಿ, ಸಮಾಜದ ಅಧ್ಯಕ್ಷ ಬಸವರಾಜು, ಯುವ ಘಟಕದ ಅಧ್ಯಕ್ಷ ಗುರುಸ್ವಾಮಿ, ಕಾರ್ಯದರ್ಶಿ ಮಹದೇವಪ್ಪ, ಬಿ.ವಿ.ಬಸವರಾಜು, ಬಸವ ಬಳಗದ ಅಧ್ಯಕ್ಷ ಶಿವಸ್ವಾಮಿ, ದೇವಮಣಿ ವೆಂಕಟಸ್ವಾಮಿ, ವಿನಾಯಕ ಪ್ರಸಾದ್, ಗಣಪತಿ, ಸಿ.ಕೆ.ಗಿರೀಶ್, ಆನಂದ್, ನಂದೀಶ್, ಸಿ.ಎನ್. ನಾಗಣ್ಣ ಬ್ಯಾಂಕ್ ವೀರಪ್ಪ ಸೋಮಾಚಾರ್, ಜೆ.ಪಿ.ಶಿವರಾಜು, ಮಹದೇವು, ಕೆಂಡಗಣ್ಣಸ್ವಾಮಿ, ಲೋಕೇಶ್, ಕಾಶಿಪತಿ, ಯೋಗೇಶ್, ಚಂದ್ರಮೌಳೇಶ್ವರ, ಕೆ.ವಿ.ಮಹದೇವಸ್ವಾಮಿ, ಚಂದ್ರು, ಸ್ವಾಮಿ, ಮಹೇಶ್, ರಾಮಚಂದ್ರಪ್ಪ, ನಂದೀಶ್, ರಮೇಶ್, ಶಿವಕುಮಾರ್ ಇತರರಿದ್ದರು.

ಹೊನಲು–ಬೆಳಕಿನ ವಾಲಿಬಾಲ್ ಪಂದ್ಯಾವಳಿಗೆ ಚಾಲನೆ

ಕ್ರೀಡೆಯಿಂದ ಆರೋಗ್ಯ ವೃದ್ಧಿ: ಟಿ.ಎಂ.ನಂಜುಂಡಸ್ವಾಮಿ



ಜಿಲ್ಲಾ ಮಟ್ಟದ ಪುರುಷರ ಹೊನಲು–ಬೆಳಕಿನ ವಾಲಿಬಾಲ್ ಪಂದ್ಯಾವಳಿಯನ್ನು ಪುರಸಭಾ ಮಾಜಿ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ ಉದ್ಘಾಟಿಸಿದರು.

ತಿ.ನರಸೀಪುರ, ಜ.29– ಕಲಿಕೆ ಜೊತೆ ಕ್ರೀಡೆಯೂ ಅವಶ್ಯಕ. ಕ್ರೀಡೆಯಿಂದ ಆರೋಗ್ಯ ವೃದ್ಧಿಯಾಗಲಿದೆ ಎಂದು ಪುರಸಭಾ ಮಾಜಿ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ ತಿಳಿಸಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿ ಶ್ರೀವೆಂಕಟೇಶ್ವರ ಗ್ರಾಮೀಣಾಭಿವೃದ್ಧಿ ಟ್ರಸ್ಟ್ ಹಾಗೂ ಕಾವೇರಿ ಸ್ಪೋರ್ಟ್ಸ್ ಕ್ಲಬ್ ಆಶ್ರಯದಲ್ಲಿ ಜಿಲ್ಲಾ ಮಟ್ಟದ ಪುರುಷರ ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿದ ಅವರು, ಕ್ರೀಡಾಪಟುಗಳಿಗೆ ವೆಂಕಟೇಶ್ವರ ಗ್ರಾಮೀಣಾಭಿವೃದ್ಧಿ ಟ್ರಸ್ಟ್ ಉತ್ತಮ ಅವಕಾಶ ಕಲ್ಪಿಸುತ್ತಾ ಬಂದಿದೆ. ಯುವಕರು ಇದನ್ನು ಸದುಪಯೋಗಪಡಿಸಿಕೊಳ್ಳಬೇಕು. ಅಲ್ಲದೇ ತಾಲೂಕಿನ ಕ್ರೀಡಾಪಟುಗಳು ಕ್ರೀಡೆಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆ ಪ್ರದರ್ಶಿಸುವ ಮೂಲಕ ತಾಲೂಕಿಗೆ ಕೀರ್ತಿ ತರಬೇಕು ಎಂದರು.

ವಾಟಾಳು ಮಠದ ಮಠಾಧೀಶ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಹಿಂದೆ ಭಾರತದ ಕ್ರೀಡಾಪಟುಗಳು ಪದಕ ಗಳಿಸುವುದೇ ಕಷ್ಟವಾಗಿತ್ತು. ಇದೀಗ ಚಿನ್ನ, ಬೆಳ್ಳಿ ಹಾಗೂ ಕಂಚಿನ ಪದಕಗಳನ್ನು ಗಳಿಸುವ ಮೂಲಕ ಇತರ ರಾಷ್ಟ್ರಗಳೊಂದಿಗೆ ಮುಂಚೂಣಿಯಲ್ಲಿರುವುದು ಶ್ಲಾಘನೀಯ ಎಂದರು.

ಸಮಾರೋಪ ಸಮಾರಂಭ: ಫೆ.4 ರಂದು ಬೆಳಗ್ಗೆ 9 ಗಂಟೆಗೆ ಫೈನಲ್ ಪಂದ್ಯ ನಡೆಯಲಿದ್ದು, ಸಂಜೆ ಸಮಾರೋಪ ಸಮಾರಂಭ ನಡೆಯಲಿದೆ ಕ್ರೀಡಾ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಆಯೋಜಕರು ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಕಾವೇರಿ ಸ್ಪೋರ್ಟ್ಸ್ ಕ್ಲಬ್ ಧ್ಯಕ್ಷ ಸಿ.ಡಿ.ವೆಂಕಟೇಶ್, ಕಾಂಗ್ರೆಸ್ ವೈದ್ಯಕೀಯ ವಿಭಾಗದ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಪ್ರದೀಪ್, ತಾಲೂಕು ಡಾ.ಬಾಬುಜಗಜೀವನ್ ರಾವ್ ಸಂಘದ ಅಧ್ಯಕ್ಷ ಸಿ.ಪುಟ್ಟಯ್ಯ, ಬಿಜೆಪಿ ಹಿರಿಯ ಮುಖಂಡ ತೋಟದಪ್ಪ ಬಸವರಾಜು, ತಾಪಂ ಮಾಜಿ ಸದಸ್ಯ ಬಿ.ಎಲ್. ಮಹದೇವ್, ಸೇವಾಶ್ರಯ ಫೌಂಡೇಶನ್ ಅಧ್ಯಕ್ಷ ಮಣಿಕಂಠರಾಜ್‌ಗೌಡ, ವೆಂಕಟೇಶ್ವರ ಗ್ರಾಮೀಣಾಭಿವೃದ್ಧಿ ಟ್ರಸ್ಟ್ ನಿರ್ದೇಶಕ ಕೃಷ್ಣ, ಮುಖಂಡರಾದ ರಾಜು, ಗುತ್ತಿಗೆದಾರ ನಾಗೇಶ್, ಕಾಂಗ್ರೆಸ್ ಮುಖಂಡ ಭೈರಾಪುರ ರಮೇಶ್, ಶಾರದಾ ಡಾನ್ಸ್ ಕ್ಲಬ್ ಬಸವರಾಜು, ವಾಲಿಬಾಲ್ ಕ್ರೀಡಾಪಟುಗಳು ಉಪಸ್ಥಿತರಿದ್ದರು.

ಜಿಲ್ಲಾಮಟ್ಟದ ಚಿತ್ರಕಲಾ ಸ್ಪರ್ಧೆ: ಕಿಶನ್‌ಗೆ ಪ್ರಥಮ ಬಹುಮಾನ

ಹುಣಸೂರು, ಜ.29– ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ನಡೆದ ಮೈಸೂರು ಫೆಸ್ಟ್ ಕಾರ್ಯಕ್ರಮದಲ್ಲಿ ಮೈಸೂರು ಪ್ರವಾಸೋದ್ಯಮ ಪ್ರತಿಬಿಂಬಿಸುವ



ಜಿಲ್ಲಾ ಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ ನಗರದ ಸಂತಜೋಸೆಫರ ಶಾಲೆಯ 10ನೇ ತರಗತಿ ವಿದ್ಯಾರ್ಥಿ ಬನ್ನಿಕುಪ್ಪೆ ಗ್ರಾಮದ ಚಿಕ್ಕಸ್ವಾಮಿ ಮತ್ತು ಶಿವಮ್ಮ ದಂಪತಿ ಬಿ.ಸಿ.ಕಿಶನ್ ಪ್ರಥಮ ಬಹುಮಾನ ಪಡೆದು ತಾಲೂಕಿಗೆ ಕೀರ್ತಿ ತಂದಿದ್ದಾನೆ. 8 ರಿಂದ 12ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ 'ನಮ್ಮ ಪರಂಪರೆ ನಿಮ್ಮ ತಾಣ ಮೈಸೂರು' ವಿಷಯದ ಕುರಿತು ಚಿತ್ರಕಲಾ ಸ್ಪರ್ಧೆ ಏರ್ಪಡಿಸಲಾಗಿತ್ತು. ಸ್ಪರ್ಧೆಯಲ್ಲಿ ಜಿಲ್ಲೆಯ ವಿವಿಧ ಶಾಲಾ ಕಾಲೇಜುಗಳಿಂದ 60ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಅಂತಿಮವಾಗಿ ಬಿ.ಸಿ.ಕಿಶನ್ ಪ್ರಥಮ ಬಹುಮಾನವಾಗಿ ಸೈಕಲ್, ಪ್ರಶಸ್ತಿಯನ್ನು ತನ್ನದಾಗಿಸಿಕೊಂಡರು. ದ್ವಿತೀಯ ಹಾಗೂ ತೃತೀಯ ಬಹುಮಾನವಾಗಿ ವಿಜೇತರಿಗೆ ಸೈಕಲ್ ಹಾಗೂ ಪ್ರಶಸ್ತಿ ವಿತರಿಸಲಾಯಿತು.



ತಿ.ನರಸೀಪುರದ ಗೋಪಾಲಪುರ ನಿವಾಸಿ ವರುಣ ಕ್ಷೇತ್ರದ ಮೈಸೂರು ಕಾಂಗ್ರೆಸ್ ಜಿಲ್ಲಾ ಗ್ರಾಮಾಂತರ ಕಾರ್ಯದರ್ಶಿ ಎಂ.ಮಹೇಶ್ ಚಿಕ್ಕಲೂರು ಶ್ರೀಸಿದ್ದಪ್ಪಾಜಿ ದೇವಾಲಯಕ್ಕೆ ಯುಪಿಎಸ್ ಕೊಡುಗೆ ನೀಡಿದರು. ಈ ವೇಳೆ ಚನ್ನರಾಜ ಅರಸ್, ಶಿವಕುಮಾರ್ ಇತರರಿದ್ದರು.

ಭೇರ್ಯದಲ್ಲಿ ಆಂಬುಲೆನ್ಸ್ ಲೋಕಾರ್ಪಣೆ



ಭೇರ್ಯದಲ್ಲಿ ನೂತನ ಆಂಬುಲೆನ್ಸ್ ಅನ್ನು ಶಾಸಕ ಡಿ.ರವಿಶಂಕರ್ ಲೋಕಾರ್ಪಣೆಗೊಳಿಸಿದರು.

ಭೇರ್ಯ, ಜ.29– ಇಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸರ್ಕಾರ ನೀಡಿದ್ದ ಆಂಬುಲೆನ್ಸ್ ಅನ್ನು ಶಾಸಕ ಡಿ.ರವಿಶಂಕರ್ ಸೋಮವಾರ ಲೋಕಾರ್ಪಣೆಗೊಳಿಸಿದರು.

ಬಳಿಕ ಮಾತನಾಡಿದ ಅವರು, ಭೇರ್ಯ ಗ್ರಾಮ ರಾಷ್ಟ್ರೀಯ ಹೆದ್ದಾರಿಯಲ್ಲಿದೆ. ಈ ಆಸ್ಪತ್ರೆಗೆ ಅಕ್ಕಪಕ್ಕದ 2 ತಾಲೂಕಿನ ಸಂಪರ್ಕ ಇದ್ದು, ಚಿಕಿತ್ಸೆಗಾಗಿ ಹೆಚ್ಚಿನ ಜನರು ಇಲ್ಲಿಗೆ ಬರುತ್ತಾರೆ. ಅವರ ಅನುಕೂಲಕ್ಕಾಗಿ ಈ ಆಂಬುಲೆನ್ಸ್ ಅನ್ನು ಲೋಕಾರ್ಪಣೆ ಮಾಡಲಾಗಿದೆ ಎಂದರು.

ಪ್ರತಿಯೊಂದು ಜೀವ ಅಮೂಲ್ಯ. ಹೀಗಾಗಿ ಅಪಘಾತ ಸಂಭವಿಸಿದ ಮೊದಲ ಒಂದು ಗಂಟೆ ಮುಖ್ಯವಾಗಿರುತ್ತದೆ. ತಕ್ಷಣ ಆಂಬುಲೆನ್ಸ್ ಸೇವೆ ಲಭ್ಯವಾದರೆ ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸಿ ಜೀವ ಉಳಿಸಲು ಸಾಧ್ಯವಾಗುತ್ತದೆ. ಕಳೆದ ತಿಂಗಳು ಮಹಿಳೆಯೊಬ್ಬರು ಹೃದಯಾಘಾತದಿಂದ ಸಾವನ್ನಪ್ಪಿದ್ದರು. ಆಕೆಯ ಕುಟುಂಬದವರು ಆಸ್ಪತ್ರೆ ಎದುರು ಪ್ರತಿಭಟನೆ ನಡೆಸಿದರು. ಸರಿಯಾದ ಸಮಯಕ್ಕೆ ಆಂಬುಲೆನ್ಸ್ ಸಿಕ್ಕಿದ್ದರೇ ಆಕೆ ಸಾಯುತ್ತಿರಲಿಲ್ಲ. ಇದನ್ನೆಲ್ಲಾ ಮನಗಂಡು ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ಹಾಗೂ ಜಿಲ್ಲಾ ಆರೋಗ್ಯಾಧಿಕಾರಿಗಳ ಜೊತೆ ಚರ್ಚಿಸಿ ಭೇರ್ಯ ಆರೋಗ್ಯ ಕೇಂದ್ರಕ್ಕೆ ನೂತನ ಆಂಬುಲೆನ್ಸ್ ಕೊಡಿಸಿದ್ದೇನೆ ಎಂದರು.

ಸಾಲಿಗ್ರಾಮ ಆಸ್ಪತ್ರೆ ತಾಲೂಕು ಆಸ್ಪತ್ರೆಯಾಗಿ ಪರಿವರ್ತನೆ ಆದ ತಕ್ಷಣ ಭೇರ್ಯ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಿ ಸಮುದಾಯ ಆರೋಗ್ಯ ಕೇಂದ್ರ ಮಾಡಲು ಮುಖ್ಯಮಂತ್ರಿಗಳಿಗೆ ಹಾಗೂ ಆರೋಗ್ಯ ಸಚಿವರಿಗೆ ಪತ್ರ ಬರೆದು ಮನವಿ ಮಾಡಿದ್ದೇನೆ ಎಂದರು.

ತಾಲೂಕು ಆರೋಗ್ಯಾಧಿಕಾರಿ ಡಾ.ಡಿ.ನಟರಾಜು ಮಾತನಾಡಿದರು. ಈ ವೇಳೆ ಗ್ರಾಪಂ ಅಧ್ಯಕ್ಷೆ ಜಯಲಕ್ಷ್ಮಿ, ಉಪಾಧ್ಯಕ್ಷೆ ರೂಪ, ಅರ್ಜುನಹಳ್ಳಿ ಗ್ರಾಪಂ ಅಧ್ಯಕ್ಷ ದಿಲೀಪ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕುಮಾರಸ್ವಾಮಿ, ಆಸ್ಪತ್ರೆ ವೈದ್ಯಾಧಿಕಾರಿ ಡಾ.ಸೌಜನ್ಯ, ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಪಿ.ರಮೇಶ್, ಗ್ರಾಪಂ ಮಾಜಿ ಅಧ್ಯಕ್ಷ ಬಿ.ಹೆಚ್.ಮಹದೇವ್, ಗ್ರಾಪಂ ಸದಸ್ಯರಾದ ಮಂಜಪ್ಪ ಬಿ.ಎಲ್.ರಾಜಶೇಖರ್, ಕೃಷ್ಣೇಗೌಡ, ಸಾಲಿಗ್ರಾಮ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉದಯ್ ಶಂಕರ್, ಜಿಲ್ಲಾ ಗ್ರಾಮಾಂತರ ಯುವ ಕಾಂಗ್ರೆಸ್ ಎಸ್‌ಟಿ ಘಟಕದ ಕಾರ್ಯದರ್ಶಿ ಮಹದೇವ್, ತಾಲೂಕು ಹಿರಿಯ ಆರೋಗ್ಯ ನಿರೀಕ್ಷಕ ಕೆ.ವಿ.ರಮೇಶ್, ಕಾಂಗ್ರೆಸ್ ಮುಖಂಡರಾದ ಟಿ.ಸಿ.ಮಂಜು, ಕಾಂತ, ಸುದರ್ಶನ್, ಡಿ.ತಮ್ಮಯ್ಯ ಸೇರಿದಂತೆ ಆಸ್ಪತ್ರೆ ಸಿಬ್ಬಂದಿ ವರ್ಗ, ಆಶಾ ಕಾರ್ಯಕರ್ತೆಯರು ಇದ್ದರು.

ಸಿದ್ದಪ್ಪನಾಯಕ ನಿಧನ

ಹುಣಸೂರು, ಜ.29– ನಗರದ ಕಲ್ಕುಣಿಕೆ ನಿವಾಸಿ ಸಿದ್ದಪ್ಪನಾಯಕ(75)



ಭಾನುವಾರ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಲಕ್ಷ್ಮಣತೀರ್ಥ ನದಿದಡದಲ್ಲಿರುವ ನಾಯಕ ಸಮಾಜದ ಸ್ಮಶಾನದಲ್ಲಿ ಸೋಮವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಂದು ಆಯವ್ಯಯ ಪೂರ್ವಭಾವಿ ಸಭೆ

ಹುಣಸೂರು, ಜ.29– ಇಲ್ಲಿನ ನಗರಸಭೆಯ 2024–25ನೇ ಸಾಲಿನ ಆಯವ್ಯಯ ಪೂರ್ವಭಾವಿ ಸಭೆ ಜ.30ರಂದು ಬೆಳಗ್ಗೆ 11 ಗಂಟೆಗೆ ನಗರಸಭೆ ಕೌನ್ಸಿಲ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಸಾರ್ವಜನಿಕರು ಸಭೆಗೆ ಹಾಜರಾಗಿ ತಮ್ಮ ಸಲಹೆ ಸೂಚನೆ ನೀಡಿ ನಗರದ ಅಭಿವೃದ್ಧಿಗೆ ಸಹಕರಿಸುವಂತೆ ಪೌರಾಯುಕ್ತೆ ಶರ್ಮಿಳಾ ತಿಳಿಸಿದ್ದಾರೆ.

ತಿ.ನರಸೀಪುರ ಟಿಎಪಿಸಿಎಂಎಸ್‌ಗೆ ಕಾಯಕಲ್ಪ ನೀಡಲು

ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಗರನ್ನು ಆಯ್ಕೆ ಮಾಡಿ

ಹಿರಿಯ ಸಹಕಾರಿ ವೈ.ಎನ್.ಶಂಕರೇಗೌಡ ಮನವಿ



ತಿ.ನರಸೀಪುರ ಟಿಎಪಿಸಿಎಂಎಸ್‌ಗೆ ನಿರ್ದೇಶಕರನ್ನು ಆಯ್ಕೆ ಮಾಡುವ ಸಂಬಂಧ ನಡೆದ ಸಭೆಯಲ್ಲಿ ಹಿರಿಯ ಸಹಕಾರಿ ವೈ.ಎನ್.ಶಂಕರೇಗೌಡ ಮಾತನಾಡಿದರು.

ತಿ.ನರಸೀಪುರ, ಜ.29– ತಾಲೂಕು ಕೃಷಿ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಕ್ಕೆ ಕಾಯಕಲ್ಪ ನೀಡಲು ಕಾಂಗ್ರೆಸ್ ಬೆಂಬಲಿತರನ್ನು ನಿರ್ದೇಶಕರನ್ನಾಗಿ ಆಯ್ಕೆ ಮಾಡಬೇಕಿದೆ ಎಂದು ಹಿರಿಯ ಸಹಕಾರಿ ವೈ.ಎನ್. ಶಂಕರೇಗೌಡ ತಿಳಿಸಿದರು.

ಪಟ್ಟಣದ ಟಿಎಪಿಸಿಎಂಎಲ್‌ಗೆ ನಿರ್ದೇಶಕರನ್ನು ಆಯ್ಕೆ ಮಾಡುವ ಸಂಬಂಧ ಮುಂದಿನ ತಿಂಗಳು ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ಪಟ್ಟಣದ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ನಿರ್ದೇಶಕ ಸ್ಥಾನದ ಆಕಾಂಕ್ಷಿಗಳು, ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಅವರು ಮಾತನಾಡಿದರು.

ಸಹಕಾರ ಕ್ಷೇತ್ರ ಕ್ಷಿಪ್ರಗತಿಯಲ್ಲಿ ಬೆಳವಣಿಗೆಯಾಗುತ್ತಿದೆ. ಆದರೆ ತಾಲೂಕು ಸಹಕಾರ ಸಂಘದ ಬೆಳವಣಿಗೆ ಗಮನಿಸಿದರೆ ಇಲ್ಲಿ ಇರುವುದನ್ನೇ ಉಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಸಹಕಾರಿ ಸಂಸ್ಥೆಯಲ್ಲಿ 25 ಕಾರ್ಯಕ್ರಮಗಳನ್ನು ರೈತರಿಗೆ ಕೊಡಬೇಕಾಗುತ್ತದೆ. ಆದರೆ ಒಂದೇ ಒಂದು ಕಾರ್ಯಕ್ರಮ ಕೊಡಲಾಗಿಲ್ಲ. 40 ವರ್ಷಗಳ ಹಿಂದೆ ಇದೇ ಸೊಸೈಟಿಯಲ್ಲಿ ಫರ್ಟಿಲೈಸರ್, ರೈಸ್‌ಮಿಲ್, ಸೀಮೆಎಣ್ಣೆ, ಲಾರಿಗಳು, ಅಲ್ಲದೇ ದಿನಸಿ ವಿತರಣೆ ಮಾಡಲಾಗುತ್ತಿತ್ತು. ಇದೀಗ ಇದ್ಯಾವುದು ಇಲ್ಲವಾಗಿದೆ. ಪ್ರಗತಿ ಪರವಾಗಿ ಯೋಚಿಸುವ ಆಡಳಿತ ಮಂಡಳಿ ಅಸ್ತಿತ್ವದಲ್ಲಿರುವುದೇ ಸಂಘ ಜಡ್ಡು ಬೀಳಲು ಕಾರಣ ಎಂದರು.

ಇದೀಗ ಮತ್ತೆ ಚುನಾವಣೆ ಬಂದಿದ್ದು, 25 ವರ್ಷಗಳ ನಂತರ ನಾವು ಅಧಿಕಾರ ಹಿಡಿಯುವ ಕಡೆಗೆ ಹೆಜ್ಜೆ ಹಾಕಬೇಕು. ಇದಕ್ಕಾಗಿ ಕಾರ್ಯಕರ್ತರು ಕಾರ್ಯಸೂಚಿ ಸಿದ್ಧಪಡಿಸಿ, ನಮ್ಮ ಪ್ರತಿಸ್ಪರ್ಧಿಗಳ ವಿರುದ್ಧ ಗೆಲ್ಲುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು. ಚುನಾವಣೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡು ಕಾಂಗ್ರೆಸ್ ಬೆಂಬಲಿತರನ್ನು ನಿರ್ದೇಶಕರನ್ನಾಗಿ ಆಯ್ಕೆ ಮಾಡಲು ಮುಂದಾಗಬೇಕು ಎಂದು ಮನವಿ ಮಾಡಿದರು.

ಹನುಮನಾಳು ಮರಿಗೌಡ 'ಬಿ' ಕ್ಷೇತ್ರದಿಂದ ಪ್ರಬಲ ಸ್ಪರ್ಧಿಯಾಗಿ ಕಣಕ್ಕಿಳಿಯಲಿದ್ದು, ಎಲ್ಲರೂ ಸಹಕರಿಸಬೇಕು. ಅದೇ ರೀತಿ 'ಎ' ಕ್ಷೇತ್ರದಿಂದ ಹೊನ್ನನಾಯಕ, ಶಿವರಾಂ ಸ್ಪರ್ಧೆಗೆ ಆಕಾಂಕ್ಷಿಗಳಾದರೆ, 'ಬಿ' ಕ್ಷೇತ್ರದಿಂದ ಬಿ.ವೀರಭದ್ರಪ್ಪ, ಷಡಕ್ಷರಸ್ವಾಮಿ, ಟಿ.ಎಂ.ನಂಜುಂಡಸ್ವಾಮಿ, ಮರಿಗೌಡ, ಶಿವಸ್ವಾಮಿ ಹಾಗೂ ನವೀನ್ ಸ್ಪರ್ಧಿಸಲು ಆಕಾಂಕ್ಷಿಗಳಾಗಿ ಹೆಸರು ನೋಂದಾಯಿಸಿಕೊಂಡಿದ್ದಾರೆ ಎಂದರು.

ಈ ವೇಳೆ ಪೀಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಹಿಂದುಳಿದ ವರ್ಗಗಳ ಉಪಾಧ್ಯಕ್ಷ ಎ.ಎಸ್.ಸ್ವಾಮಿ, ಪ್ರಥಮ ದರ್ಜೆ ಗುತ್ತಿಗೆದಾರ ಕೆ.ಎಂ.ಮಧುಕುಮಾರ್, ಆಲಗೂಡು ಪಿಎಸಿಎಸ್ ಮಾಜಿ ಅಧ್ಯಕ್ಷ ಬಿ.ವೀರಭದ್ರಪ್ಪ, ಪುರಸಭೆ ಮಾಜಿ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ, ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಅನಿಲ್ ಕುಮಾರ್, ಚೌಹಳ್ಳಿ ಮಹದೇವಪ್ಪ, ಹೆಮ್ಮಿಗೆ ಪಿಎಸಿಎಸ್ ಮಾಜಿ ಅಧ್ಯಕ್ಷ ಶೇಷಾದ್ರಿ, ಕೆಪಿಸಿಸಿ ಸದಸ್ಯ ಹೊನ್ನನಾಯಕ, ಸೋಸಲೆ ಸಹಕಾರ ಸಂಘದ ಅಧ್ಯಕ್ಷ ಎಂ.ಪರಶಿವಮೂರ್ತಿ, ರಾಜು, ಮುಸುವಿನಕೊಪ್ಪಲು ಸಹಕಾರ ಸಂಘದ ಅಧ್ಯಕ್ಷ ಎಂ.ಶಿವರಾಮು. ಯುವ ಘಟಕದ ಅಧ್ಯಕ್ಷ ಟಿ.ಎಸ್.ಲೋಕೇಶ್, ಟಿಎಪಿಸಿಎಂಎಸ್ ಮಾಜಿ ನಿರ್ದೇಶಕ ಶಿವಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ, ಕುಮಾರಸ್ವಾಮಿ, ವಾಟಾಳ್ ಗ್ರಾಪಂ ಮಾಜಿ ಅಧ್ಯಕ್ಷ ನಾಗೇಶ್, ಬನ್ನೂರು ಪುರಸಭೆ ಮಾಜಿ ಉಪಾಧ್ಯಕ್ಷ ರಾಮಲಿಂಗೇಗೌಡ, ಪ್ರೊ.ಬಿ.ಕೆ.ಜ್ಞಾನ ಪ್ರಕಾಶ್, ಎಪಿಎಂಸಿ ಮಾಜಿ ನಿರ್ದೇಶಕ ಉಕ್ಕಲಿಗರ ಬಸವಣ್ಣ ಗ್ರಾಪಂ ಮಾಜಿ ಅಧ್ಯಕ್ಷ ಧನಂಜಯ, ಅತ್ತಹಳ್ಳಿ ಗ್ರಾಪಂ ಅಧ್ಯಕ್ಷ ಮಹೇಶ್, ಮರಿಗೌಡ, ಯಾಚೇನಹಳ್ಳಿ ಸಹಕಾರ ಸಂಘದ ಸಿಇಓ ಕ್ಯಾತೇಗೌಡ, ಗಿರೀಶ್, ಹಾಜರಿದ್ದರು.

ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಿ

ಸಂಸ್ಥೆ ಆಡಳಿತ ಹಲವು ವರ್ಷಗಳಿಂದ ಒಬ್ಬರ ಕೈಯಲ್ಲಿರುವುದರಿಂದ ಯಾವುದೇ ಬೆಳವಣಿಗೆ ಇಲ್ಲ. ಹೀಗಾಗಿಆಡಳಿತ ಮಂಡಳಿಯಲ್ಲಿ ಬದಲಾವಣೆ ತರಬೇಕಾದ ಅನಿವಾರ್ಯತೆ ಇದೆ. ಈ ಹಿಂದೆ ಸಹಕಾರ ಕ್ಷೇತ್ರದ ಬಗ್ಗೆ ತಿಳುವಳಿಕೆ ಇರುವವರನ್ನು ಹೊರಗಿಟ್ಟು ಆಯ್ಕೆ ಮಾಡಿಕೊಳ್ಳಲಾಗಿದೆ. ಈಗ ಮತ್ತೆ ಚುನಾವಣೆ ಎದುರಾಗಿದ್ದು, ಸಂಸ್ಥೆ ಸಮಗ್ರ ಅಭಿವೃದ್ಧಿಗೆ ಉತ್ತಮ ನಿರ್ದೇಶಕರನ್ನು ಆಯ್ಕೆ ಮಾಡಬೇಕಿದೆ. ಹೀಗಾಗಿ ನಿಮ್ಮ ಹಳ್ಳಿಗಳಲ್ಲಿ ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳಿಗೆ ಮತ ಕೊಡಿಸಲು ಶ್ರಮಿಸಬೇಕು. - **ಸುನೀತಾ ವೀರಪ್ಪಗೌಡ, ಮಾಜಿ ಶಾಸಕಿ.**

ಫೆ.11 ರಂದು ತಿ.ನರಸೀಪುರ ಟಿಎಪಿಸಿಎಂಎಸ್ ನಿರ್ದೇಶಕರ ಆಯ್ಕೆಗೆ ಚುನಾವಣೆ ನಡೆಯಲಿದ್ದು, ಎ ತರಗತಿಯಿಂದ 28 ಸೊಸೈಟಿಯಿಂದ ನಾಲ್ವರು ನಿರ್ದೇಶಕರು ಹಾಗೂ ಬಿ ತರಗತಿಯಿಂದ 5630 ಸದಸ್ಯರ ಪೈಕಿ 8 ನಿರ್ದೇಶಕರ ಸ್ಥಾನಗಳಿಗೆ ಆಯ್ಕೆ ನಡೆಯಬೇಕಿದೆ. ಇದರಲ್ಲಿ ಸಾಮಾನ್ಯ ವರ್ಗಕ್ಕೆ 2, ಸಾಮಾನ್ಯ ಮಹಿಳಾ ವರ್ಗಕ್ಕೆ 2, ಹಿಂದುಳಿದ ವರ್ಗ ಎ ಮತ್ತು ಬಿಗೆ ತಲಾ ಒಂದು ಸ್ಥಾನ, ಪಜಾತಿ ಮತ್ತು ವರ್ಗಕ್ಕೆ ತಲಾ ಒಂದೊಂದು ಸ್ಥಾನ ಮೀಸಲಿರಿಸಲಾಗಿದೆ.

ಗಣರಾಜ್ಯೋತ್ಸವದ ಅಂಗವಾಗಿ — ಮೈಸೂರಿಂದ ಕೆಆರ್‌ಎಸ್‌ವರೆಗೆ ಸೈಕಲ್ ಜಾಥಾ

18 ಮಹಿಳೆಯರು ಸೇರಿ 75 ಮಂದಿ ಸೈಕ್ಲಿಸ್ಟ್‌ಗಳು ಭಾಗಿ


ಗಣರಾಜ್ಯೋತ್ಸವ ಅಂಗವಾಗಿ ಮೈಸೂರಿನಿಂದ ಕೆಆರ್‌ಎಸ್‌ವರೆಗೆ ಸೈಕಲ್ ಜಾಥಾ ಹಮ್ಮಿಕೊಳ್ಳಲಾಗಿತ್ತು.

ಮೈಸೂರು, ಜ.29(ಎಸ್‌ಬಿಡಿ)– ಗಣರಾಜ್ಯೋತ್ಸವದ ಅಂಗವಾಗಿ ಮೈಸೂರಿನಿಂದ ಕೆಆರ್‌ಎಸ್‌ವರೆಗೆ ಸೈಕಲ್ ಜಾಥಾ ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ(ಕೆಎಸ್‌ಟಿಡಿಸಿ) ಹಾಗೂ ವಿವಿಧ ಸೈಕ್ಲಿಂಗ್ ಮತ್ತು ಸ್ಪೋರ್ಟ್ಸ್ ಕ್ಲಬ್‌ಗಳ ಸಹಯೋಗದಲ್ಲಿ ಆಯೋಜನೆಗೊಂಡಿದ್ದ ಸೈಕಲ್ ಜಾಥಾದಲ್ಲಿ ವೃತ್ತಿಪರ ಮತ್ತು ಯುವ ಹವ್ಯಾಸಿ ಸೈಕ್ಲಿಸ್ಟ್ ಗಳ ಜೊತೆಗೆ 18 ಮಹಿಳೆಯರು, ವಿದ್ಯಾರ್ಥಿಗಳು, ಕೆಲ ಹಿರಿಯ ನಾಗರಿಕರೂ ಸೇರಿದಂತೆ ಸುಮಾರು 75 ಸೈಕ್ಲಿಸ್ಟ್‌ಗಳು ಭಾಗವಹಿಸಿದ್ದರು. ಮಿಸ್ ಕರ್ನಾಟಕ ಮತ್ತು ಮಿಸ್ ಗ್ಲಾಮರಸ್ ಕ್ವೀನ್ ಆಫ್ ಇಂಡಿಯಾ–2021ರ ವಿಜೇತೆ ತನಿಷ್ಕಾ ಮೂರ್ತಿ ಅವರೂ ಸೈಕ್ಲಿಂಗ್‌ನಲ್ಲಿ ಭಾಗಿಯಾಗಿದ್ದು ವಿಶೇಷವಾಗಿತ್ತು.

ಮೈಸೂರಿನ ಜೆಎಲ್‌ಬಿ ರಸ್ತೆಯ ಕೆಎಸ್‌ಟಿಡಿಸಿ ಕಚೇರಿ ಬಳಿಯಿಂದ ಆರಂಭಗೊಂಡ ಸೈಕಲ್ ಜಾಥಾ, ಸುಮಾರು 18 ಕಿ.ಮೀ. ಕ್ರಮಿಸಿ ಕೆಆರ್‌ಎಸ್ ಬೃಂದಾವನ ಗಾರ್ಡನ್‌ನಲ್ಲಿ ಯಶಸ್ವಿಯಾಗಿ ಪೂರ್ಣಗೊಂಡಿತು. ಬಳಿಕ ಅಲ್ಲಿನ ಕೆಎಸ್‌ಟಿಡಿಸಿ ಆವರಣದಲ್ಲಿ ಧ್ವಜಾರೋಹಣ ನೆರವೇರಿಸಲಾಯಿತು. ಗಣರಾಜ್ಯೋತ್ಸವ ಅಂಗವಾಗಿ ನಡೆದ ಸೈಕಲ್ ಜಾಥಾ, ಮೈಸೂರು ಹಾಗೂ ಸುತ್ತಮುತ್ತಲ ಪ್ರವಾಸೋದ್ಯಮವನ್ನು ಉತ್ತೇಜಿಸುವುದರ ಜೊತೆಗೆ ಸಾರ್ವಜನಿಕರಲ್ಲಿ ಪರಿಸರ ಜಾಗೃತಿ ಮೂಡಿಸಿತು.

ಸೈಕಲ್ ಜಾಥಾಗೆ ಟಿವಿ–9 ವರದಿಗಾರ ರಾವ್ ಚಾಲನೆ ನೀಡಿದರು. ಈ ವೇಳೆ ಸಾರ್ವಜನಿಕ ಗ್ರಂಥಾಲಯಗಳ ಉಪ ನಿರ್ದೇಶಕ ಬಿ.ಮಂಜುನಾಥ್, ಮಿಸ್ ಕರ್ನಾಟಕ ತನಿಷ್ಕಾ ಮೂರ್ತಿ, ಮೈಸೂರು ಕೆಎಸ್‌ಟಿಡಿಸಿ ವ್ಯವಸ್ಥಾಪಕ ಆಶಿಶ್ ಮತ್ತಿತರರಿದ್ದರು. ಕೆಆರ್‌ಎಸ್ ಬೃಂದಾವನ ಗಾರ್ಡನ್ ಬಳಿ ಧ್ವಜಾರೋಹಣ ನೆರವೇರಿಸಿದ ಸಂದರ್ಭದಲ್ಲಿ ಅಲ್ಲಿನ ಕೆಎಸ್‌ಟಿಡಿಸಿ ಪ್ರಧಾನ ವ್ಯವಸ್ಥಾಪಕಿ ಇಂದಿರಮ್ಮ, ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ ಸಹಾಯಕ ಕಮಾಂಡರ್ ಪ್ರಮೋದ್, ನಿವೃತ್ತ ಡಿವೈಎಸ್ಪಿ ಮತ್ತು ಹಿರಿಯ ಸೈಕ್ಲಿಸ್ಟ್ ಧನಂಜಯ, ದೀಪಕ್ ಪತಂಗೆ, ಸಂತೋಷ್, ಅನಿಲ್, ಹೆಚ್.ಎಸ್.ದೀಪಕ್, ವೀಣಾ ಅಶೋಕ್, ಸೂರಜ್, ಲೋಕೇಶ್, ವಿನಯ್ ಸಿಂಗ್, ನಾಗರಾಜ್, ರಮೇಶ್ ನರಸಯ್ಯ ಮತ್ತಿತರರಿದ್ದರು.

ಭಾರತದಾದ್ಯಂತ 7 ದಿನಗಳಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆ ಜಾರಿ

ಕೇಂದ್ರ ಸಚಿವ ಶಾಂತನು ಠಾಕೂರ್ ಮಾಹಿತಿ



ಕೋಲ್ಕತ್ತಾ: ಮುಂದಿನ 7 ದಿನ ಗಳಲ್ಲಿ ದೇಶದಾದ್ಯಂತ ಪೌರತ್ವ (ತಿದ್ದುಪಡಿ) ಕಾಯ್ದೆಯನ್ನು ಜಾರಿಗೆ ತರಲಾಗುವುದು ಎಂದು ಕೇಂದ್ರ ಸಚಿವ ಮತ್ತು ಬಿಜೆಪಿ ನಾಯಕ ಶಾಂತನು ಠಾಕೂರ್ ಹೇಳಿದ್ದಾರೆ.

ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣದಲ್ಲಿ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಮುಂದಿನ ಏಳು ದಿನಗಳಲ್ಲಿ ಕೇವಲ ಪಶ್ಚಿಮ ಬಂಗಾಳದಲ್ಲಿ ಮಾತ್ರವಲ್ಲದೆ, ದೇಶದಾದ್ಯಂತ ಸಿಎಎ ಜಾರಿಗೆ ತರಲಾಗುವುದು ಎಂಬ ಗ್ಯಾರಂಟಿಯನ್ನು ನಾನು ನೀಡಬಲ್ಲೆ ಎಂದು ಹೇಳಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ತಮ್ಮ ಸಿಎಎ ಹೇಳಿಕೆಯಲ್ಲಿ ಹೇಳಿದ್ದನ್ನು ಬಂಗಾಳದ ಬಂಗಾವ್‌ನ ಬಿಜೆಪಿಯ ಲೋಕ ಸಭಾ ಸಂಸದ ಶಂತನೂ ಠಾಕೂರ್ ಪುನರುಚ್ಚರಿಸಿದ್ದಾರೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಸಿಎಎಯನ್ನು ಜಾರಿಗೆ ತರಲಿದೆ ಮತ್ತು ಅದನ್ನು ಯಾರೂ ತಡೆಯಲು ಸಾಧ್ಯವಿಲ್ಲ ಎಂದು ಅಮಿತ್ ಶಾ ಪ್ರತಿಪಾದಿಸಿದ್ದರು.

ಸಿಎಎಗೆ ತೀವ್ರ ವಿರೋಧ ವ್ಯಕ್ತ ಪಡಿಸಿರುವ ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆ ಮತ್ತು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಗುರಿಯಾಗಿಸಿ ಅವರ ಹೇಳಿಕೆ ಗಳು ಬಂದಿರುವುದು ವಿಶೇಷವಾಗಿದೆ.

ಈ ತಿಂಗಳ ಆರಂಭದಲ್ಲಿ ಸಿಎಎ ನಿಯಮಗಳು ಕೇಂದ್ರದೊಂದಿಗೆ ಸಿದ್ಧವಾಗಿವೆ ಮತ್ತು ಲೋಕಸಭೆ ಚುನಾವಣೆಯ ಘೋಷಣೆಗೆ ಬಹಳ ಮುಂಚೆ ಸೂಚನೆ ನೀಡಲಾಗುವುದು ಎಂದು ಅವರು ಹೇಳಿದ್ದಾರೆ.

ಅರ್ಜಿದಾರರು ಪ್ರಯಾಣ ದಾಖಲೆ ಗಳಿಲ್ಲದೆ ಭಾರತವನ್ನು ಪ್ರವೇಶಿಸಿದ ವರ್ಷವನ್ನು ಘೋಷಿಸಬೇಕಾಗುತ್ತದೆ. ಅರ್ಜಿದಾರರಿಂದ ಯಾವುದೇ ದಾಖಲೆಯನ್ನು ಕೇಳಲಾಗುವುದಿಲ್ಲ ಎಂದು ಮಾಹಿತಿ ನೀಡಿದ್ದಾರೆ.

CAUTION PUBLIC NOTICE

The General Public is hereby notify that, Our client has instituted a suit against 1) Sri Doddegowda, S/o late Patel Sathige Gowda, 68 years, 2) Smt. Sakamma, W/o Doddegowda, 60 years, 3) Sri Ashwath, S/o Doddegowda, 41 years, 4) Smt. Rekha, W/o Ashwath, 31 years, 5) Kumari Impana, D/o Ashwath & Rekha, 13 years,6) Master Pritam, S/o Ashwath & Rekha, 10 years, Since 5th & 6th are minor, represented by Next-friend-guardian-Father the 3rd above named, i.e., Sri Ashwath, 7) Sri Maalegowda, S/o Doddegowda, 31 years, 8) Smt. Soumya, W/o Maalegowda, 20 years, 9) Kumari Adya, D/o Maalegowda & Soumya -Since 9th is minor, represented by Next-friend-guardian-Father the 7th above named, i.e., Sri. Maalegowda, -1 to 9 are R/at Nagarthalli (Muganahundi) Village, Jayapura Hobli, Rayanakere Post, Mysuru- 570008, 10) Smt. Maalamma, W/o late Bodegowda, 65 years, 11) Sri Shivaraju, S/o late Bodegowda, 43 years, 12) Smt. Kamalamma, W/o Shivaraju, 35 years, 13) Sri Kaalegowda, S/o late Bodegowda, 40 years, 14) Basamma, W/o Kaalegowda, 32 years, -10 to 14 are R/at Nagarthalli (Muganahundi) Village, Jayapura Hobli, Rayanakere Post, Mysuru-570008, 15) Smt. Mayamma, W/o late Kaalegowda, 60years, 16) Kumari. Shivamma, D/o late Kaalegowda, 49 years, 17) Sri Raamu, S/o late Kaalegowda, 48years, 18)Smt. Jyothi, W/o Raamu, 37 years, 19) Sri Manu, S/o Raamu & Jyothi, 20years, 20) Kumari Anusha.R., D/o Raamu & Jyothi, 18 years, 21) Sri M.K. Yogananda, S/o late Kaalegowda, 45 years, 22) Smt. Geetha, W/o M.K.Yogananda, 35 years, 23) Kumari Harshitha. Y., D/o M.K. Yogananda & Geetha, 16 years, 24) Master Srujan. Y., S/o M.K.Yogananda & Geetha, 14 years, 25) Kumari Geetha, D/o Kaalegowda, 35 years, Since 23rd & 24th are minor, represented by Next-friend-guardian-Father of the 21st above named, i.e., Sri M.K. Yogananda, -15 to 25 are R/at Nagarthalli (Muganahundi) Village, Jayapura Hobli, Rayanakere Post, Mysuru-570008, 26) Sri Nagaraju, S/o late Patel Sathige Gowda, 73 years, 27) Smt. Sarojamma, W/o Nagaraju, 60 years, 28) Sri Basappa, S/o Nagaraju, 41 years, 29) Smt. Lakshmi, W/o Basappa, 33 years, 30) Kumari. Madhusri, D/o Basappa, & Lakshmi, 17 years, 31) Master Nakshath Gowda, S/o Basappa & Lakshmi, 15 years, Since 30th & 31st are minor, represented by Next-friend-guardian-Father the 28th above named, i.e., Sri Basappa, 32) Kumari Malathi, D/o Nagaraju, 38years, 33) Kumari. Manjula, D/o Nagaraju, 36 years, 34) Sri. Nagaraju.N., S/o Nagaraju, 34 years, 35) Smt. Bharathi, W/o Nagaraju, 24 years, 36) Master Maharth.N., S/o Nagaraju. N. & Bharathi, 04 years, Since 36th is minor, represented by Next-friend-guardian-Father the 34th above named, i.e., Sri.Nagaraju.N., -26th to 36th are R/at Nagarthalli (Muganahundi) Village, Jayapura Hobli, Rayanakere Post, Mysuru-570008, 37) Sri. Papanna, S/o late Patel Sathige Gowda, 65 years, 38) Smt. Kamalamma, W/o Papanna, 50 years, 39) Sri M.P. Jagadish, S/o Papanna, 36 years, 40) Smt. Mamatha, W/o M.P. Jagadish, 26 years, 41) Kumari. Chaitra, D/o M.P. Jagadish & Mamatha, 03 years, 42) Kumari Chaithanya.M.P., D/o Papanna, 33 years, Since 41st is minor, represented by Next- friend-guardian-Father the 39th above named, i.e., Sri.M.P.Jagadish, -37th to 42nd are R/at #245/2, Kanakagiri, Suyez Farm road, Vidyaranyapuram, Mysore-570008, for the relief of Specific Performance of Contract with respect to the Schedule 'A' and 'B' properties, in O.S.No. 78/2024 before the Hon'ble IV Addl. Senior Civil Judge and C.J.M at Mysuru, wherein the Hon'ble IV Addl.Senior Civil Judge and C.J.M at Mysuru, has granted Ad-interim Temporary injunction as against the said Defendants referred above on 16/01/2024.

The Public in General is hereby cautioned not to deal with Defendants no. 1 to 42 referred above with respect to the Schedule 'A' and 'B' Properties mentioned herein in any manner whatsoever, inspite of it, if any person/s enter into agreement / deeds or deal with him pertaining to schedule 'A' and 'B' Properties herein, he/ they will doing so entirely at his/their own cost and risks and the same party will be held liable for further course of action as per law and will be made necessary party and the said transaction will be void under law.

SCHEDULE PROPERTIES

SCHEDULE 'A' PROPERTY

Agricultural Land bearing Sy No.74/1, measuring 2 Acres 31 Guntas, situated at Nagarathalli Village, Jayapura Hobli, Mysuru Taluk, bounded on; East:- by Sy No. 36 of Railway Layout; West:- by Sy no.73 of Shivanna & Chikkamma; North:- by Sy No. 71 of Mahadevu; and South:- by Sy No. 74/3 of Maadegowda;

SCHEDULE 'B' PROPERTY

Agricultural Land bearing Sy.No. 32 measuring 0.05 Guntas, situated at Nagarathalli Village, Jayapura Hobli, Mysuru Taluk, bounded on; East:- by Sy.No. 31 of Railway Layout; West:- by Sy.No. 75 of Aramane Kavalu; North:- by Sy.No. 33 of Nithin Shivakumar; and South:- by Sy.No. 31 & 75 of Railway layout and Aramane Kavalu;

Sd/- H.P. DARSHAN SHETTY, H.P. GAGAN SHETTY
PRABHU ASSOCIATES, No. 1533, N.T. Street, K.R. Mohalla, Agrahara, Mysuru - 570 024. Mobile No. 9590807007.

Date: 29-01-2024
Place: Mysuru.

ಸ್ಥಾಪನೆ : 1916

ದಿ–ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿ.

ಶ್ರೀ ಹರ್ಷ ರಸ್ತೆ, ಮೈಸೂರು–570001, ದೂ.: 2520026

ಹರಾಜು ಮಾರಾಟ

2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯಡಿ ಮತ್ತು 2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ಅನ್ವಯ ಬ್ಯಾಂಕಿಗೆ ಆಧಾರ ಮಾಡಿರುವ ಸ್ಥಿರ ಸ್ವತ್ತುಗಳ ಬಹಿರಂಗ ಹರಾಜು ಮಾರಾಟ.

ಕ್ರ.ಸಂ.	ಸಾಲಗಾರರ ಹೆಸರು	ಬಾಕಿ ಇರುವ ಮೊಬಲಗು + ಅಸಲು+ಬಡ್ಡಿ+ಇತರೆ	ಮೀಸಲು ಬೆಲೆ ಲಕ್ಷ ರೂ.ಗಳಲ್ಲಿ	ಹರಾಜಿನ ದಿನಾಂಕ ಮತ್ತು ಸಮಯ	ಬ್ಯಾಂಕಿಗೆ ಆಧಾರವಾಗಿರುವ ಸ್ಥಿರಾಸ್ತಿಯ ಸ್ವತ್ತಿನ ವಿವರಗಳು
1	ಹೇಮಲತಾ.ಜಿ ಮತ್ತು ಜಲಜಾಕ್ಷಿ D/O ವೈ. ಗೋವಿಂದರಾಜು A/c.no 637427 ಮತ್ತು 63936	31,50,000	72,00,000	13.2.2024 ಬೆಳಿಗ್ಗೆ 11 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ ಸಿ.ಹೆಚ್.ಮೊಹಲ್ಲಾ, ಕೆ.ಆರ್.ವನಂ, 6ನೇ ಕ್ರಾಸ್, ಸೈಟ್ ನಂ 1500/1– ಸಿ.ಹೆಚ್.68/1, ಪೂ+ಪ 40ಅಡಿ, ದ+ಉ 60ಅಡಿ, ಪೂ–ಟಿ.ಎಸ್.ರಾಮರಾವ್ ಸ್ವತ್ತು, ಪ–ಅಶೋಕಪುರಂ ರಸ್ತೆ, ಉ–ಕನ್ಸರವೆನ್ಸಿ, ದಕ್ಷಿಣಕ್ಕೆ– 5ನೇ ಕ್ರಾಸ್
2	ಜಿ ಹೊಂಬಯ್ಯ ಮತ್ತು ಹೆಚ್ ಶಾಂತರಾಜು A/c. no 63957 ಮತ್ತು 637507	28,00,000	34,00,000	13.02.2024 ಮಧ್ಯಾಹ್ನ 3 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ತಾ॥ ಕಸಬಾ ಹೋ॥ ಕೊಪ್ಪಲೂರು ಹಳ್ಳಿ ಸರ್ವೆ ನಂ 59/2, ನಿವೇಶನ ಸಂಖ್ಯೆ 66 ಪೂ+ಪ $\frac{(9+15)}{2}$, ದ+ಉ $\frac{(12+12.40)}{2}$ ಪೂ–ರಸ್ತೆ, ಪ–ನಿವೇಶನ ಸಂಖ್ಯೆ–67, ಉತ್ತರಕ್ಕೆ ರಸ್ತೆ, ಪ–ಖಾಸಗಿ ಸ್ವತ್ತು
3	ಮೋಹನಕುಮಾರಿ W/O ಮಹದೇವ A/c.no 930 ಮತ್ತು 637480	9,10,000	15,00,000	14.2.2024 ಬೆಳಿಗ್ಗೆ 11 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ ನಜರಬಾದ್ ಚೆಟ್ಟಿಬೀದಿ, 2ನೇ ಕ್ರಾಸ್, 195/1ಎ, ಎನ್5/1, ಪೂ+ಪ–12.6 ಅಡಿ, ದ+ಉ 23.6ಅಡಿ, ಪೂ–ಇದೆ ಆಸ್ತಿಯ ಉಳಿಕೆ ಸ್ವತ್ತು, ಪ–ತಿಮ್ಮಣ್ಣ ರವರ ಆಸ್ತಿ, ಉ–ರಸ್ತೆ, ದ–ಮಾಕಯ್ಯನವರ ಸ್ವತ್ತು
4	ಎಂ.ಆರ್.ಜಯ ಪ್ರಕಾಶ್, ಎಂ.ಜಿ. ರಾಜನ್ ಎಂ.ಜಿ. ವೇಣು ಗೋಪಾಲ್, ಎಂ.ಜಿ.ಬಾಲಾಜಿ A/c.no 6321064 ಮತ್ತು 637456	19,50,000	27,00,000	14.02.2024 ಮಧ್ಯಾಹ್ನ 3 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ, ಚಾಮರಾಜ ಮೊಹಲ್ಲಾ, ಜಯನಗರ, ಕುವೆಂಪು ನಗರ 1ನೇ ಹಂತ, ಸಿಐಟಿಬಿ ಹುಡ್ಕೋ #309, ಪೂ+ಪ 3.70ಮೀ, ದ+ಉ.11ಮೀ, ಪೂ–EWS 310, ಪ–EWS 308, ಉ–ರಸ್ತೆ, ದ–EwS 300
5	ಎಸ್.ಕಿರಣ್ S/O ಜಿ.ಶಿವಕುಮಾರ್, A/c.no 632952 ಮತ್ತು 637469	10,20,000	31,00,000	15.2.2024 ಬೆಳಿಗ್ಗೆ 11 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ, ಕೆ.ಆರ್.ಮೊಹಲ್ಲಾ, ಸುಣ್ಣದ ಕೇರಿ, 5ನೇ ಕ್ರಾಸ್, #1181/ಎ, ಕೆ26/ಎ, ಪೂ+ಪ 23.5ಅಡಿ, ದ+ಉ–42ಅಡಿ, ಪೂ–ಖಾಸಗಿ ಸ್ವತ್ತು, ಪ–ಜವರಯ್ಯ ಮನೆ, ಉ–ರಸ್ತೆ, ದ–ಖಾಸಗಿ ಸ್ವತ್ತು
6	ಆರ್.ರವಿಕುಮಾರ್, ಮತ್ತು ನಳಿನಿ A/c. no 632986 ಮತ್ತು 637481	18,00,000	24,00,000	15.02.2024 ಮಧ್ಯಾಹ್ನ 3 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ, ಕೆ.ಆರ್.ಮೊಹಲ್ಲಾ, ಸುಣ್ಣದ ಕೇರಿ, 5ನೇ ಕ್ರಾಸ್, #1004, ಪೂ+ಪ–11ಅಡಿ, ದ+ಉ–11ಅಡಿ, ಪೂ+ಖಾಸಗಿ ಸ್ವತ್ತು, ಪ–ನೀಲಮ್ಮ ಮನೆ, ಉ–ಗಲ್ಲಿ, ದ–ರಸ್ತೆ
7	ಖಾಸಿಂ ಷರೀಫ್ S/o ಹುಸೇನ್ ಷರೀಫ್ ಅಮೀನ್ A/c.no 6321094 ಮತ್ತು 637454	23,50,000	37,00,000	16.02.2024 ಬೆಳಿಗ್ಗೆ 11 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ, ಲಷ್ಕರ್ ಮೊಹಲ್ಲಾ ಪಶ್ಚಿಮದ ಅಶೋಕ ರಸ್ತೆ, 19ನೇ ಕ್ರಾಸ್, ಮನೆ ನಂ 2150, ಎಲ್27, ಪೂ+ಪ 12.6 ಅಡಿ, ದ+ಉ 24.9ಅಡಿ, ಪೂ–ಮೆಹಬೂಬ್ ಖಾನ್ ಮನೆ, ಪ–ದಾವುದ್‌ಖಾನ್ ಮನೆ, ಉ–ಮೆಹಬೂಬಖಾನ್ ಮನೆ, ದ–ರಸ್ತೆ

ಹರಾಜಿನ ನಿಯಮ ಮತ್ತು ನಿಬಂಧನೆಗಳು

1. ಹರಾಜಿನಲ್ಲಿ ಭಾಗವಹಿಸುವವರು ರೂ. 25000 ಗಳನ್ನು ದಿ ಸಿಟಿ ಕೋ – ಆಪರೇಟಿವ್ ಬ್ಯಾಂಕ್ ಲಿ., ಮೈಸೂರು ಇವರ ಪರವಾಗಿ ಪಡೆದ ಡಿ.ಡಿ. ಅಥವಾ ನಗದು ರೂಪದಲ್ಲಿ ಠೇವಣಿಯಾಗಿ ಇಡಬೇಕು. ಹರಾಜಿನ ನಂತರ ಈ ಹಣವನ್ನು ಸ್ಥಳದಲ್ಲಿಯೇ ವಾಪಸ್ಸು ಪಡೆಯಬಹುದು.
2. ಹರಾಜಿನಲ್ಲಿ ಯಶಸ್ವಿಯಾದ ಬಿಡ್‌ದಾರರು ಅದೇ ದಿನ ಬಿಡ್ ಮೊಬಲಗಿನ ಶೇ. 25 ರಷ್ಟು ಹಣವನ್ನು ನಗದು ಅಥವಾ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಡಿ.ಡಿ. ಮೂಲಕ ಪಾವತಿಸಬೇಕು ಮತ್ತು ಉಳಿದ ಶೇ. 25 ರಷ್ಟು ಹಣವನ್ನು 15 ದಿನಗಳೊಳಗೆ ಸಂದಾಯ ಮಾಡಬೇಕಾಗಿರುತ್ತದೆ.
3. ಯಶಸ್ವಿಯಾದ ಬಿಡ್‌ದಾರರು ಕಾನೂನು / ಪ್ರಸಂಗಿಕ ಖರ್ಚು – ವೆಚ್ಚಗಳಾದ ಮುದ್ರಾಂಕ ಶುಲ್ಕ, ನೋಂದಣಿ ಶುಲ್ಕ, ನೀರು, ವಿದ್ಯುತ್ ಇತ್ಯಾದಿ ಎಲ್ಲವನ್ನೂ ತಾವೇ ಭರಿಸಬೇಕಾಗಿರುತ್ತದೆ.
4. ಸದರಿ ಹರಾಜು ಸ್ವತ್ತು ಹೇಗಿದೆಯೋ ಹಾಗೆಯೇ ಹರಾಜು ಮಾಡಲಾಗುತ್ತದೆ.
5. ಬ್ಯಾಂಕಿನ ಅಧಿಕೃತ ಅಧಿಕಾರಿಯವರು ಯಾವುದೇ ಕಾರಣ ನೀಡದೇ ಬಿಡ್‌ಅನ್ನು ಮುಂದೂಡುವ ಅಥವಾ ರದ್ದು ಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.
6. ಸ್ವತ್ತಿನ ಪರಿಶೀಲನೆ ಮತ್ತು ಹೆಚ್ಚಿನ ವಿವರಗಳಿಗಾಗಿ ಆಸಕ್ತ ಬಿಡ್‌ದಾರರು ಕೆಲಸದ ಯಾವುದೇ ದಿನದಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಹಾಗೂ ಸಾಯಂಕಾಲ 4.30 ಗಂಟೆಯಿಂದ 6.30 ಗಂಟೆಯವರೆಗೆ ಕಛೇರಿ ವೇಳೆಯಲ್ಲಿ ಅಧಿಕೃತ ಅಧಿಕಾರಿಯವರನ್ನು ಸಂಪರ್ಕಿಸಬಹುದು.

ದೂರವಾಣಿ : 2520026 / 2420829
ದಿನಾಂಕ: 29.01.2024 , ಸ್ಥಳ : ಮೈಸೂರು

ಸಹಿ/– ಅಧಿಕೃತ ಅಧಿಕಾರಿ
ದಿ ಸಿಟಿ ಕೋ – ಆಪರೇಟಿವ್ ಬ್ಯಾಂಕ್ ಲಿ., ಮೈಸೂರು

CHANGE OF NAME

I, Natesh P.U., residing at Door No. 105, 2nd Cross, 2nd Stage, Gayathripuram, Mysore-570 019, would like to correct my name from Natesh to Natesh P.U. on all relevant documents and I have obtained the affidavit in front of Notary C.R. Seetharam on 29-1-2024.

Sd/- Natesh P.U.